ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 24 ಶನಿವಾರ 2025

ಸಂಪುಟ: 46 | ಸಂಚಿಕೆ: 38

ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ:
2496520/21/26/27/28 ಜಾಹೀರಾತು:
2496522/23 ನಗರ ಕಚೇರಿಗಳು: ಕೆ.ಆರ್.ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774,
ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325,
ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com,
website: www.mysurumithra.com

ಮೈಸೂರು ಮಿತ್ರ ಶನಿವಾರ 24 ಮೇ 2025

ಹಾಸನ ಮಿತ್ರ

ತಾಳಿ ಕಟ್ಟುವ ವೇಳೆ ನಂಗೆ ಮದ್ವೆ ಬೇಡ ಎಂದ ವಧು!

ಪ್ರಿಯಕರನೊಂದಿಗೆ ವಿವಾಹವಾದ ಪಲ್ಲವಿ



ಪ್ರಿಯಕರ ರಘುವಿನೊಂದಿಗೆ ಪಲ್ಲವಿ ವಿವಾಹ

ಹಾಸನ, ಮೇ.23– ಸಿನಿಮಾ ದೃಶ್ಯದಂತೆ ತಾಳಿ ಕಟ್ಟುವ ವೇಳೆ ವಧು ಮದುವೆಯನ್ನೇ ನಿಲ್ಲಿಸಿದ ಘಟನೆ ಹಾಸನ ನಗರದಲ್ಲಿ ನಡೆದಿದೆ. ಹೈಡ್ರಾಮಾ ನಂತರ ಸಂಜೆ ವೇಳೆಗೆ ವಧು ಪಲ್ಲವಿ ಪ್ರಿಯಕರ ರಘುವಿನೊಂದಿಗೆ ಪೋಷಕರು ಆಕೆಗೆ ಮದುವೆ ಮಾಡಿಕೊಟ್ಟರು.

ಹಾಸನ ನಗರದ ಕಲ್ಯಾಣ ಮಂಟಪವೊಂದರಲ್ಲಿ ಈ ಯುವತಿಗೆ ಶಿಕ್ಷಕನ ಜೊತೆ ಮದುವೆ ಕಾರ್ಯ ನಡೆಯುತ್ತಿತ್ತು. ಮುಹೂರ್ತದ ವೇಳೆ ವಧು ಪಲ್ಲವಿಗೆ ಕರೆ ಬಂದಿದೆ. ಕರೆ ಬಂದ ಬೆನ್ನಲ್ಲೇ ಆಕೆ ನಾನು ಬೇರೆ ಹುಡುಗನನ್ನು ಪ್ರೀತಿಸುತ್ತಿದ್ದೇನೆ. ಈ ಮದುವೆ ಬೇಡ ಎಂದು ಕೊಠಡಿಗೆ ಹೋಗಿ ಬಾಗಿಲು ಹಾಕಿಕೊಂಡಿದ್ದಾಳೆ. ಯುವತಿಯ ಮನವೊಲಿಸಲು ಪೋಷಕರು ಶತಾಯಗತಾಯ ಪ್ರಯತ್ನಪಟ್ಟಿದ್ದಾರೆ. ವಿಚಾರ ತಿಳಿದು ಬಡಾವಣೆ ಹಾಗೂ ನಗರ ಠಾಣೆ ಪೊಲೀಸರು ಮಧ್ಯೆ ಪ್ರವೇಶಿಸಿ ಮಾತುಕತೆ ನಡೆಸಿದ್ದಾರೆ.

ಕಲ್ಯಾಣಮಂಟಪಕ್ಕೆ ವಧು–ವರನ ಕಡೆಯ ನೂರಾರು ಮಂದಿ ಆಗಮಿಸಿದ್ದರು. ಕಡೆ ಗಳಿಗೆಯಲ್ಲಿ ಮದುವೆ ನಿಂತು ಹೋಗಿದ್ದಕ್ಕೆ ವಧುವಿನ ಪೋಷಕರು ಕಣ್ಣೀರಿಟ್ಟಿದ್ದಾರೆ. ಯುವತಿ ಸ್ನಾತಕೋತ್ತರ ಪದವಿ ಓದಿದ್ದು, ಸದ್ಯ ಯಾವುದೇ ಉದ್ಯೋಗ ಮಾಡುತ್ತಿರಲಿಲ್ಲ. ಪ್ರೀತಿಸುವ ಹುಡುಗನ ಬಗ್ಗೆ ಸದ್ಯ ಯಾವುದೇ ವಿವರ ಲಭ್ಯವಾಗಿಲ್ಲ. ಯುವತಿ ಮದುವೆ ಬೇಡ ಎಂದು ಹಠ ಹಿಡಿದ ಕಾರಣ ಸರ್ಕಾರಿ ಶಾಲೆ ಶಿಕ್ಷಕನಾಗಿರುವ ವರನೂ ನನಗೂ ಮದುವೆ ಬೇಡ ಎಂದಿದ್ದಾನೆ.

ಮಾಧ್ಯಮದೊಂದಿಗೆ ವಧುವಿನ ಸಂಬಂಧಿ ಮಂಜುನಾಥ್ ಮಾತನಾಡಿ, ಯುವತಿ ಪೋಷಕರಿಗೆ ಪ್ರೀತಿಸುವ ವಿಚಾರವನ್ನು ತಿಳಿಸಿರಲಿಲ್ಲ. ಮೊದಲೇ ತಿಳಿಸಿದ್ದರೆ ಮದುವೆ ಮಾಡುತ್ತಿರಲಿಲ್ಲ. ಆಕೆಯ ಪೋಷಕರು ಶಾಕ್‌ನಲ್ಲಿ ಇದ್ದು ಮಾತನಾಡುವ ಸ್ಥಿತಿಯಲ್ಲಿ ಇಲ್ಲ. ಮದುವೆಗೆ ಬಹಳಷ್ಟು ಹಣ ಖರ್ಚು ಮಾಡಿದ್ದಾರೆ. ಈಗ ಪೊಲೀಸರ ಮೂಲಕ ಖರ್ಚು ವೆಚ್ಚಗಳ ಬಗ್ಗೆ ಮಾತುಕತೆ ನಡೆಸುತ್ತಿದ್ದಾರೆ ಎಂದು ತಿಳಿಸಿದರು. ಕೊನೆಗೆ ಪಲ್ಲವಿಯ ಪ್ರಿಯಕರ ರಘುವನ್ನು ಕರೆಸಿದ ಆಕೆಯ ಪೋಷಕರು ಆತನೊಂದಿಗೆ ಮದುವೆ ಮಾಡಿ ಕಳುಹಿಸಿಕೊಟ್ಟರು.

ಕಾಡಾನೆ ದಾಳಿಗೆ ಮಹಿಳೆ ಬಲಿ

ಹಾಸನ, ಮೇ.23– ಜಿಲ್ಲೆಯಲ್ಲಿ ಕಾಡಾನೆಗಳ ದಾಳಿಗೆ ಮತ್ತೊಂದು ಬಲಿಯಾಗಿದೆ. ಬೇಲೂರು ತಾಲೂಕಿನ ಅಂಕಿಹಳ್ಳಿ ಗ್ರಾಮದಲ್ಲಿ ಕಾಡಾನೆಗಳ ಗುಂಪೊಂದು ಮಹಿಳೆ ಮೇಲೆ ದಾಳಿ ಮಾಡಿದ್ದು, ಆನೆ ದಾಳಿಗೆ ಮಹಿಳೆ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಗಜೇಂದ್ರಪುರ ಗ್ರಾಮದ ಚಂದ್ರಮ್ಮ(45) ಕಾಡಾನೆ ದಾಳಿಗೆ ಮೃತಪಟ್ಟ ಮಹಿಳೆ. ಚಂದ್ರಮ್ಮ ಶುಕ್ರವಾರ ಬೆಳಗ್ಗೆ ಡಾ.ಕರುಣ್ ಎಂಬುವವರ ಕಾಫಿ ತೋಟದ ಕೆಲಸಕ್ಕೆ ಬಂದಿದ್ದರು. ಒಟ್ಟು ಹನ್ನೆರಡು ಮಂದಿ ಮಹಿಳೆಯರು ತೋಟಕ್ಕೆ ತೆರಳುತ್ತಿದ್ದ ವೇಳೆ ಏಕಾಏಕಿ ಐದು ಕಾಡಾನೆಗಳು ದಾಳಿ ಮಾಡಿವೆ.

ಈ ವೇಳೆ ಎಲ್ಲರೂ ದಿಕ್ಕಾಪಾಲಾಗಿ ಓಡಿದ್ದು ಚಂದ್ರಮ್ಮ ಕಾಡಾನೆಗೆ ಸಿಲುಕಿಕೊಂಡಿದ್ದರು. ಚಂದ್ರಮ್ಮನನ್ನು ಸೊಂಡಿಲಿನಿಂದ ಎತ್ತಿ ಬಿಸಾಡಿದ ಆನೆ ಕಾಲಿನಿಂದ ತುಳಿದು ಭೀಕರವಾಗಿ ಸಾಯಿಸಿದೆ. ಸ್ಥಳಕ್ಕೆ ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸ್ಥಳಕ್ಕೆ ಜಿಲ್ಲಾಧಿಕಾರಿ ಸಿ.ಸತ್ಯಭಾಮ, ಎಸ್ಪಿ ಮಹಮದ್ ಸುಜೇತಾ, ಸಿಸಿಎಫ್ ಏಡುಕುಂಡಲ, ಡಿಎಫ್‌ಓ ಸೌರಭ್‌ಕುಮಾರ್ ಆಗಮಿಸಿ ಪ್ರತಿಭಟನಾಕಾರರ ಸಮಸ್ಯೆಗಳನ್ನು ಆಲಿಸಿದರು. ಕಾಡಾನೆ ಹಾವಳಿ ತಪ್ಪಿಸಲು ಸಾಕಷ್ಟು ಕ್ರಮ ಕೈಗೊಳ್ಳುತ್ತೇವೆ ಎಂದು ಭರವಸೆ ನೀಡಿ ಮೃತರ ಕುಟುಂಬಕ್ಕೆ 20 ಲಕ್ಷ ರೂ. ಪರಿಹಾರದ ಚೆಕ್ ವಿತರಿಸಿದರು.

ಮೈಸೂರಲ್ಲಿ ಮಾವು, ಹಲಸಿನ ಹಣ್ಣು ಮೇಳ

ಹಸಿದು ಹಲಸು; ಉಂಡು ಮಾವು ತಿನ್ನಲು ಮುಗಿಬೀಳುತ್ತಿರುವ ಫಲಪ್ರಿಯರು



ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ತೋಟಗಾರಿಕಾ ಇಲಾಖೆ ಆಯೋಜಿಸಿರುವ ಮಾವು ಮೇಳಕ್ಕೆ ಶಾಸಕ ಕೆ.ಹರೀಶ್‌ಗೌಡ ಚಾಲನೆ ನೀಡಿ, ಮಾವಿನಹಣ್ಣನ್ನು ಪರಿಶೀಲಿಸುತ್ತಿರುವುದು.

ಮೈಸೂರು,ಮೇ 23(ಎಂಟಿವೈ)– ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ಮೂರು ದಿನ ಮಾವು ಹಾಗೂ ಹಲಸಿನ ಹಣ್ಣಿನ ಮೇಳ ಆರಂಭವಾಗಿದ್ದು, ಮೊದಲ ದಿನವೇ ಅಪಾರ ಸಂಖ್ಯೆಯ ಗ್ರಾಹಕರು ವಿವಿಧ ತಳಿಯ ಮಾವಿನ ಹಣ್ಣು ಖರೀದಿಸಿ ಆಸ್ವಾದಿಸಿದರು.

ತೋಟಗಾರಿಕಾ ಇಲಾಖೆ ಆಯೋಜಿಸಿರುವ ಮಾವು ಮೇಳಕ್ಕೆ ಇಂದು ಬೆಳಗ್ಗೆ ಶಾಸಕ ಕೆಹರೀಶ್ ಗೌಡ ಚಾಲನೆ ನೀಡಿದರು. ಮಾವು ಮೇಳದಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ, ಧಾರವಾಡ, ಕೊಪ್ಪಳ, ಕೋಲಾರ, ರಾಮನಗರ ಸೇರಿದಂತೆ ವಿವಿಧೆಡೆಗಳಿಂದ ಆಗಮಿಸಿರುವ ಮಾವು ಬೆಳೆಗಾರರು 48 ಮಳಿಗೆಗಳಲ್ಲಿ ವಿವಿಧ ತಳಿಯ ಮಾವು ಹಾಗೂ ಹಲಸಿನ ಹಣ್ಣು ಮಾರಾಟ ಮಾಡುವ ಮೂಲಕ ಗ್ರಾಹಕರ ನಾಲಿಗೆ ತಣಿಸುತ್ತಿದ್ದಾರೆ.

ಪ್ರತಿ ವರ್ಷದಂತೆ ಈ ಬಾರಿಯೂ ಮಾವು ಮೇಳದಲ್ಲಿ ನೈಸರ್ಗಿಕ ವಿಧಾನದಲ್ಲೇ ಮಾಗಿಸಿರುವ ಮಾವಿನ ಹಣ್ಣುಗಳನ್ನೇ ಮಾರಾಟ ಮಾಡಲಾಗುತ್ತಿದೆ. ರಾಸಾಯನಿಕ ಪದಾರ್ಥ ಬಳಸಿ ಹಣ್ಣು ಮಾಡಿದ ಹಣ್ಣುಗಳ ಮಾರಾಟಕ್ಕೆ ಕಡಿವಾಣ ಹಾಕಲಾಗಿದೆ. ಒಂದೇ ಸೂರಿನಡಿ ವಿವಿಧ ಬಗೆಯ ಮಾವಿನ ಹಣ್ಣುಗಳು ಮೇಳದಲ್ಲಿ ಲಭ್ಯವಿದ್ದು, ಗ್ರಾಹಕರು ತಮಗೆ ಇಷ್ಟ ಬಂದ ತಳಿಯ ಮಾವಿನ ಹಣ್ಣನ್ನು ಖರೀದಿಸಲು ಮುಗಿ ಬಿದ್ದಿದ್ದಾರೆ.

ಮಾವು ಮೇಳದಲ್ಲಿ ಹಲಸಿನ ಘಮಲು: ಮಾವು ಮೇಳದಲ್ಲಿ ಹಲಸಿನ ಹಣ್ಣುಗಳನ್ನು ಮಾರಾಟ ಮಾಡಲಾಗುತ್ತಿದೆ. ಸಿದ್ದು ಹಲಸು, ಚಂದ್ರ ಹಲಸು, ಶಿವರಾತ್ರಿ ಹಲಸು ಸೇರಿದಂತೆ ವಿವಿಧ ತಳಿಗಳ ಹಲಸಿನ ಹಣ್ಣುಗಳನ್ನು ರೈತರು ತಂದು ಮಾರಾಟ ಮಾಡುತ್ತಿದ್ದಾರೆ.

ದರದಲ್ಲಿ ಅಸಮಾದಾನ: ಮೇಳದಲ್ಲಿ ಹಾಪ್‌ಕಾಮ್ಸ್ ದರದಲ್ಲಿ ಮಾವಿನಹಣ್ಣನ್ನು ಮಾರಾಟ ಮಾಡುವಂತೆ ಮಾವು ಬೆಳೆಗಾರರಿಗೆ ಸೂಚಿಸಿ, ಹಣ್ಣಿನ ದರ ನಿಗಧಿ ಮಾಡಲಾಗಿತ್ತು. ಆದರೆ, ಮೈಸೂರು ಮತ್ತು ಬೆಂಗಳೂರು ಹಾಪ್‌ಕಾಮ್ಸ್ ದರದಲ್ಲಿ ವ್ಯತ್ಯಾಸವಿರುವುದರಿಂದ ಮೇಳದಲ್ಲಿ ಭಾಗವಹಿಸಿದ್ದ ಮಾವು ಬೆಳೆಗಾರರು ದರದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಮಾರಾಟ ಮಾಡಲು ನಿರಾಕರಿಸಿದರು. ಅಲ್ಲದೆ, ದರ ಹೆಚ್ಚಿಸುವಂತೆ ಮನವಿ ಮಾಡಿದರು. ಈ ವೇಳೆ ತೋಟಗಾರಿಕಾ ಇಲಾಖೆಯ ಅಧಿಕಾರಿಗಳು ಚರ್ಚಿಸಿ, ಬೆಂಗಳೂರು ಮತ್ತು ಮೈಸೂರು ಹಾಪ್‌ಕಾಮ್ಸ್ ದರ ಪರಿಶೀಲಿಸಿದ ಬಳಿಕ ಮಾವು ಬೆಳೆಗಾರರ ಮನವೊಲಿಸಿ, ದರದಲ್ಲಿ ಸ್ವಲ್ಪ ಹೆಚ್ಚಳ ಮಾಡಿದರು. ನಂತರ ಎಲ್ಲಾ ಮಾರಾಟಗಾರರು ಒಪ್ಪಿಗೆ ಸೂಚಿಸಿದರು.

ಸಸ್ಯಸಂತೆ: ಕುಪ್ಪಣ್ಣ ಪಾರ್ಕ್‌ನಲ್ಲಿ ಮಾವು ಮೇಳದಲ್ಲಿ ತೋಟಗಾರಿಕಾ ಇಲಾಖೆಯ ವಿವಿಧ ಸಸ್ಯಕ್ಷೇತ್ರಗಳಲ್ಲಿ ಬೆಳೆದ ಹೂವು, ಹಣ್ಣು ಹಾಗೂ ಅಲಂಕಾರಿಕಾ ಗಿಡಗಳನ್ನು ಮಾರಾಟ ಮಾಡಲಾಗುತ್ತಿದೆ. ಮೇಳಕ್ಕೆ ಬರುವ ಗ್ರಾಹಕರು ಮಾವು, ಹಲಸಿನ ಹಣ್ಣಿನೊಂದಿಗೆ ವಿವಿಧ ಗಿಡ ಖರೀದಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ತೋಟಗಾರಿಕಾ ಇಲಾಖೆಯ ಜಂಟಿ ನಿರ್ದೇಶಕ ನಾಗರಾಜು, ಉಪನಿರ್ದೇಶಕ ಮಂಜುನಾಥ್ ಅಂಗಡಿ, ಸಹಾಯಕ ನಿರ್ದೇಶಕರಾದ ಮಮತಾ, ನವೀನ್, ಸುವೇಧ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

> ರೈತರಿಂದ ನೇರವಾಗಿ ಗ್ರಾಹಕರಿಗೆ ವಿವಿಧ ತಳಿಯ ಮಾವಿನ ಹಣ್ಣನ್ನು ಒಂದೇ ಸೂರಿನಡಿ ಮಾರಾಟ ಮಾಡಲು ಮಾವು ಮೇಳ ಸಹಕಾರಿಯಾಗಿದೆ. ತೋಟಗಾರಿಕಾ ಇಲಾಖೆ ಮಾವು, ಹಲಸು ಮೇಳ ಆಯೋಜಿಸಿರುವುದರಿಂದ ಮೈಸೂರಿನ ಜನರಿಗೆ ಸಹಕಾರಿಯಾಗಿದೆ. ಇಂತಹ ಮೇಳಗಳು ಹೆಚ್ಚಿನ ಸಂಖ್ಯೆಯಲ್ಲಿ ಆಯೋಜಿಸಿದರೆ ರೈತರಿಗೆ ಮತ್ತು ಗ್ರಾಹಕರಿಗೆ ಒಳ್ಳೆಯದಾಗುತ್ತದೆ. ಮೇಳದಲ್ಲಿ ವಿವಿಧ ತಳಿಯ ಮಾವು ಮತ್ತು ಹಲಸಿನ ಹಣ್ಣು ಮಾರಾಟಕ್ಕಿಡಲಾಗಿದೆ.
>
> – ಕೆ.ಹರೀಶ್‌ಗೌಡ, ಶಾಸಕ

ಮಾವಿನ ಹಣ್ಣಿನ ದರ

ಮೇಳದಲ್ಲಿ ಎಲ್ಲಾ ಮಳಿಗೆಗಳ ಮುಂದೆ ಮಾವಿನ ಹಣ್ಣುಗಳ ದರದ ಪಟ್ಟಿ ಪ್ರದರ್ಶಿಸಲಾಗಿದ್ದು, ಒಂದು ಕೆಜಿ ಬಾದಾಮಿ 130 ರೂ., ರಸಪುರಿ 90 ರೂ., ಮಲ್ಲಿಕಾ 145 ರೂ., ಸಿಂಧೂರ 55 ರೂ., ತೋತಾಪುರಿ 30 ರೂ., ಮಲಗೋವ 230 ರೂ., ಬಾಗನಪಲ್ಲಿ 70 ರೂ., ಹಿಮಾಮ್ ಪಸಂದ್ 220 ರೂ., ವಾಲಜ 120 ರೂ., ಕೇಸರ್ 180 ರೂ., ದಶೇರಿ 150 ರೂ., ದಿಲ್ ಪಸಂದ್ 120 ರೂ. ದರ ನಿಗಧಿ ಮಾಡಲಾಗಿದೆ.

ಸ್ವಾವಲಂಬಿ ಬದುಕಿಗೆ ಸಹಕಾರ ಕ್ಷೇತ್ರ ಸಾಕಾರವಾಗಿದೆ: ಯುವಜನತೆಗೆ ಶಾಸಕ ಜಿಟಿಡಿ ಕಿವಿಮಾತು



ಶಾಸಕ ಜಿ.ಟಿ.ದೇವೇಗೌಡರು, ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಶಿಕ್ಷಣದ ಪ್ರಮಾಣಪತ್ರ ವಿತರಿಸಿದರು.

ಬೆಂಗಳೂರು, ಮೇ 23– ಜನಸಾಮಾನ್ಯರ ಸ್ವಾವಲಂಬಿ ಬದುಕಿಗೆ ನೆರವಾಗಿರುವ ಸಹಕಾರ ಕ್ಷೇತ್ರದಲ್ಲಿ ಯುವಜನತೆ ಹೆಚ್ಚು ಸಕ್ರಿಯವಾಗಬೇಕು ಎಂದು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರೂ ಆದ ಹಿರಿಯ ಶಾಸಕ ಜಿ.ಟಿ.ದೇವೆಗೌಡರು ಸಲಹೆ ನೀಡಿದರು.

ಬೆಂಗಳೂರು ಸಹಕಾರ ತರಬೇತಿ ಕೇಂದ್ರದ ಸಹಯೋಗದಲ್ಲಿ ಸಹಕಾರ ಮಹಾಮಂಡಳದ ಸಭಾಂಗಣದಲ್ಲಿ 'ಅಂತಾರಾಷ್ಟ್ರೀಯ ಸಹಕಾರ ವರ್ಷ–2025' ಕಾರ್ಯಕ್ರಮದಡಿ ಯುವಜನರಿಗೆ ಏರ್ಪಡಿಸಿದ್ದ ಸಹಕಾರ ಕ್ಷೇತ್ರ ಕುರಿತ ಜಾಗೃತಿ ಕಾರ್ಯಕ್ರಮ ಹಾಗೂ ವಿದ್ಯಾರ್ಥಿಗಳ ಪ್ರಾಯೋಗಿಕ ಶಿಕ್ಷಣದ ಪ್ರಮಾಣಪತ್ರ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು.

ಸಹಕಾರ ಸಂಘಗಳು ಜನಸಾಮಾನ್ಯರ ಸ್ವಾವಲಂಬಿ ಜೀವನಕ್ಕೆ ನೆರವಾಗಿವೆ. ಈ ಮೂಲಕ ದೇಶದ ಆರ್ಥಿಕ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿವೆ. ಆದ್ದರಿಂದ ಯುವಜನರು ಸಹಕಾರ ಕ್ಷೇತ್ರದ ಬಗ್ಗೆ ತಿಳಿದುಕೊಂಡು ಮುಂಬರುವ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಮೂಲಕ ಸಹಕಾರ ರಂಗವನ್ನು ಯಶಸ್ವಿಯಾಗಿ ಮುನ್ನಡೆಸಬೇಕು ಎಂದು ಹೇಳಿದರು.

ಉದ್ಯೋಗ ಸೃಷ್ಟಿ, ಆರ್ಥಿಕತೆ ಹಾಗೂ ಉದ್ಯಮಶೀಲತೆಯಲ್ಲಿ ಸಹಕಾರ ಕ್ಷೇತ್ರದ ಪಾತ್ರ ಮಹತ್ವಪೂರ್ಣವಾದುದು. ಸರ್ಕಾರಿ ಹಾಗೂ ಖಾಸಗಿ ವಲಯದ ಪ್ರಭಾವದ ನಡುವೆ ಸ್ಪರ್ಧಾತ್ಮಕವಾಗಿ ಬೆಳೆಯುತ್ತಿರುವ ಈ ವಲಯದಲ್ಲಿ ತೊಡಗಿಸಿಕೊಂಡರೆ ಯುವಜನರಿಗೆ ಉತ್ತಮ ಭವಿಷ್ಯವಿದೆ. ಪರಿಶ್ರಮದೊಂದಿಗೆ ಉತ್ತಮ ಸಂಸ್ಕೃತಿ ಹಾಗೂ ನೈತಿಕ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡರೆ ತಮ್ಮ ಬದುಕು ಸುಂದರ ಹಾಗೂ ಸಾರ್ಥಕವಾಗುತ್ತದೆ ಎಂದು ಕಿವಿಮಾತು ಹೇಳಿದರು.

ನೂರು ವರ್ಷಗಳ ಸಾರ್ಥಕ ಸೇವೆಯೊಂದಿಗೆ ಮುನ್ನಡೆಯುತ್ತಿರುವ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ಪರಿಣಾಮಕಾರಿ ಸಹಕಾರ ಶಿಕ್ಷಣ, ತರಬೇತಿ, ಇನ್ನಿತರ ಕಾರ್ಯಕ್ರಮಗಳ ಮೂಲಕ ಯುವಜನ ಹಾಗೂ ಮಹಿಳೆಯರನ್ನು ಸಹಕಾರಿ ಕ್ಷೇತ್ರದತ್ತ ಸೆಳೆಯಬೇಕಿದೆ. ಸಹಕಾರ ಕ್ಷೇತ್ರ ಇಂದು ಜೀವನದ ಒಂದು ಭಾಗವಾಗಿದೆ. ಮಹಾತ್ಮ ಗಾಂಧೀಜಿ ಹಾಗೂ ಪಂಡಿತ ಜವಾಹರಲಾಲ್ ನೆಹರು ಅವರು ಸಹಕಾರ ಕ್ಷೇತ್ರಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿದ್ದರಿಂದ ಭಾರತದ ಸಹಕಾರ ಚಳವಳಿ ವಿಶ್ವದಲ್ಲಿಯೇ ಅಗ್ರಸ್ಥಾನದಲ್ಲಿದೆ ಎಂದು ಸ್ಮರಿಸಿಕೊಂಡರು.

ರಾಜ್ಯದ ರೈತರ ಬದುಕನ್ನು ಹಸನಾಗಿಸುವಲ್ಲಿ ಸಹಕಾರ ಕ್ಷೇತ್ರ ಪ್ರಮುಖ ಪಾತ್ರ ವಹಿಸುತ್ತಿದೆ. ಹಾಗೆಯೇ ಪಟ್ಟಣ ಸಹಕಾರ ಬ್ಯಾಂಕುಗಳು ಜನಸಾಮಾನ್ಯರ ಬದುಕಿಗೆ ಆಸರೆಯಾಗಿವೆ. ಹೈನುಗಾರಿಕಾ ವಲಯ ಮಹಿಳೆಯರು ಸ್ವಾವಲಂಬಿ ಬದುಕಿಗೆ ಉತ್ತೇಜನ ನೀಡುತ್ತಿದೆ. ರೈತರು ತಾವು ಬೆಳೆದ ಬೆಳೆಗಳಿಗೆ ತಾವೇ ಬೆಲೆ ನಿಗದಿಪಡಿಸುವಂತಾಗಬೇಕು ಎಂದರು.

ಇದೇ ವೇಳೆ ವಿದ್ಯಾರ್ಥಿಗಳ ಪ್ರಾಯೋಗಿಕ ಶಿಕ್ಷಣದ ಪ್ರಮಾಣಪತ್ರ ಪ್ರದಾನ ಮಾಡಿ, ಅಭಿನಂದಿಸಿದರು. ರಾಜಾಜಿನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊಫೆಸರ್ ಶ್ರೀಮಂತ್ ಎಫ್.ತಂಗಡಿ, ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಸ್.ನವೀನ್ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಮೇ 24 ಶನಿವಾರ 2025

₹4

ಸಂಪುಟ: 46 | ಸಂಚಿಕೆ: 38 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ನಕ್ಕರೆ ಅದೇ ಸ್ವರ್ಗ

ಮಗ : ಅಪ್ಪಾ ಇಲ್ಲಿ ಬಾ
ಅಮ್ಮ : ಮಗೂ ಅಪ್ಪನನ್ನು ಹಾಗೆಲ್ಲಾ ಕರೆಯಬಾರದು. ಮರ್ಯಾದೆಯಿಂದ ಕರೆಯಬೇಕು. ತಿಳೀತಾ?
ಮಗ : ಅಪ್ಪಾ... ಮರ್ಯಾದೆಯಿಂದ ಇಲ್ಲಿ ಬಾ!

ಮೈಸೂರು ಮಿತ್ರ

ಶನಿವಾರ, 24 ಮೇ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*


ಅಮೃತ ವಾಹಿನಿ..........

ಜೀವನ ಇರುವುದೇ ಎರಡು ದಿನ. ಒಂದು ನಿನ್ನ ಪರವಾದ ದಿನ. ಮತ್ತೊಂದು ನಿನ್ನ ವಿರುದ್ಧವಾದ ದಿನ. ಪರವಾದ ದಿನದಲ್ಲಿ ಅಹಂಕಾರ ತೋರಿಸಬೇಡ. ವಿರುದ್ಧವಾದ ದಿನದಲ್ಲಿ ತಾಳ್ಮೆ ಕಳೆದುಕೊಳ್ಳಬೇಡ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸ್ವಾರ್ಥ ಉಳಿಸಿದವ ಪಾಪಾತ್ಮ, ನಿಸ್ವಾರ್ಥ ಗಳಿಸಿದವ ಪುಣ್ಯಾತ್ಮ.

ನಿಮ್ಮ ಪತ್ರಗಳು

■ ಮೈಸೂರಲ್ಲಿ 2 ಬೃಹತ್ ಅಶ್ವತ್ಥ ವೃಕ್ಷಗಳನ್ನು ಧರೆಗುರುಳಿಸುವ ಸಂಚು !!





ಮಾನ್ಯರೆ,

ಪ್ರಕೃತಿಯನ್ನು ಕಾಪಾಡಬೇಕಾದ ಅರಣ್ಯ ಇಲಾಖೆ ಮತ್ತು ಮಹಾನಗರ ಪಾಲಿಕೆಗಳು ಸದ್ದಿಲ್ಲದೇ ದುಷ್ಟ ಶಕ್ತಿಗಳೊಂದಿಗೆ ಸಂಚು ರೂಪಿಸಿ ರಾತ್ರೋ ರಾತ್ರಿ ಮೈಸೂರಿನ ಎಸ್‌ಪಿ ಕಚೇರಿ ಬಳಿ ಹಳೆಯದಾದ 40ಕ್ಕೂ ಅಧಿಕ ಬೃಹತ್ ಮರಗಳ ವ್ಯವಸ್ಥಿತ ಮಾರಣ ಹೋಮವನ್ನು ಇತ್ತೀಚೆಗಷ್ಟೇ ಯಶಸ್ವಿಯಾಗಿ ಪೂರೈಸಿತು.

ಮೊನ್ನೆ ಲಲಿತಮಹಲ್ ರಸ್ತೆಯಲ್ಲಿ ಸಮರ್ಪಕ ಪೋಷಣೆಯಿಲ್ಲದ ಮರವೊಂದರ ಬೇರು ಸಡಿಲವಾಗಿ ಧರೆಗುರುಳಿತು. ಅದೃಷ್ಟವಶಾತ್ ಬೈಕ್ ಸವಾರ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ದುಷ್ಟ ಶಕ್ತಿಗಳ ಜತೆ ಸರ್ಕಾರಿ ಇಲಾಖೆಗಳು ಕೈ ಜೋಡಿಸಿ ಇಂತಹ ಹಲವು ಕುತಂತ್ರ ಕೆಲಸಗಳನ್ನು ಮೈಸೂರಿನಲ್ಲಿ ವ್ಯವಸ್ಥಿತವಾಗಿ ಸದ್ದಿಲ್ಲದೇ ಮಾಡುತ್ತಿರುವುದು ಗುಟ್ಟಾಗಿ ಉಳಿದಿಲ್ಲ.

ಅದರಂತೆ, ಮೈಸೂರಿನ ಹೃದಯಭಾಗ ಡಿ.ದೇವರಾಜ ಅರಸು ರಸ್ತೆಯ (ಸಂಗೀತಾ ಶೋ ರೂಂ ಎದುರು) ಏಕೈಕ ದೊಡ್ಡದಾದ ಅಶ್ವತ್ಥ ವೃಕ್ಷದ ಬುಡದ ಸುತ್ತಲೂ ಬೇರಿಗೆ ಒಂದು ಹನಿ ನೀರೂ ಇಳಿಯದಂತೆ ಸಿಮೆಂಟ್‌ನಿಂದ ಮುಚ್ಚಲಾಗಿದೆ. ಈ ವೃಕ್ಷದಿಂದ ಅಂಗಡಿಗಳು, ಗ್ರಾಹಕರಿಗೆ ಕಾಣಿಸುವುದಿಲ್ಲವಾದ್ದರಿಂದ, ಒಂದೇ ಬಾರಿ ಕಡಿಯಲು ಹೋದರೆ ಸಾರ್ವಜನಿಕರ ವಿರೋಧ ಎದುರಿಸಬೇಕಾಗುತ್ತದೆ. ಹಾಗಾಗಿ, ಕಾಲಕ್ರಮೇಣ ನೀರಿಲ್ಲದೇ ಒಣಗುವ ಮರ ಸ್ವಯಂ ಉರುಳಲಿ ಎಂಬ ದುರುದ್ದೇಶದಿಂದ ದುಷ್ಟ ಶಕ್ತಿಗಳು ಇಂತಹ ನೀಚ ಕಾರ್ಯ ಮಾಡಿದ್ದಾರೆ.

ಇದೇ ವೃಕ್ಷದ ಕೆಳಗೆ ಆಟೋ ಸ್ಟ್ಯಾಂಡ್ ಇದ್ದು, ಬಿಸಿಲಿನ ಝಳಕ್ಕೆ ಎಲ್ಲರೂ ಇಲ್ಲೇ ವಿಶ್ರಾಂತಿ ಪಡೆಯುತ್ತಾರೆ. ಆದರೆ, ಹಲವು ಸಮಾಜ ಸೇವಾ ಕಾರ್ಯಗಳನ್ನು ಮಾಡುವ ಆಟೋ ಡ್ರೈವರ್‌ಗಳ್ಯಾರೂ ಅಶ್ವತ್ಥ ವೃಕ್ಷದ ಗೋಳಿನ ಬಗ್ಗೆ ತಲೆಕೆಡಿಸಿಕೊಂಡಿಲ್ಲದಿರುವುದು ವಿಪರ್ಯಾಸ. ಪರಿಸರವಾದಿಗಳು, ಹೋರಾಟಗಾರರು, ಗಣ್ಯರು, ಅತಿ ಗಣ್ಯರು ಸೇರಿ ಸಾವಿರಾರು ಮಂದಿ ವೃಕ್ಷದ ಬದಿಯಲ್ಲೇ ಓಡಾಡಿದರೂ ಯಾರ ಕಣ್ಣಿಗೂ ಈ ವೃಕ್ಷದ ನೋವು ಕಾಣಿಸಿಲ್ಲ !

ಇನ್ನು ನಜರ್‌ಬಾದ್ ಮುಖ್ಯ ರಸ್ತೆಯ (ನಂದಿನಿ ಡೇರಿ ಬಳಿ) ಶ್ರೀ ಮಹದೇಶ್ವರ ದೇವಾಲಯ ಆವರಣದಲ್ಲಿ ಬೃಹತ್ ಅಶ್ವತ್ಥ ವೃಕ್ಷವೊಂದು ನಳನಳಿಸುತ್ತಿದೆ. ಈ ರಸ್ತೆಯ ಅಗಲೀಕರಣ ಮಾಡಲು, ಅಶ್ವತ್ಥ ವೃಕ್ಷ ಮತ್ತು ದೇವಾಲಯವನ್ನು ತೆರವು ಮಾಡುವ ದುರುದ್ದೇಶದಿಂದ ಇಲ್ಲಿಯೂ ವೃಕ್ಷದ ಬುಡದ ಸುತ್ತಲೂ ದಪ್ಪ ಕಲ್ಲುಗಳನ್ನು ತುಂಬಿ, ಹನಿ ನೀರು ಬೇರಿಗೆ ಇಳಿಯದಂತೆ ಸಿಮೆಂಟ್‌ನಿಂದ ಮುಚ್ಚಲಾಗಿದೆ. ಇದರಿಂದ ಈಗಾಗಲೇ ವೃಕ್ಷದ ಕಾಂಡದ ಒಂದು ಪಾರ್ಶ್ವ ಸಂಪೂರ್ಣ ಹಾಳಾಗಿದೆ. ಕ್ರಮೇಣ ಪೂರ್ತಿ ಮರ ಹಾಳಾಗಿ ಧರೆಗೆ ಸ್ವಯಂ ಉರುಳಲಿ ಎಂದು ದುಷ್ಟ ಶಕ್ತಿಗಳು ಅದೇ ನೀಚ ಕೃತ್ಯವನ್ನು ಇಲ್ಲಿಯೂ ಪುನರಾವರ್ತನೆ ಮಾಡಿದ್ದಾರೆ. ಪ್ರತಿನಿತ್ಯ ಇಲ್ಲಿಗೆ ಬರುವ ಸಾವಿರಾರು ಭಕ್ತರು ದೇವರಿಗೆ ಭಕ್ತಿಭಾವದಿಂದ ಕೈ ಮುಗಿಯುತ್ತಾರೆಯೇ ವಿನಾ ಅಶ್ವತ್ಥ ವೃಕ್ಷದ ನೋವಿಗೆ ಸ್ಪಂದಿಸದಿರುವುದು ದುರಂತ.

ಅಶ್ವತ್ಥ ವೃಕ್ಷದಲ್ಲಿ ಬ್ರಹ್ಮ – ವಿಷ್ಣು – ಮಹೇಶ್ವರರು ನೆಲೆಸಿದ್ದು, ಹಿಂದೂಗಳು ಭಕ್ತಿಭಾವದಿಂದ ಪೂಜಿಸುತ್ತಾರೆ. ಆಧ್ಯಾತ್ಮಿಕ, ಧಾರ್ಮಿಕವಾಗಿ ಅಲ್ಲದೇ, ವೈಜ್ಞಾನಿಕವಾಗಿ ಬೇರೆಲ್ಲಾ ವೃಕ್ಷಗಳಿಗಿಂತ ಅಶ್ವತ್ಥ ವೃಕ್ಷದಿಂದ ಯಥೇಚ್ಛವಾದ ಶುದ್ಧ ಆಮ್ಲಜನಕ ದೊರೆಯುತ್ತದೆ. ಈ ವೃಕ್ಷದ ಎಲೆ, ತೊಗಟೆಗಳು ವಸಡು, ರಕ್ತದೊತ್ತಡ, ಅಸ್ತಮಾ, ಚರ್ಮ ಸಮಸ್ಯೆ, ಕರುಳು ಸಂಬಂಧಿತ ಸಮಸ್ಯೆಗಳು, ರಕ್ತಸ್ರಾವ ಸೇರಿ ಹಲವು ಸಮಸ್ಯೆಗಳಿಗೂ ವರದಾನವಾಗಿದೆ.

ಆದರೂ, ಹೊಟ್ಟೆಗೆ ಅನ್ನ ತಿನ್ನುವ ವ್ಯಕ್ತಿಗಳ್ಯಾರೂ ಹನಿ ನೀರೂ ಅಶ್ವತ್ಥ ವೃಕ್ಷದ ಬೇರಿಗೆ ಹೋಗದಂತೆ ಮಾಡುವುದಿಲ್ಲ. ಹಣದಾಸೆ, ಸ್ವಾರ್ಥಕ್ಕೆ ಬಿದ್ದಿರುವ ಕುತಂತ್ರ ವ್ಯಕ್ತಿಗಳು ಈ ಎರಡೂ ಬೃಹತ್ ಅಶ್ವತ್ಥ ವೃಕ್ಷಗಳನ್ನು ಧರೆಗೆ ಉರುಳಿಸುವ ಪಿತೂರಿಯನ್ನು ಸದ್ದಿಲ್ಲದೇ ಮಾಡುತ್ತಿದ್ದಾರೆ. ಇಂತಹ ನೂರಾರು ಉದಾಹರಣೆಗಳು ಮೈಸೂರಿನಲ್ಲಿದ್ದು, ಕೂಡಲೇ ಅರಣ್ಯ ಇಲಾಖೆಯು ವೃಕ್ಷಗಳ ಉಳಿವಿಗೆ ಕ್ರಮ ಕೈಗೊಳ್ಳಬೇಕು. ಕೊಳ್ಳೆ ಹೊಡೆದ ನಂತರ ಬೀದಿಗಿಳಿಯುವ ಪರಿಸರವಾದಿಗಳು, ಹೋರಾಟಗಾರರು ಮುಂಚಿತವಾಗಿಯೇ ಕಾರ್ಯಕ್ರಮಗಳನ್ನು ರೂಪಿಸಿ, ದೇವಾಲಯದ ಭಕ್ತಾದಿಗಳು ಮತ್ತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ ವೃಕ್ಷಗಳನ್ನು ಉಳಿಸಬೇಕಿದೆ.

– ಎಂ. ರಾಜ್, ಮೈಸೂರು.

■ ಮೊದಲಿನ ನಿಗಧಿತ ದರವೇ ಸಾಮಾನ್ಯರಿಗೂ ಸೂಕ್ತವಾಗಿದೆ

ಮಾನ್ಯರೆ,

ಆಷಾಢ ಮಾಸದಲ್ಲಿ ಅಕ್ಕ ಪಕ್ಕದ ಊರುಗಳಿಂದ ಬೇರೆ ರಾಜ್ಯಗಳಿಂದಲೂ ಮೈಸೂರಿನ ಪ್ರಸಿದ್ಧ ಚಾಮುಂಡೇಶ್ವರಿ ದೇವಿಯ ಸನ್ನಿಧಾನಕ್ಕೆ ಸಾವಿರಾರು ಭಕ್ತರು ಬರುತ್ತಾರೆ. ಬರುವ ಜನರು ದೇವಿಗೆ ಹಲವಾರು ರೀತಿಯ ಸೇವೆಗಳನ್ನು ಮಾಡಿಸಿ ಧನ್ಯತೆಯಭಾವವನ್ನು ಹೊಂದುತ್ತಾರೆ. ಎಷ್ಟೇ ಜನಸಂದಣಿ ಇದ್ದರೂ ಕೂಡ ದೇವಿಯ ದರ್ಶನವನ್ನು ಮಾಡಿ ಪ್ರಸಾದ ಸ್ವೀಕರಿಸುತ್ತಾರೆ. ಆದರೆ ಅಭಿಷೇಕಕ್ಕೆ 200 ಹಾಗೂ 300 ರೂಗಳ ಸೇವೆಯನ್ನು ರದ್ದುಪಡಿಸಿ 500 ರೂಗಳಿಗೆ ಏರಿಸಿರುವುದು ಸೂಕ್ತವಲ್ಲ. ಇದರಿಂದ ಭಕ್ತರು ದೇವಿಗೆ ಸೇವೆಯನ್ನು ಮಾಡಿಸುವುದೋ ಬಿಡುವುದೋ ಎಂಬ ಗೊಂದಲದ ಮನಸ್ಥಿತಿ ಉಂಟಾಗುತ್ತಿದೆ. ಮೊದಲಿನಂತೆ ನಿಗದಿಯಾದ ದರವೇ ಇದ್ದರೆ ಮಧ್ಯಮ ವರ್ಗದವರು ಕೂಡ ಅಭಿಷೇಕ ಇನ್ನಿತರ ಸೇವೆಗಳನ್ನು ಮಾಡಿಸುತ್ತಾರೆ. ಇದರಿಂದ ನಮಗೆ ಪುಣ್ಯ ಫಲವೆಂದು ನಂಬಿ ದೇವಿಯನ್ನು ಹೆಚ್ಚು ಪ್ರಾರ್ಥಿಸುತ್ತಾರೆ. ಪ್ರತಿ ವರ್ಷದಂತೆ ಇದ್ದ ನಿಗದಿ ದರವಿದ್ದರೆ ಸೇವೆ ಮಾಡಿಸುವ ಜನರು ಹೆಚ್ಚಿದಂತೆ ದೇವಸ್ಥಾನಕ್ಕೆ ಹೆಚ್ಚಿನ ಹಣವು ಸಂದಾಯವಾಗುತ್ತದೆ. ಇದರಿಂದ ದೇವಸ್ಥಾನದ ಆದಾಯಕ್ಕೇನು ನಷ್ಟವಾಗುವುದಿಲ್ಲ. ಬರುವ ಸಾಮಾನ್ಯ ವರ್ಗದವರಿಗೂ ಅನುಕೂಲವಾಗುತ್ತದೆ. ಆದ್ದರಿಂದ ಸಂಬಂಧಪಟ್ಟ ಸಮಿತಿ ಅಧಿಕಾರಿಗಳು ಇನ್ನೊಮ್ಮೆ ಇದನ್ನು ಪರಿಶೀಲಿಸುವುದು ಸೂಕ್ತವೆನ್ನಿಸುತ್ತದೆ.

–ಯಶೋಧ ರಾಮಕೃಷ್ಣ, ಲೇಖಕಿ, ವಿಜಯನಗರ, ಮೈಸೂರು.




–ಆರ್.ರಘು (ಕೌಟಿಲ್ಯ)
ಚಿಂತಕರು
ಮೈಸೂರು
ಮೊ: 94480 61101

ಪ್ರಸ್ತುತ

ಮೈಸೂರು ಅಭಿವೃದ್ಧಿ ಪ್ರಾಧಿಕಾರ

ಮೈಸೂರಿಗರ ಹೊಸ ಆಶಾಗೋಪುರ

'ಊರು ಕೊಳ್ಳೆ ಹೊಡೆದ ಮೇಲೆ ಕೋಟೆ ಬಾಗಿಲು ಹಾಕಿದರಂತೆ'. ಇದು ಹಳೇ ಗಾದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ವಿಚಾರಕ್ಕೆ ಬಂದಾಗ, ಇದನ್ನು ಸ್ವಲ್ಪ ಮಾರ್ಪಡಿಸಿ 'ಕೊಳ್ಳೆ ಹೊಡ್ಸಿದ್ರು ಆಮೇಲೆ ಹೆಸರು ಬದಲಿಸಿದ್ರು' ಎಂದು ಹೇಳಿದರೆ ಅತ್ಯಂತ ಸಮಂಜಸ ಎಂಬುದು ಸಾರ್ವಜನಿಕರ ಭಾವನೆ. ಮುಡಾದಲ್ಲಿ ರಾಜ್ಯ ಇದುವ ರೆಗೂ ಕಂಡು, ಕೇಳರಿಯದಂತಹ ಬಹುದೊಡ್ಡ ಹಗರಣವೇ ನಡೆದು ಹೋಯ್ತು. ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕುಟುಂಬವು ಇದರಲ್ಲಿ ಭಾಗಿಯಾಗಿ, ಇನ್ನು ಕಾನೂನು ಹೋರಾಟ ನಡೆಸುತ್ತಿರುವುದು ಗೊತ್ತಿದೆಯಲ್ಲ!



ನಾಲ್ವಡಿ ಕೃಷ್ಣರಾಜ ಒಡೆಯರ್



ಮೈಸೂರು ಅಭಿವೃದ್ಧಿ ಪ್ರಾಧಿಕಾರ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಸದ್ಯ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ಆಗಿ ಬದಲಾವಣೆಗೊಂಡು ಹೊಸ ಸ್ವರೂಪ ಪಡೆದುಕೊಂಡಿದೆ. ಸರ್ಕಾರ ಈ ನಿರ್ಧಾರ ಎಂದೋ ಕೈಗೊಂಡಿದ್ದರೆ **ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್** ಅವರ ದೂರ ದೃಷ್ಟಿತ್ವದ ಫಲವಾಗಿ ಅಸ್ತಿತ್ವಕ್ಕೆ ಬಂದ ಈ ಸಂಸ್ಥೆ ಭೂ ದಾಹಿಗಳ ಕಪಿಮುಷ್ಠಿಗೆ ಸಿಲುಕಿ ನಲುಗುತ್ತಿರಲಿಲ್ಲವೇನೋ. ಅಲ್ಲದೆ, ನೈಜ ಸೂರು ರಹಿತರಿಂದ ದಶಕಗಳಿಂದಲೂ ಅಂತರ ಕಾಯ್ದುಕೊಳ್ಳುವ ಪರಿಸ್ಥಿತಿ ಉದ್ಭವಿಸುತ್ತಿರಲಿಲ್ಲ. ಇದೆಲ್ಲಾ ಆಡಳಿತ ನಡೆಸುವವರ ಬದ್ಧತೆ ಹಾಗೂ ದೂರದೃಷ್ಟಿತ್ವದ ಕೊರತೆಯ ಫಲವಲ್ಲದೆ ಮತ್ತೇನು ಅಲ್ಲ.

ಮೈಸೂರು, ಬೆಂಗಳೂರು ನಗರಗಳು ಏಷ್ಯಾ ಖಂಡದಲ್ಲಿಯೇ ಅತ್ಯಂತ ಯೋಜಿತ ಸುಂದರ ನಗರಗಳು. ಇವು ವ್ಯವಸ್ಥಿತವಾಗಿ ಬೆಳೆಯಬೇಕು. ಜತೆ ಜತೆಗೇ ಸೂರಿಲ್ಲದವರ ಪಾಲಿಗೆ ನೆರಳಾಗಬೇಕೆಂಬ ಮಹದಾಶಯ ಹಾಗೂ ಪ್ರಜಾ ಕಾಳಜಿಯ ಪ್ರತೀಕವಾಗಿ **ನಾಲ್ವಡಿ ಕೃಷ್ಣರಾಜ ಒಡೆಯರು** ತಮ್ಮ ಆಡಳಿತಾವಧಿಯಲ್ಲಿ ಬೆಂಗಳೂರು, ಮೈಸೂರುಗಳ ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ (ಸಿಐಟಿಬಿ)ಯನ್ನು ಅಸ್ತಿತ್ವಕ್ಕೆ ತಂದರು. ಮುಂದಿನ ದಿನಗಳಲ್ಲಿ ಅದನ್ನು ಸಾರ್ಥಕಗೊಳಿಸಿ, ಯೋಜಿತ ಬಡಾವಣೆ ನಿರ್ಮಾಣಕ್ಕೆ ಕಾರಣರಾದರು.

ಹಳೇ ಮೈಸೂರು ಪುರಸಭೆ–ನಗರಸಭೆ ಜತೆಗೇ ಸಿಐಟಿಬಿ ಮೂಲಕ ಚಾಮುಂಡಿಪುರಂ, ವಿದ್ಯಾರಣ್ಯಪುರಂ, ಲಕ್ಷ್ಮೀಪುರಂ, ಸರಸ್ವತಿಪುರಂ, ಯಾದವಗಿರಿ, ಗೋಕುಲಂ, ಇಂದಿರಾನಗರ, ಎನ್.ಆರ್.ಮೊಹಲ್ಲಾ, ಸಿದ್ದಾರ್ಥನಗರ, ಕುವೆಂಪುನಗರ ಬಡಾವಣೆಗಳನ್ನು ಅತ್ಯಂತ ಸುಸಜ್ಜಿತವಾಗಿ ಮೂಲ ಸೌಕರ್ಯಗಳೊಂದಿಗೆ ನಿರ್ಮಿಸಲಾಯಿತು.

ಅಂದು ಸಿಐಟಿಬಿ ಅಧ್ಯಕ್ಷರುಗಳಾಗಿ ನಿಸ್ವಾರ್ಥದಿಂದ ಸೇವೆ ಸಲ್ಲಿಸಿದ ಡಿ.ಸೀತಾರಾಮ ರಾವ್, ಎಂ.ಕಾಂತರಾಜ ಅರಸ್, ಎ.ಸುಬ್ರಹ್ಮಣ್ಯ ಅಯ್ಯರ್, ಬಿ.ಜಿ.ಲಕ್ಷ್ಮಣ್‌ಬಾಬು, ಬಿ.ಸುಬ್ಬರಾವ್, ಸಿ.ಶ್ರೀಕಂಠೇಶ್ವರ ಅಯ್ಯರ್, ಕೆ.ಮೈಲರ್‌ರಾವ್, ಎನ್.ಮಾಧವರಾವ್, ಸಿ.ಎಸ್.ಕುಪ್ಪಸ್ವಾಮಿ ಐಯ್ಯಂಗಾರ್, ಟಿ.ಜಿ.ರಾಮ ಅಯ್ಯರ್, ಕೇಶವ ಅಯ್ಯಂಗಾರ್, ಎಂ.ಎ. ಶ್ರೀನಿವಾಸನ್, ಎಂ.ನವನೀತಮ್ ನಾಯ್ಡು ಬಿ.ಎಸ್.ರಾಘವೇಂದ್ರ ರಾವ್, ಆರ್.ರಾಮಚಂದ್ರರಾವ್ ಭೋಂಬೊರೆ, ಎನ್.ಎಸ್. ಹಿರಣಯ್ಯ, ಪಾಲಹಳ್ಳಿ ಸೀತಾರಾಮಯ್ಯ, ಟಿ.ವೆಂಕಟರಮಣಯ್ಯ, ಪಿ.ಗೋಪಾಲಶೆಟ್ಟಿ, ಎಸ್.ಲಿಂಗಣ್ಣ, ಬಿ. ನಾರಾಯಣ ಸ್ವಾಮಿ, ಹೆಚ್.ಕೆಂಪೇಗೌಡ, ಬಿ.ಎನ್.ಕೆಂಗೇಗೌಡ, ಡಿ.ಲಿಂಗಯ್ಯ, ಡಾ.ಸಿದ್ದರಾಜು, ಬಿ.ಕೆ.ಪುಟ್ಟಯ್ಯ ಹಾಗೂ ಕೊನೆಯದಾಗಿ ಡಿ.ಮಾದೇಗೌಡರ ಸೇವೆಯನ್ನ ಮೈಸೂರು ಜನತೆ ಎಂದೂ ಮರೆಯಲಾಗದು.

ತಳ್ಳುಗಾಡಿಯಲ್ಲಿ ವ್ಯಾಪಾರ ನಡೆಸುವವನೂ ಒಂದು ನಿವೇಶನ ಹೊಂದುವ ಕನಸು ನನಸಾಗಿಸಿಕೊಳ್ಳುವ **'ಆಶಾಮಂದಿರ'** ಯೋಜನೆ ರೂಪಿಸಿ 'ಮನೆ ಮಾದೇಗೌಡ' ಎನಿಸಿಕೊಂಡು, ನಾಲ್ವಡಿಯವರ ಆಶಯ ಸಾರ್ಥಕಗೊಳಿಸಿದ ಡಿ.ಮಾದೇಗೌಡರ ನಂತರ ಸಿಐಟಿಬಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವಾಗಿ (ಮುಡಾ) ಪರಿವರ್ತನೆ ಆಯಿತು. ಇಲ್ಲಿಂದ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿಗಳ ಸಂತತಿ ತಲೆ ಎತ್ತಿತು.

ಇದ್ದುದರಲ್ಲಿ ಇಂದಿನ ದಟ್ಟಗಳ್ಳಿ (ಕನಕದಾಸನಗರ), ವಿಜಯನಗರ 4 ಹಂತಗಳ ಬಡಾವಣೆಗಳು ಯೋಜಿತವಾಗಿ ನಿರ್ಮಾಣಗೊಳ್ಳಲು ಪಿ.ಗೋವಿಂದರಾಜು ಅವರ ಕೊಡುಗೆ ಇಲ್ಲದೇ ಇಲ್ಲ. ಸೂರು ರಹಿತರಿಗಾಗಿ ಹಲವು ಯೋಜನೆ ಜಾರಿಗೆ ಮುಂದಾದರೂ, ಅವರ ಅಧ್ಯಕ್ಷ ಅವಧಿ ಮೊಟಕುಗೊಂಡು, ಅದಕ್ಕೆ ಅವಕಾಶ ಸಿಗಲಿಲ್ಲ. ನಂತರದ ದಿನಗಳು ಬಹುತೇಕವಾಗಿ ವಸತಿರಹಿತ ಮೈಸೂರಿಗರ ಪಾಲಿಗೆ ಮುಡಾ ದೂರದ ಬೆಟ್ಟವಾಗಿ ಉಳಿದುಬಿಟ್ಟಿತು.

ನಿವೇಶನಗಳನ್ನು ಹೊಂದಲೇಬೇಕೆಂಬುವವರಿಗೆ ನಂತರದ ದಿನಗಳಲ್ಲಿ ಹೌಸಿಂಗ್ ಸೊಸೈಟಿಗಳು ಹಾಗೂ ಬಳಿಕ ವೇಗವಾಗಿ ಹುಟ್ಟಿಕೊಂಡ 'ಡೆವಲಪರ್‌ಗಳು' ಚಮತ್ಕಾರ ಎಂಬಂತೆ ಖಾಸಗಿ ಬಡಾವಣೆಗಳು ನಾಯಿಕೊಡೆಗಳಂತೆ ತಲೆಯೆತ್ತಿದವು. ಬಳಿಕ ಇತ್ತೀಚಿಗೆ ನಿರ್ಮಾಣಗೊಳ್ಳುತ್ತಿರುವ ವಸತಿ ಸಮುಚ್ಚಯಗಳೇ (ಅಪಾರ್ಟ್‌ಮೆಂಟ್) ಜನರಿಗೆ ಅನಿವಾರ್ಯ ಆಸರೆಯಾದವು. ಹೆಚ್ಚಿನ ದರ ತೆತ್ತು ನಿವೇಶನ ಕೊಂಡರೂ ಅನೇಕ ಬಡಾವಣೆಗಳು ಇಂದಿಗೂ ಮೂಲ ಸೌಕರ್ಯದ ಕೊರತೆಗಳ ದೆಸೆಯಿಂದ ಜನರು ಬವಣೆ ಪಡುತ್ತಿದ್ದಾರೆ. ಬಹುತೇಕ ಉದ್ಯಾನವನಗಳು ಹೆಸರಿಗಷ್ಟೇ ಅಣಕಿಸುವ ಮಾದರಿಯಲ್ಲಿ ಗೋಚರಿಸಿದರೆ, ಪಾದಚಾರಿ (ಫುಟ್‌ಪಾತ್) ಮಾರ್ಗವಂತೂ ಅಸ್ತಿತ್ವವನ್ನೇ ಕಳೆದುಕೊಂಡರೆ, ರಸ್ತೆಗಳು ಓಣಿಗಳಂತೆ ಕಂಡುಬರುತ್ತವೆ. ಚರಂಡಿ ವ್ಯವಸ್ಥೆ, ಸ್ವಚ್ಛತೆ ಕೇಳಲೇಬೇಡಿ.

ಇಂತಹ ಅವೈಜ್ಞಾನಿಕ, ಯೋಜಿತವಲ್ಲದ ಬಡಾವಣೆಗಳು ವ್ಯಾಪಕ ರೀತಿಯಲ್ಲಿ ತಲೆ ಎತ್ತಲು ಮುಡಾ ಭ್ರಷ್ಟ ಆಡಳಿತ ವ್ಯವಸ್ಥೆ ಹಾಗೂ ರಾಜಕೀಯ ಪ್ರಭಾವವೇ ಕಾರಣ. ಬದ್ಧತೆ, ಕನಸುಗಳಿಲ್ಲದೇ ಜವಾಬ್ದಾರಿ ಸ್ಥಾನಗಳಿಗೆ ಬಂದು ಕೂರುವವರ ಸ್ವಾರ್ಥದ ಫಲವಾಗಿ ಇಂದು ಮೈಸೂರು ಶತಮಾನದ ಬಹುದೊಡ್ಡ ಭೂ ಹಗರಣದ ಕುಖ್ಯಾತಿಗೆ ಬಲಿಯಾಗಬೇಕಾಯಿತು. ಬೇಲಿಯೇ ಎದ್ದು ಹೊಲ ಮೇಯ್ದು ಹಾಗೇ ಇತ್ತೀಚಿನ ವರ್ಷಗಳಲ್ಲಿ ಬಂದಂತಹ ಇಬ್ಬರು ಆಯುಕ್ತರು ಹಾಗೂ ಕೆಲ ಭ್ರಷ್ಟ ಅಧಿಕಾರಿಗಳು ಮುಡಾದಲ್ಲಿ ಅರ್ಜಿ ಸಲ್ಲಿಸಿ ಕಾದು ಕುಳಿತಿದ್ದ ನಿವೇಶನಾಕಾಂಕ್ಷಿಗಳ ಒಂದಿಷ್ಟು ವಸತಿ ಸಮಸ್ಯೆ ನೀಗಿಸಬಹುದಾದ ನಿವೇಶನಗಳನ್ನು ಕಾನೂನು, ನಿಯಮಗಳನ್ನು ಗಾಳಿಗೆ ತೂರಿ, ಸಾವಿರಾರು ನಿವೇಶನ ಲೂಟಿಯಾಗಲು ನೇತೃತ್ವ ವಹಿಸಿದರು. ಇವರ ಬೆನ್ನಿಗೆ ರಾಜಕೀಯ ಪ್ರಭಾವಿ ಶಕ್ತಿಗಳು ನಿಂತವು.

ಇಂದಿಗೂ ಲೂಟಿಕೋರ ಅಧಿಕಾರಿಗಳನ್ನು ಕನಿಷ್ಠ ಅಮಾನತು ಗೊಳಿಸುವ ಶಿಕ್ಷೆಗೂ ಒಳಪಡದಂತೆ ಅವರ ರಕ್ಷಣೆಗೆ ಅದೃಶ್ಯ ಶಕ್ತಿ ಬೆನ್ನಿಗೆ ನಿಂತಿದೆಯೋ ಎಂಬ ಪ್ರಶ್ನೆ ನಾಗರಿಕ ಸಮೂಹವನ್ನು ಕಾಡುತ್ತಿದೆ. **ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನೇ 14 ನಿವೇಶನಗಳ ಅಕ್ರಮ ಮಂಜೂರಾತಿಯ ಆರೋಪದಲ್ಲಿ ಸಿಲುಕಿ ಇಂದಿಗೂ ಅದು ಆರೋಪದ ವ್ಯೂಹದಿಂದ ಹೊರಬರಲಾಗದೇ, ವಿಚಾರಣೆಯನ್ನು ಎದುರಿಸುವ ಪರಿಸ್ಥಿತಿಗೆ ದೂಡಿದ ಶಕ್ತಿಗಳು, ಮುಡಾವನ್ನು ಬರಿದು ಮಾಡಿದವು.**

> “ ತಳ್ಳುಗಾಡಿಯಲ್ಲಿ ವ್ಯಾಪಾರ ನಡೆಸುವವನೂ ಒಂದು ನಿವೇಶನ ಹೊಂದುವ ಕನಸು ನನಸಾಗಿಸಿಕೊಳ್ಳುವ 'ಆಶಾಮಂದಿರ' ಯೋಜನೆ ರೂಪಿಸಿ 'ಮನೆ ಮಾದೇಗೌಡ' ಎನಿಸಿಕೊಂಡು ನಾಲ್ವಡಿಯವರ ಆಶಯ ಸಾರ್ಥಕಗೊಳಿಸಿದ ಡಿ.ಮಾದೇಗೌಡರ ನಂತರ ಸಿಐಟಿಬಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವಾಗಿ (ಮುಡಾ) ಪರಿವರ್ತನೆ ಆಯಿತು. ಅಲ್ಲಿಂದ ಅಂತಹ ಜನಪರವಾದ ಯೋಜನೆಗಳು ಮುಡಾದ ಕಡೆಯಿಂದ ರೂಪಿತಗೊಳ್ಳಲೇ ಇಲ್ಲ. ಇಲ್ಲಿಂದ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿಗಳ ಸಂತತಿ ತಲೆ ಎತ್ತಿತು.

ಮುಡಾದ ಭೂಸ್ವಾಧೀನದಿಂದ ಪೂರ್ಣಪ್ರಮಾಣದಲ್ಲಿ ಭೂಮಿ ಕಳೆದುಕೊಳ್ಳುತ್ತಿದ್ದ ರೈತರಿಗೆ ಎಕರೆಗೆ ಕನಿಷ್ಠ ಒಂದು ನಿವೇಶನ (30X40)ವಾದರೂ ಲಭಿಸಲಿ ಎಂಬ ಉದಾತ್ತ ಉದ್ದೇಶದಿಂದ ಹಿಂದಿನ ಮುಖ್ಯಮಂತ್ರಿ ಬಂಗಾರಪ್ಪನವರ ಅಧಿಕಾರಾವಧಿಯಲ್ಲಿ ಪಿ.ಗೋವಿಂದರಾಜು, ರಾಜ್ಯಕ್ಕೆ ಅನ್ವಯವಾಗುವಂತೆ 1991ರಲ್ಲಿ ಜಾರಿಗೆ ತಂದ 'ಪ್ರೋತ್ಸಾಹದಾಯಕ ನಿವೇಶನ'ದ ಹೆಸರಿನಲ್ಲಿ ಕನ್ನ ಹಾಕಿದ ಆಯುಕ್ತರುಗಳು, ಅನ್ವಯವೇ ಆಗದ ಶೇಕಡಾ 50:50ರ ಅನುಪಾತದಲ್ಲಿ ನಿವೇಶನ ನೀಡುವ ಅವಕಾಶ ಕಲ್ಪಿಸುವ (ರೈತ ಸಹಭಾಗಿತ್ವದ ಬಡಾವಣೆ ಯೋಜನೆ) 2009ರ ನಿಯಮ (2015ರ ತಿದ್ದುಪಡಿ)ದ ಹೆಸರಲ್ಲಿ ಪ್ರಾಧಿಕಾರದ ಸಭೆಯಲ್ಲಿ ನಿರ್ಣಯವೇ ಆಗದ ವಿಷಯವನ್ನು ಉಲ್ಲೇಖಿಸಿ ಅಕ್ರಮ ದಾಖಲೆಗಳನ್ನು ಸೃಷ್ಟಿಸಿ, ಯಾರ್ಯಾರದೋ ಹೆಸರಿಗೆ ಕೋಟಿ ಕೋಟಿ ಬೆಲೆ ಬಾಳುವ ಅಭಿವೃದ್ಧಿ ಹೊಂದಿದ ಪ್ರತಿಷ್ಠಿತ ಬಡಾವಣೆಗಳಲ್ಲಿ ಸಾವಿರಾರು (ಹತ್ತು ಸಾವಿರದಷ್ಟು ಎಂದು ಹೇಳಲಾಗುತ್ತದೆ) ನಿವೇಶನಗಳನ್ನು ಮಂಜೂರು ಮಾಡಿ, ಹಗಲು ದರೋಡೆಯನ್ನೇ ನಡೆಸಿದರು.

ರಾಜ್ಯ ಮತ್ತು ರಾಷ್ಟ್ರದ ಗಮನ ಸೆಳೆದ ಈ ಬಹುದೊಡ್ಡ ಭೂ ಹಗರಣದ ಹಿನ್ನೆಲೆಯಲ್ಲಿ ಇದೀಗ ಮುಡಾ ಉಳಿಸಲು ಪಣ ತೊಟ್ಟಿದ್ದೇವೆ ಎಂದು, ಹಾಲಿ ಕಾಂಗ್ರೆಸ್ ಸರ್ಕಾರ ಕಾಯ್ದೆ ರೂಪಿಸಿ, ವಿಧಾನ ಮಂಡಲದ ಉಭಯ ಸದನಗಳಲ್ಲಿ ಅದನ್ನು ಮಂಡಿಸಿ, ಅಂಗೀಕಾರ ಪಡೆದು, ರಾಜ್ಯಪಾಲರ ಅಂಕಿತದೊಂದಿಗೆ **'ಮೈಸೂರು ಅಭಿವೃದ್ಧಿ ಪ್ರಾಧಿಕಾರ'** (ಎಂಡಿಎ) ರೂಪಿಸಿದ್ದು, ಅದರ ಫಲವಾಗಿ ಈಗ ಮುಡಾ ಎಂಡಿಎ ಆಗಿ ಪರಿವರ್ತನೆಯಾಗಿದೆ. ಅದರನ್ವಯ ಅಧಿಕಾರಿಗಳ ಸ್ಥಾನಮಾನಗಳೂ ಅತೀ ಜರೂರಾಗಿ ಬದಲಾವಣೆ ಆಗಬೇಕಿದೆ.

ಎಂಡಿಎ ಅಸ್ತಿತ್ವಕ್ಕೆ ಬಂದು, ಸಹಜವಾಗಿಯೇ ಮುಡಾದ ಆಡಳಿತ ಮಂಡಳಿ ಅಸ್ತಿತ್ವ ಕಳೆದುಕೊಂಡಿದೆ. ಮುಡಾ ವ್ಯಾಪ್ತಿಯ ಜನಪ್ರತಿನಿಧಿಗಳು ಎಂಬ ಕಾರಣಕ್ಕಾಗಿ ಪ್ರಾಧಿಕಾರದ ಸದಸ್ಯತ್ವ ಪಡೆದುಕೊಂಡಿದ್ದ ವಿಧಾನಸಭೆ, ವಿಧಾನ ಪರಿಷತ್, ಸಂಸದರು ಸೇರಿದಂತೆ ಸರ್ಕಾರದ ನಾಮನಿರ್ದೇಶಿತ, ಪಾಲಿಕೆ ಪ್ರಾತಿನಿಧ್ಯ ಹೀಗೆ ಡಜನ್‌ಗಟ್ಟಲೆ ಸದಸ್ಯತ್ವ ಪಡೆದವರು ಅಸ್ತಿತ್ವ ಕಳೆದುಕೊಂಡಿದ್ದಾರೆ.

* * * *

ಆದರೆ, ಹೊಸ ವ್ಯವಸ್ಥೆಯಿಂದ (ಎಂಡಿಎ) ಅಧಿಕಾರಿಗಳ ಮುಷ್ಟಿಯಲ್ಲಿ ಸಂಸ್ಥೆ ಸಿಲುಕಿಕೊಳ್ಳಲಿದೆ. ಕೇವಲ ಒಬ್ಬರೇ ಶಾಸಕರು ಪ್ರಾಧಿಕಾರದ ಸದಸ್ಯರಾಗಿ ನೇಮಕಗೊಳ್ಳುವುದರಿಂದ ಜನಪ್ರತಿನಿಧಿಗಳಿಗೆ ಪ್ರಾತಿನಿಧ್ಯವಿಲ್ಲದೇ ಹೋದಲ್ಲಿ ಅಧಿಕಾರಿಗಳ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವುದು ಸಾಧ್ಯವೇ ಇಲ್ಲ ಎಂಬ ಅಭಿಪ್ರಾಯ ಕೆಲವರಿಂದ ವ್ಯಕ್ತವಾಗುತ್ತಿದೆ. ಕೆಲ ಖಾಸಗಿ ಬಡಾವಣೆ ನಿರ್ಮಾಣದಾರರೂ ಹೊಸ ವ್ಯವಸ್ಥೆಯ ಕುರಿತು ಅಪಸ್ವರ ಎತ್ತಿದ್ದಾರೆ. ಆದರೆ, ಈ ಹಿಂದಿನ ಕನಿಷ್ಠ ಜನಕಾಳಜಿ ಇಲ್ಲದ ಭ್ರಷ್ಟ ವ್ಯವಸ್ಥೆಯಂತೂ ಪುನರಾವರ್ತನೆ ಆಗುವುದು ಸುಲಭ ಸಾಧ್ಯವಲ್ಲ ಎಂಬ ಮಾತನ್ನು ಮೈಸೂರು ಅಭಿವೃದ್ಧಿ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದಿರುವ ಹಿನ್ನೆಲೆ ನೋಡಿದಾಗ ಹೇಳಬಹುದಾಗಿದೆ. ಹೊಸ ವ್ಯವಸ್ಥೆಯ ಬಗ್ಗೆ ಅಪಸ್ವರ ಎತ್ತುವವರಿಗೆ ಕೆಲವು ಪ್ರಶ್ನೆಗಳ ಮೂಲಕವೇ ಎಂಡಿಎ ವ್ಯವಸ್ಥೆ ಹೇಗಿರುತ್ತದೆ ಎಂಬ ವಿವರ ನೀಡುವುದು ಸಂದರ್ಭೋಚಿತವೆನಿಸುತ್ತದೆ.

- ಮೈಸೂರು ಅಭಿವೃದ್ಧಿ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದಿರುವುದರಿಂದ ಅಧಿಕಾರಿ ವರ್ಗದ ಭ್ರಷ್ಟತೆ ಹೆಚ್ಚುತ್ತದೆ ಎಂಬ ಅನುಮಾನ ವ್ಯಕ್ತಪಡಿಸುವವರು ಈ ಹಿಂದೆ ಜನಪ್ರತಿನಿಧಿಗಳಿಂದಲೇ ತುಂಬಿ ತುಳುಕುತ್ತಿದ್ದ ಮುಡಾದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ಇತ್ತಲ್ಲವೇ? ಅದಕ್ಕೆ ಬ್ರೇಕ್ ಹಾಕಲು ಏಕೆ ಅವರಿಂದ ಸಾಧ್ಯವಾಗಲಿಲ್ಲ?
- ದಶಕಗಳಿಂದಲೂ ಮುಡಾದಿಂದ ನಿವೇಶನ ಅಥವಾ ಸಣ್ಣ ಸೂರೊಂದು ದೊರೆಯಬಹುದೆಂಬ ಆಶಾಭಾವನೆಯಿಂದ ಕಾಯುತ್ತಿದ್ದ ಲಕ್ಷಕ್ಕೂ ಹೆಚ್ಚಿನ ವಸತಿಹೀನರಿಗೆ ಸೂರು ಕಲ್ಪಿಸುವ ಯಾವ ಯೋಜನೆಯೂ ರೂಪುಗೊಳ್ಳಲು ಇದೇ ಜನಪ್ರತಿನಿಧಿಗಳು ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ ಏಕೆ?
- ಮೂಲಭೂತ ಸೌಲಭ್ಯಗಳನ್ನು ಕಲ್ಪಿಸದೇ ಇದ್ದರೂ ಖಾಸಗಿ ಬಡಾವಣೆಗಳಲ್ಲಿ ನಿವೇಶನಗಳು ಮಾರಾಟವಾಗಲು ನಕ್ಷೆ ಅನುಮೋದನೆ ಹಾಗೂ ಪರವಾನಗಿ ನೀಡಿ ಅಮಾಯಕ ನಿವೇಶನದಾರರು ಈಗ ಸಂಕಷ್ಟ ಪಡುವಂತಾಗಲು ಮೂಲ ಕಾರಣಕರ್ತರು ಯಾರು?
- ಪ್ರಾಧಿಕಾರದ ಸಭೆಯಲ್ಲಿ ಅನುಮೋದನೆಗೊಳ್ಳದಿದ್ದರೂ, ಸರ್ಕಾರದ ಅನುಮತಿ ಇಲ್ಲದಿದ್ದರೂ ಅಧಿಕಾರಿಗಳು ನಿವೇಶನಗಳನ್ನು ಲೂಟಿ ಮಾಡುತ್ತಿದ್ದಾಗ, ನಿಯಮಗಳನ್ನು ಗಾಳಿಗೆ ತೂರಿ ಖಾಸಗಿ ಬಡಾವಣೆಗಳಿಗೆ ಅನುಮತಿ ನೀಡುವಾಗ ಅದನ್ನು ನೋಡಿಯೂ ಕಣ್ಣು ಮುಚ್ಚಿ ಕುಳಿತಿದ್ದವರು ಯಾರು? ಮುಡಾದ ಆಸ್ತಿ, ನಿವೇಶನಗಳನ್ನು ಪ್ರಭಾವಿಗಳು, ಭೂಗಳ್ಳರು ಲೂಟಿ ಹೊಡೆದಿದ್ದರೂ, ಅದನ್ನು ಸ್ವಾಧೀನ ಪಡಿಸಿಕೊಳ್ಳಲಾಗದ ಮುಡಾ ಅಸಹಾಯಕತೆಗೆ ಕಾರಣರಾದವರಾರು?
- ದಶಕಗಳಿಂದ ಒಂದೇ ಒಂದು ಹೊಸ ಬಡಾವಣೆ ನಿರ್ಮಾಣಕ್ಕೂ ಮುಡಾ ಮುಂದಾಗದಂತೆ ಅದರ ಕೈಕಟ್ಟಿ ಹಾಕಿದವರ್ಯಾರು?

* * * *

ಇಂತಹ ಹಲವಾರು ಪ್ರಶ್ನೆಗಳಿಗೆ ಈ ಹಿಂದಿನ ಮುಡಾ ಆಡಳಿತದ ಭಾಗವಾಗಿದ್ದ ಜನಪ್ರತಿನಿಧಿಗಳು ಹಾಗೂ ಅಧಿಕಾರ ವ್ಯವಸ್ಥೆ ಸ್ಪಷ್ಟ ಉತ್ತರ ನೀಡಿದರೆ ಮಾತ್ರ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯ ವೈಖರಿಯ ಬಗ್ಗೆ ಸಂಶಯ ವ್ಯಕ್ತಪಡಿಸುವ ನೈತಿಕತೆ ಬರಲು ಸಾಧ್ಯ ಎಂಬುದು ನಾಗರಿಕರ ಅಭಿಪ್ರಾಯವಾಗಿದೆ.

ಆದಾಗ್ಯೂ ಸರ್ಕಾರ ಮೈಸೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅಧಿಕಾರೇತರ ಅಧ್ಯಕ್ಷರನ್ನು ನೇಮಿಸಲು ಅವಕಾಶವಿದೆ. ಒಂದೊಮ್ಮೆ ಶಾಸಕರೂ ಸಹ ಅಧ್ಯಕ್ಷರಾಗಬಹುದು. ಒಬ್ಬ ಶಾಸಕರ ಜತೆಗೇ ನಾಲ್ವರು ಅಧಿಕಾರೇತರ (ರಾಜಕೀಯ ಕಾರ್ಯಕರ್ತರು ಅಥವಾ ಸಮಾಜಸೇವಕರು) ಸದಸ್ಯತ್ವ ಹೊಂದಲಿದ್ದಾರೆ. ಇದರ ಜತೆಗೇ ಸಂಬಂಧಿಸಿದ ವಿವಿಧ ಇಲಾಖಾ ಹಾಗೂ ಸಂಸ್ಥೆಗಳ ಜವಾಬ್ದಾರಿಯುತ ಅಧಿಕಾರಿಗಳು ಸದಸ್ಯರಾಗಿರುತ್ತಾರೆ. ಇದರ ಮೇಲಾಗಿ ಸಂಬಂಧಿಸಿದ ಸಚಿವರು ಪ್ರಾಧಿಕಾರದ ಕಾರ್ಯವೈಖರಿ ಮೇಲ್ವಿಚಾರಣೆ ನಡೆಸುತ್ತಾರೆ. ಅಷ್ಟಕ್ಕೂ ಇದರ ನಿರ್ಣಯಗಳ ಮೇಲೆ ಸರ್ಕಾರದ ಹಿಡಿತ ಇರುತ್ತದೆ ಎಂದ ಮೇಲೆ ಅಧಿಕಾರಿಗಳ ಮುಷ್ಟಿಯಲ್ಲಿ ಮಾತ್ರ ಎಂಡಿಎ ಸಿಲುಕಲು ಹೇಗೆ ಸಾಧ್ಯ ?

ಮೈಸೂರು ಅಭಿವೃದ್ಧಿ ಪ್ರಾಧಿಕಾರ ಕಾರ್ಯ ನಿರ್ವಹಿಸಲು ಆರಂಭಿಸಿದ ನಂತರ ಐಎಎಸ್ ದರ್ಜೆಯ ಅಧಿಕಾರಿ ಆಯುಕ್ತರಾಗ ಲಿದ್ದು, ಹಿರಿಯ ಶ್ರೇಣಿಯ ಕೆಎಎಸ್ ಅಧಿಕಾರಿ ಕಾರ್ಯದರ್ಶಿ ಯಾಗಲಿದ್ದಾರೆ. ಉಳಿದಂತೆ ಸಂಬಂಧಿಸಿದ ವಿವಿಧ ಇಲಾಖೆಗಳು ಹಾಗೂ ಸರ್ಕಾರಿ ಸಂಸ್ಥೆಗಳ ಅಧಿಕಾರಿಗಳು, ತಜ್ಞರು ಆಡಳಿತ ಮಂಡಳಿಯಲ್ಲಿರುತ್ತಾರೆ.

ಬಿಡಿಎ ಮಾದರಿಯಲ್ಲೇ ಎಸ್‌ಪಿ ದರ್ಜೆಯ ಅಧಿಕಾರಿ ನೇತೃತ್ವದಲ್ಲಿ ಇಬ್ಬರು ಡಿವೈಎಸ್‌ಪಿ ಹಾಗೂ ಇನ್ಸ್‌ಪೆಕ್ಟರ್‌ಗಳು, ಇತರ ಪೋಲಿಸ್ ಸಿಬ್ಬಂದಿಗಳನ್ನೊಳಗೊಂಡು ಜಾಗೃತದಳ (ವಿಜಿಲೆನ್ಸ್) ಅಸ್ತಿತ್ವಕ್ಕೆ ಬಂದು ಪ್ರಾಧಿಕಾರದ ಆಸ್ತಿಗಳನ್ನು ರಕ್ಷಿಸಲು ಸರ್ವಸನ್ನದ್ಧರಾಗಿ ಕೆಲಸ ಮಾಡಲಿದೆ.

ನಿಯಮ ಸ್ಪಷ್ಟತೆಯಿಲ್ಲದ ಮಂಜೂರಾತಿಗಳನ್ನು ಹಾಗೂ ಇತರ ನಿರ್ಧಾರಗಳನ್ನು ಪರಿಪೂರ್ಣ ವಾಗಿ ಪರಿಶೀಲಿಸಲು ಜಿಲ್ಲಾ ಮಟ್ಟದ ನಿವೃತ್ತ ನ್ಯಾಯಾಧೀಶರ ನೇತೃತ್ವದ ಕಾನೂನು ಘಟಕ(ಲೀಗಲ್ ಸೆಲ್) ಅಸ್ತಿತ್ವಕ್ಕೆ ಬರಲಿದ್ದು, ಇಬ್ಬರು ಸಹಾಯಕ ನ್ಯಾಯಾಧೀಶರು ಈ ತಂಡದಲ್ಲಿರುತ್ತಾರೆ. ಕಾನೂನಾತ್ಮಕ ಅಂಶಗಳನ್ನೆಲ್ಲಾ ಪರಿಶೀಲಿಸಿ ಈ ಘಟಕದ ಅಭಿಪ್ರಾಯವನ್ನು ಪಡೆಯಲೇಬೇಕಾದ ಕಾರ್ಯಸೂಚಿ ಹಾಗೂ ನಿಯಮವನ್ನು ಎಂಡಿಎ ಅಳವಡಿಸಿಕೊಳ್ಳಲಿದೆ. ಇಂತಹ ವ್ಯವಸ್ಥೆ ರೂಪುಗೊಳ್ಳುವುದರಿಂದ ಭವಿಷ್ಯದಲ್ಲಿ ಭೂ ಕಬಳಿಕೆಯ ಷಡ್ಯಂತ್ರಗಳಿಗೆ ಕಡಿವಾಣ ಬೀಳಲಿದೆ.

ಒಟ್ಟಾರೆ, ಎಂಡಿಎ ನಿಯಮಗಳಡಿಯಲ್ಲಿ ಪ್ರಾಧಿಕಾರದ ದಾಖಲೆಗಳೆಲ್ಲವೂ ಐಟಿ ಸೆಲ್ ಮೂಲಕ ಡಿಜಿಟಲೀಕರಣಗೊಳ್ಳಲಿದ್ದು, ಕಡತಗಳು ಪ್ರತಿ ಹಂತದಲ್ಲೂ ಸ್ಕ್ಯಾನಿಂಗ್ ಆಗುವುದರಿಂದ ಕಡತ ನಾಪತ್ತೆ ಪ್ರಕರಣಗಳಿಗೆ ಇನ್ನು ಮುಂದೆ ಅವಕಾಶವಿರುವುದಿಲ್ಲ.

ಈಗ, ಮುಡಾ ಅಸ್ತಿತ್ವ ಕೊನೆಗೊಳ್ಳುವುದರೊಂದಿಗೆ ಎಂಡಿಎ ಅಡಿಯಲ್ಲಿನ ನಿಯಮಗಳು ಪ್ರಾಧಿಕಾರದಲ್ಲಿ ದಕ್ಷತೆ ಹೆಚ್ಚಿಸಲಿ, ಪಾರದರ್ಶಕ ಆಡಳಿತ ಪ್ರತಿಫಲಿಸಲಿ, ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಪ್ರಭಾವಿಗಳ ನೆರಳಿನ ವ್ಯವಸ್ಥೆ ಕೊನೆಗೊಳ್ಳಲಿ ಎಂಬುದು ಜನರ ನಿರೀಕ್ಷೆಯಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ ಹತ್ತಾರು ವರ್ಷಗಳಿಂದ ಸ್ವಂತ ಸೂರು ಹೊಂದಲು ಲಕ್ಷ ಸಂಖ್ಯೆಯಲ್ಲಿ ಕಾದು ಕುಳಿತಿರುವ ನಿವೇಶನಾಕಾಂಕ್ಷಿಗಳ ಪಾಲಿಗೆ ಸೂರು ಕಲ್ಪಿಸುವ ಯೋಜನೆಗಳು ರೂಪುಗೊಳ್ಳಲಿ, ತ್ವರಿತಗತಿಯಲ್ಲಿ ಅದು ಅನುಷ್ಠಾನಗೊಳ್ಳಲಿ ಎಂಬುದು ಮೈಸೂರಿಗರ ಮಹದಾಸೆ.

ನಾಲ್ವಡಿಯವರ ಜನ ಕಾಳಜಿಯ ಆಶಯಕ್ಕೆ ಪೂರಕವಾಗಿ ಈ ಹಿಂದಿನ ಸಿಐಟಿಬಿ ಅಸ್ತಿತ್ವದ ಕಾಲದಲ್ಲಿ ಸೂರು ಕೊರತೆ ನೀಗಿಸಿದ ಮಾದರಿಯಲ್ಲಿಯೇ ಬದ್ಧತೆಯ ವಸತಿ ಯೋಜನೆಗಳನ್ನು ರೂಪಿಸಿ ಜರೂರಾಗಿ ಅನುಷ್ಠಾನಗೊಳಿಸಿದರೆ ಮಾತ್ರ ಎಂಡಿಎ ಸ್ವರೂಪ ಪಡೆದುಕೊಂಡಿದ್ದಕ್ಕೂ ಸಾರ್ಥಕತೆ ಸಾಧಿಸಿದಂತಾಗುತ್ತದೆ ಎಂಬುದು ಮೈಸೂರು ಅಭಿವೃದ್ಧಿ ಪ್ರಾಧಿಕಾರದ (ಎಂಡಿಎ) ಅಸ್ತಿತ್ವವನ್ನು ಸ್ವಾಗತಿಸಿದವರ ಅಭಿಮತವಾಗಿದೆ. ಒಂದು ವೇಳೆ ಎಂಡಿಎ ಅಸ್ತಿತ್ವದಿಂದ ನಿರೀಕ್ಷಿತ ಹೆಜ್ಜೆಗಳು ಸದ್ದು ಮಾಡದಿದ್ದರೆ 'ಹೊಸ ಬಾಟಲಿಯಲ್ಲಿ ಹಳೇ ಮದ್ಯ' ಮಾತುಗಳು ಜನಸಾಮಾನ್ಯರ ಬಾಯಲ್ಲಿ ನಿತ್ಯ ಮಾರ್ಧನಿಸುತ್ತದೆ.

ಸಂಪಾದಕರ ಟಿಪ್ಪಣಿ: ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ (ಸಿಐಟಿಬಿ) ಇರುವಷ್ಟು ದಿನವೂ ಅತ್ಯಂತ ನಿಸ್ವಾರ್ಥ ಹಾಗೂ ಜನಪರತೆಯಿಂದ ಕಾರ್ಯನಿರ್ವಹಿಸಿತು. ಅದರ ನೇತೃತ್ವ ವಹಿಸಿದಂತಹವರು ಕಾಯಾ ವಾಚಾ ಮನಸಾ ಪ್ರಾಮಾಣಿಕತೆಯಿಂದ ಕಾರ್ಯ ನಿರ್ವಹಣೆ ಮಾಡಿದ್ದರಿಂದಲೇ ಇಂದಿಗೂ ಸಿಐಟಿಬಿ ಮಹತ್ಕಾರ್ಯವನ್ನು ಜನ ಸ್ಮರಿಸಿಕೊಳ್ಳುತ್ತಾರೆ. ಆದರೆ, ಸಿಐಟಿಬಿ ನಂತರ ಅಸ್ತಿತ್ವಕ್ಕೆ ಬಂದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವು, ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಸ್ವಾರ್ಥಪರತೆ, ಸ್ವಜನಪಕ್ಷಪಾತ, ಭ್ರಷ್ಟಾಚಾರದಿಂದ ಬರಬರುತ್ತಾ ಹಾಳಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರ್ ಯಾವ ಮಹದುದ್ದೇಶದಿಂದ ಇದನ್ನು ಸ್ಥಾಪಿಸಿದರೋ ಆ ಉದ್ದೇಶವನ್ನೇ ಬುಡಮೇಲು ಮಾಡಿದರು. 'ಮನೆಗೆ ಮಾರಿ, ಪರರಿಗೆ ಉಪಕಾರಿ' ಎಂಬಂತೆ ಕಾಸು ಕಾಸು ಕೂಡಿಟ್ಟು ನಿವೇಶನಕ್ಕಾಗಿ ಅರ್ಜಿ ಹಾಕಿ ಹಲವು ವರ್ಷಗಳಿಂದ ಚಾತಕಪಕ್ಷಿಗಳಂತೆ ಕಾಯುತ್ತಿರುವ ಫಲಾನುಭವಿಗಳಿಗೆ ಸೂರು ಕಲ್ಪಿಸುವ ಬದಲು, ಖಾಸಗಿ ಬಡಾವಣೆಗಳ ನಿರ್ಮಾಣದಲ್ಲಿ 'ಮಧ್ಯವರ್ತಿ'ಯಂತೆ ಕಾರ್ಯನಿರ್ವಹಿಸಿತು. ತನ್ನದೇ ಆಸ್ತಿಯನ್ನು ಕಂಡ ಕಂಡವರಿಗೆ ಹರಿದು ಹಂಚಿತು. ಈಗ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ಅಸ್ತಿತ್ವಕ್ಕೆ ಬಂದಿದೆ. ಇದರ ಬಗ್ಗೆ ಜನರಲ್ಲಿ ವಿಶ್ವಾಸ ಬರಬೇಕಾದರೆ ಅದರ ಕಾರ್ಯವೈಖರಿ ಸಂಪೂರ್ಣ ಬದಲಾಗಬೇಕಾಗುತ್ತದೆ. ಮುಂದೆ ಏನಾಗಬಹುದು ಎಂಬುದನ್ನು ಕಾದು ನೋಡೋಣ.!

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No.114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಮೇ 24 ಶನಿವಾರ 2025

ಸಂಪುಟ: 46 | ಸಂಚಿಕೆ: 38 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಇಂದು ಸಿಇಟಿ ಫಲಿತಾಂಶ

ಬೆಂಗಳೂರು, ಮೇ 23– ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಫಲಿತಾಂಶ ಮೇ 24 ರಂದು ಪ್ರಕಟವಾಗಲಿದೆ.

ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಏ.16ರಂದು ಭೌತ ವಿಜ್ಞಾನ ಮತ್ತು ರಸಾಯನ ವಿಜ್ಞಾನ, ಏ.17ರಂದು ಗಣಿತ ಮತ್ತು ಜೀವ ವಿಜ್ಞಾನ ವಿಷಯಗಳ ಪರೀಕ್ಷೆಗಳನ್ನು 775 ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾಗಿತ್ತು.

ದ್ವಿತೀಯ ಪಿಯು ಪರೀಕ್ಷೆ–1 ಮತ್ತು ಪರೀಕ್ಷೆ–2, ಸಿಬಿಎಸ್‌ಇ, ಐಸಿಎಸ್‌ಇ ಫಲಿತಾಂಶ ಪ್ರಕಟವಾಗಿದ್ದು, ಅಭ್ಯರ್ಥಿಗಳು ಪಡೆದ ಅಂಕಗಳ ಕೂಡುವಿಕೆ ಕಾರ್ಯವನ್ನು ಕೆಇಎ ಪೂರ್ಣಗೊಳಿಸಿದೆ. ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಹೊರನಾಡು ಮತ್ತು ಗಡಿನಾಡು ಕನ್ನಡಿಗ ಅಭ್ಯರ್ಥಿಗಳಿಗೆ ಏ. 15ರಂದು ಕನ್ನಡ ಭಾಷಾ

■ 11ನೇ ಪುಟಕ್ಕೆ

ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆಯ ಅವಧಿ ಮತ್ತೆ ವಿಸ್ತರಣೆ

ಬೆಂಗಳೂರು, ಮೇ 23– ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಕಲ್ಪಿಸಲು ನಡೆಸುತ್ತಿರುವ ಸಮೀಕ್ಷೆಯ ಅವಧಿಯನ್ನು ಮೇ 29ರವರೆಗೆ ಎರಡನೇ ಬಾರಿಗೆ ವಿಸ್ತರಿಸಿ ಆದೇಶಿಸಲಾಗಿದೆ.

ಹೈಕೋರ್ಟ್ ನಿವೃತ್ತ ನ್ಯಾಯಾಧೀಶರಾದ ಡಾ.ಹೆಚ್.ಎನ್.ನಾಗಮೋಹನ್ ದಾಸ್ ಅವರ ಅಧ್ಯಕ್ಷತೆಯಲ್ಲಿ ಏಕಸದಸ್ಯ ಆಯೋಗಕ್ಕೆ ಸಮೀಕ್ಷೆ ಅವಧಿ ವಿಸ್ತರಿಸಿ ಸರ್ಕಾರ ಆದೇಶ ಹೊರಡಿಸಿದೆ.

ಬಿಬಿಎಂಪಿ ವ್ಯಾಪ್ತಿಯ ವಲಯಗಳಲ್ಲಿ ಪರಿಶಿಷ್ಟ ಜಾತಿ ಜನಾಂಗದ ಸಮೀಕ್ಷೆ ಕಾರ್ಯವು ಇನ್ನೂ ಪ್ರಗತಿಯಾಗಬೇಕಾಗಿದೆ. ಹೀಗಾಗಿ ಮಳೆ/ಹವಾಮಾನ ವೈಪರೀತ್ಯ ಕಾರಣಗಳಿಂದಾಗಿ, ಅನೇಕ ಪರಿಶಿಷ್ಟ ಜಾತಿ ಸಂಘಗಳ ಮತ್ತು ಬೆಂಗಳೂರು ಮಹಾನಗರ ಪಾಲಿಕೆಯ ಕೋರಿಕೆಯ ಮೇರೆಗೆ ಸಮೀಕ್ಷಾ ಕಾರ್ಯವನ್ನು

■ 11ನೇ ಪುಟಕ್ಕೆ

ಕಾಂಗ್ರೆಸ್ ಮಹಾನಾಯಕನಿಂದಲೇ ಪರಮೇಶ್ವರ್‌ಗೆ ಸಂಕಷ್ಟ!

- ಡಿ.ಕೆ.ಶಿವಕುಮಾರ್ ವಿರುದ್ಧ ಕೇಂದ್ರ ಸಚಿವ ಕುಮಾರಸ್ವಾಮಿ ಪರೋಕ್ಷ ವಾಗ್ದಾಳಿ
- ಮುಖ್ಯಮಂತ್ರಿ ರೇಸ್‌ನಲ್ಲಿದ್ದ ಪರಮೇಶ್ವರ್ ಮುಗಿಸುವ ಹುನ್ನಾರ ಆರೋಪ



ಹೆಚ್.ಡಿ. ಕುಮಾರಸ್ವಾಮಿ



ಡಾ.ಜಿ.ಪರಮೇಶ್ವರ್

ಬೆಂಗಳೂರು, ಮೇ 23(ಕೆಎಂಶಿ)– ಪೆನ್‌ಡ್ರೈವ್, ಸಿ.ಡಿ. ಫ್ಯಾಕ್ಟರಿ ಮಾಲೀಕರೇ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ.) ಇಕ್ಕಳಕ್ಕೆ ಸಿಲುಕಿಸಿದ್ದಾರೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಬಾಂಬ್ ಸಿಡಿಸಿದ್ದಾರೆ.

ಬಹಳ ದಿನಗಳ ನಂತರ ದೆಹಲಿಯ ತಮ್ಮ ಸರ್ಕಾರಿ ನಿವಾಸದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಹಕಾರಿ ಸಚಿವ ಕೆ.ಎನ್.ರಾಜಣ್ಣ ವಿಧಾನಸಭೆಯಲ್ಲಿ ಯಾರನ್ನು ಗುರಿಯಾಗಿಟ್ಟುಕೊಂಡು ಸಿ.ಡಿ. ಮತ್ತು ಪೆನ್‌ಡ್ರೈವ್ ಬಗ್ಗೆ ಮಾತನಾಡಿದರೋ ಅವರೇ ಇವರು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೆಸರನ್ನು ಎಲ್ಲೂ ಪ್ರಸ್ತಾಪಿಸದೆ ವಾಗ್ದಾಳಿ ಮಾಡಿದರು. ಮುಖ್ಯಮಂತ್ರಿ ಕುರ್ಚಿಗೆ ಟವೆಲ್ ಹಾಕಿಕೊಂಡಿರುವ ಈ ಮಹಾನ್ ನಾಯಕ ತಮ್ಮ ಉದ್ದೇಶಕ್ಕೆ ಅಡ್ಡಿ ಬರುವ ಎಲ್ಲರನ್ನೂ ಒಂದಲ್ಲಾ ಒಂದು ರೀತಿ ಖೆಡ್ಡಾಕ್ಕೆ ಬೀಳಿಸುತ್ತಾರೆ. ದಲಿತ ಮುಖಂಡ ಮತ್ತು ಅನುಭವಿ ರಾಜಕಾರಣಿ ಡಾ. ಪರಮೇಶ್ವರ್ ಮುಖ್ಯಮಂತ್ರಿ ರೇಸ್‌ನಲ್ಲಿದ್ದರು, ಅವರು ಇದನ್ನು ಹೇಳಿಕೊಂಡೂ ಇದ್ದರು. ಅಷ್ಟೇ ಅಲ್ಲ, ಪರಿಶಿಷ್ಟ ಜಾತಿ, ಪಂಗಡದ ಶಾಸಕರು, ಸಚಿವರ ಸಂಘಟನೆ ಮಾಡಿ ದಲಿತರ ಬೃಹತ್ ಸಮಾವೇಶ ನಡೆಸಲೂ ಹೊರಟಿದ್ದರು.

ಮುಖ್ಯಮಂತ್ರಿ ಗಾದಿಯ ಪ್ರಮುಖ ರೇಸ್‌ನಲ್ಲಿದ್ದ ಡಾ. ಪರಮೇಶ್ವರ್ ನಡೆ ಸಹಿಸಿಕೊಳ್ಳದೆ, ದುಬೈನಿಂದ ಮಹಿಳೆ ಚಿನ್ನ ತರುವ ಮಾಹಿತಿ ಸೋರಿಕೆ ಮಾಡಿದ್ದೇ ಈ ಪ್ರಭಾವೀ ನಾಯಕ. ಆಕೆ ದುಬೈನಿಂದ ಚಿನ್ನ ಸ್ಮಗ್ಲಿಂಗ್ ಮಾಡುತ್ತಿದ್ದಾಳೆ ಎನ್ನುವ ವಿಚಾರ ಈ ಪ್ರಭಾವೀ ನಾಯಕನಿಗೆ ಹೇಗೆ ಗೊತ್ತು ಎಂದು ಕುಮಾರಸ್ವಾಮಿ ಪ್ರಶ್ನಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಬಳಿ ಗುಪ್ತಚರ ವಿಭಾಗ ಇದೆಯಲ್ಲ, ಅವರಿಗೆ

■ 11ನೇ ಪುಟಕ್ಕೆ

ಕುಮಾರಸ್ವಾಮಿ ಒಬ್ಬ ಮೆಂಟಲ್!

ಬೆಂಗಳೂರು, ಮೇ 23(ಕೆಎಂಶಿ)– ಸುಳ್ಳಿಗೆ ಮತ್ತೊಂದು ಹೆಸರೇ ಕುಮಾರಸ್ವಾಮಿ, ಅವರೊಬ್ಬ ಮೆಂಟಲ್, ಅವರ ಮಾನಸಿಕ ಆರೋಗ್ಯ ಹದಗೆಟ್ಟಿರಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಿಡಿಕಾರಿದ್ದಾರೆ.

ಚಿತ್ರನಟಿಯಿಂದ ಚಿನ್ನ ಕಳ್ಳಸಾಗಣೆ ಮಾಹಿತಿ ನೀಡಿದವರು ನೀವೇ ಎಂಬರ್ಥದಲ್ಲಿ ಕುಮಾರಸ್ವಾಮಿ ಆರೋಪಿಸಿದ್ದಾರಲ್ಲಾ ಎಂಬ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಕುಮಾರಸ್ವಾಮಿಗೆ ತಲೆಕೆಟ್ಟು ಹೋಗಿದೆ ಎಂದು ಟೀಕಿಸಿದರು.

ಬೆಂಗಳೂರು ದಕ್ಷಿಣ ಜಿಲ್ಲೆಯಾಗಿ ರಾಮನಗರ ಜಿಲ್ಲೆ ಮರುನಾಮಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, ಕುಮಾರಸ್ವಾಮಿ ರಾಜಕೀಯ ಮಾಡಲು ರಾಮನಗರಕ್ಕೆ ಏಕೆ ಬಂದರು, ಹಾಸನದಲ್ಲಿಯೇ ಏಕೆ ರಾಜಕೀಯ ಮಾಡಲಿಲ್ಲ. ಮೊದಲು ಹೆಚ್.ಡಿ.ಕುಮಾರಸ್ವಾಮಿ ಎನ್ನುವ ಹೆಸರಿನಲ್ಲಿರುವ ಅವರ ಊರಿನ ಹೆಸರು ಹಾಗೂ ತಂದೆಯ ಹೆಸರನ್ನು ಏಕೆ ಇನ್ನೂ ಇಟ್ಟುಕೊಂಡಿದ್ದಾರೆ, ಅದನ್ನು ಬದಲಾವಣೆ ಮಾಡಿಕೊಳ್ಳಲಿ.

ನಾವು ಬೆಂಗಳೂರು ಜಿಲ್ಲೆಯವರು, ಒಂದೊಂದು ಊರಿನ ಹೆಸರಿಗೆ ತನ್ನದೇ ಆದ ಇತಿಹಾಸವಿರುತ್ತದೆ, ಮದ್ರಾಸ್ ಅನ್ನು ಮತ್ತೆ ಏಕೆ ಚೆನ್ನೈ ಎಂದು ಕರೆದರು, ಗುಲ್ಬರ್ಗಾ ವನ್ನು ಕಲಬುರಗಿ ಎಂದು ಮರು ನಾಮಕರಣ ಮಾಡಲಾಗಿದೆ, ನಮಗೂ ನಮ್ಮದೇ ಆದಂತಹ ಆಸೆ ಇರುತ್ತದೆ ಎಂದರು.




ಡಿ.ಕೆ.ಶಿವಕುಮಾರ್

ರಿಯಲ್ ಎಸ್ಟೇಟ್‌ಗಾಗಿ ಹೆಸರು ಬದಲಾವಣೆ ಮಾಡಲಾಗಿದೆ ಎಂಬ ಆರೋಪಕ್ಕೆ, ಹೌದು, ನಮ್ಮ ಹಳ್ಳಿ ಜನ ಉದ್ಧಾರವಾಗಬೇಕು, ಎಲ್ಲರಿಗೂ ಉದ್ಯೋಗ ಸಿಗಬೇಕು, ನಮ್ಮ ಜನರ ಆಸ್ತಿ ಮೌಲ್ಯ ಜಾಸ್ತಿಯಾಗಬೇಕು, ಪ್ರತಿಯೊಬ್ಬ ರೈತನಿಗೂ ಒಳ್ಳೆಯದಾಗಬೇಕು. ಹೊರದೇಶದಿಂದ ಜನರು ಬಂದು ಬಂಡವಾಳ ಹೂಡಿಕೆ ಮಾಡಬೇಕು, ಅಭಿವೃದ್ಧಿ ಆಗಬೇಕು ಎಂಬುದು ನಮ್ಮ ಆಸೆ ಎಂದರು. ಕನಕಪುರ ಸಂಸತ್ ಕ್ಷೇತ್ರವನ್ನು ಬೆಂಗಳೂರು ಗ್ರಾಮಾಂತರ ಎಂಬುದಾಗಿ ಏಕೆ ನಾಮಕರಣ ಮಾಡಿದರು, ರಾಮನಗರ ಊರಿನ ಹೆಸರು ಬದಲಾವಣೆ ಮಾಡುತ್ತಿಲ್ಲ, ರಾಮನಗರವೇ ಜಿಲ್ಲಾ ಕೇಂದ್ರವಾಗಿರುತ್ತದೆ ಎಂದರು.

ಅಧಿಕೃತವಾಗಿ ಮುಡಾ ವಿಸರ್ಜನೆ; ಮೈಸೂರು ಅಭಿವೃದ್ಧಿ ಪ್ರಾಧಿಕಾರ ಅಸ್ತಿತ್ವಕ್ಕೆ

ಸರ್ಕಾರದ ಅಧಿಕೃತ ಆದೇಶ



ಮೈಸೂರು, ಮೇ 23(ಆರ್‌ಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವನ್ನು ಸರ್ಕಾರ ವಿಘಟಿತಗೊಳಿಸಿದ್ದು (ವಿಸರ್ಜನೆ) ಇಂದಿನಿಂದ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ಅಸ್ತಿತ್ವಕ್ಕೆ ಬಂದಿದೆ.

ಈ ಸಂಬಂಧ ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ (ಅಭಿವೃದ್ಧಿ ಪ್ರಾಧಿಕಾರ ಮತ್ತು ನಗರ ಯೋಜನಾ ಸೇವೆಗಳು) ಕೆ. ಲತಾ ಇಂದು ಅಧಿಕೃತ ಆದೇಶ ಹೊರಡಿಸಿದ್ದು, ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ಕಾಯ್ದೆಯು 2025ರ ಮೇ 23ರಿಂದ ಜಾರಿಗೆ ಬರುವುದರಿಂದ ಕಲಂ 85(1) ರನ್ವಯ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವನ್ನು ಇದೇ ದಿನಾಂಕದಿಂದ ವಿಘಟಿತ (Dissolved) ಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ರಾಜ್ಯಪಾಲರು ಮೇ 13 ರಂದು ಅನುಮೋದನೆ

■ 11ನೇ ಪುಟಕ್ಕೆ

'ಮೈಸೂರು ಅಭಿವೃದ್ಧಿ ಪ್ರಾಧಿಕಾರ' ಕುರಿತು ರಘು ಕೌಟಿಲ್ಯ ಅವರ ವಿಶೇಷ ಲೇಖನ/ ಪುಟ–4

ಪ್ರಾಥಮಿಕ, ಪ್ರೌಢಶಾಲೆಗೆ 51 ಸಾವಿರ ಅತಿಥಿ ಶಿಕ್ಷಕರ ನೇಮಕಕ್ಕೆ ಸರ್ಕಾರ ಆದೇಶ

ಬೆಂಗಳೂರು, ಮೇ 23(ಕೆಎಂಶಿ)– ಶಿಕ್ಷಕರ ಕೊರತೆ ನೀಗಿಸುವ ಸಲುವಾಗಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ 51,000 ಅತಿಥಿ ಶಿಕ್ಷಕರ ನೇಮಕಕ್ಕೆ ಸರ್ಕಾರ ಆದೇಶ ಹೊರಡಿಸಿದೆ.

ನೇಮಕಾತಿಗೆ ಸಂಬಂಧಿಸಿದಂತೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ ಪತ್ರಿಕಾ ಹೇಳಿಕೆ ನೀಡಿದ್ದು, ಮೇ 29ರಿಂದ ಶಾಲೆಗಳು ಪುನರಾರಂಭಗೊಳ್ಳಲಿದ್ದು, ಅದಕ್ಕೂ ಮುನ್ನವೇ ನೇಮಕಾತಿ ನಡೆಯಲಿದೆ ಎಂದಿದ್ದಾರೆ. ಅತಿಥಿ ಶಿಕ್ಷಕರ ಪೈಕಿ 40,000 ಸರ್ಕಾರಿ ಪ್ರಾಥಮಿಕ ಶಾಲೆಗಳಿಗೂ, ಉಳಿದ 11,000 ಪ್ರೌಢಶಾಲೆಗಳಿಗೆ ನೇಮಕ ಮಾಡಿಕೊಳ್ಳುವುದಾಗಿ ತಿಳಿಸಿದ್ದಾರೆ. ವಿದ್ಯಾರ್ಥಿಗಳು ಶಿಕ್ಷಕರ ಕೊರತೆಯಿಂದ ಶಿಕ್ಷಣದಿಂದ ವಂಚಿತರಾಗಬಾರದು ಎಂಬ ದೃಷ್ಟಿಯಿಂದ ಇಲಾಖೆ ಇಂತಹ ಮಹತ್ವದ ಮತ್ತು ತ್ವರಿತ ನಿರ್ಧಾರ ಕೈಗೊಂಡಿದೆ. ಹೊಸ ಶೈಕ್ಷಣಿಕ ವರ್ಷ ಆರಂಭವಾಗುವ

■ 11ನೇ ಪುಟಕ್ಕೆ

ಮತ್ತೆ ಕೋವಿಡ್ ಭೀತಿ: 9 ತಿಂಗಳ ಮಗುವಿಗೆ ಸೋಂಕು

ಬೆಂಗಳೂರು, ಮೇ 23– ದೇಶದಲ್ಲಿ ಮತ್ತೆ ಕೋವಿಡ್ ಭೀತಿ ಶುರುವಾಗಿದ್ದು, ಸಿಲಿಕಾನ್ ಸಿಟಿ ಬೆಂಗಳೂರಿಗೂ ಕೊರೊನಾ ಸೋಂಕು ವಕ್ಕರಿಸಿದೆ. ಬೆಂಗಳೂರಿನಲ್ಲಿ ಒಂಬತ್ತು ತಿಂಗಳ ಮಗುವಿಗೆ ಕೋವಿಡ್ –19 ಪಾಸಿಟಿವ್ ದೃಢಪಟ್ಟಿದ್ದು, ಈ ಬಗ್ಗೆ ಆರೋಗ್ಯ ಇಲಾಖೆ ಅಧಿಕಾರಿಗಳು ಶುಕ್ರವಾರ ಮಾಹಿತಿ ನೀಡಿದ್ದಾರೆ.



ಮೇ 22ರಂದು ರಾಪಿಡ್ ಆಂಟಿಜೆನ್ ಪರೀಕ್ಷೆ (ಆರ್‌ಎಟಿ) ಮೂಲಕ ಮಗುವಿಗೆ ಪಾಸಿಟಿವ್ ಬಂದಿದೆ. ರೋಗಿ ಸ್ಥಿರವಾಗಿದ್ದಾರೆ ಮತ್ತು ಪ್ರಸ್ತುತ ಬೆಂಗಳೂರಿನ ವಾಣಿವಿಲಾಸ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹರ್ಷ್ ಗುಪ್ತಾ ತಿಳಿಸಿದ್ದಾರೆ.

ಮೈಸೂರು ಜಿಲ್ಲಾಸ್ಪತ್ರೆಯಲ್ಲಿ 'ಡೇ ಕೇರ್ ಕಿಮೋಥೆರಪಿ'

ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ

- ಇದರೊಂದಿಗೆ ರಾಜ್ಯದ 16 ಜಿಲ್ಲಾಸ್ಪತ್ರೆಯಲ್ಲಿ ಈ ಸೇವೆ ಆರಂಭ
- ಕ್ಯಾನ್ಸರ್ ರೋಗಿಗಳಿಗೆ ವರ ಪ್ರಸಾದ; ಇನ್ನು ಬೆಂಗಳೂರು ಕಿದ್ವಾಯಿಗೆ ಹೋಗುವ ಜರೂರತ್ತಿಲ್ಲ



ಮೈಸೂರಿನ ಜಿಲ್ಲಾಸ್ಪತ್ರೆಯಲ್ಲಿ ಡೇ ಕೇರ್ ಕಿಮೋಥೆರಪಿ ಚಿಕಿತ್ಸಾ ಕೇಂದ್ರ ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಇಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳಿಗೆ ಆತ್ಮಸ್ಥೈರ್ಯ ತುಂಬಿದರು. ಈ ವೇಳೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಶಾಸಕ ಕೆ.ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಇದ್ದಾರೆ.

ಮೈಸೂರಲ್ಲಿ ನಿಮ್ಹಾನ್ಸ್ ಘಟಕ ಶೀಘ್ರ ಸ್ಥಾಪನೆ

ರಾಜ್ಯದ ಏಳು ಕೋಟಿ ಜನರ ಆರೋಗ್ಯ ಸೇವೆ ಬೆಂಗಳೂರು ಕೇಂದ್ರೀಕೃತವಾಗದೆ ಆಯಾಯ ಜಿಲ್ಲೆಗಳಲ್ಲೇ ಚಿಕಿತ್ಸೆ ದೊರಕಬೇಕೆಂಬ ಆಶಯದಿಂದ ಕ್ರಮ ವಹಿಸಲಾಗುತ್ತಿದೆ. ಬೆಂಗಳೂರು ನಂತರ ಹೆಚ್ಚು ಜನಸಂದಣಿ ಇರುವುದು ಮೈಸೂರಿನಲ್ಲಿ. ಹಾಗಾಗಿ ಇಲ್ಲಿ ಎಲ್ಲಾ ರೀತಿಯ ವೈದ್ಯಕೀಯ ವ್ಯವಸ್ಥೆ ಕಲ್ಪಿಸಲಾಗಿದೆ. ಇಲ್ಲಿ ಎಂಆರ್‌ಐ ಸೌಲಭ್ಯ ನೀಡಲು ನಿನ್ನೆ ಸಚಿವ ಸಂಪುಟದಲ್ಲಿ ಅನುಮೋದಿಸಲಾಗಿದೆ. ಕಳೆದ ಬಜೆಟ್‌ನಲ್ಲಿ ಘೋಷಣೆಯಾಗಿರುವ ನಿಮ್ಹಾನ್ಸ್ ಘಟಕ ಸ್ಥಾಪನೆಗೂ ಕ್ರಮ ವಹಿಸಲಾಗುವುದು. ಈಗಾಗಲೇ ರಾಜ್ಯದ 240 ಕೇಂದ್ರಗಳಲ್ಲಿ ಕಿಡ್ನಿ ಸಮಸ್ಯೆಯಾದವರಿಗೆ ಡಯಾಲಿಸಿಸ್ ಸೇವೆ ನೀಡಲಾಗುತ್ತಿದೆ.

–ಸಿದ್ದರಾಮಯ್ಯ, ಮುಖ್ಯಮಂತ್ರಿ

ಮೈಸೂರು, ಮೇ 23(ಎಸ್‌ಬಿಡಿ)– ಮೈಸೂರು ಸೇರಿದಂತೆ ರಾಜ್ಯದ 16 ಜಿಲ್ಲಾ ಆಸ್ಪತ್ರೆಗಳಲ್ಲಿ ನೂತನವಾಗಿ ಆರಂಭಿಸಿರುವ 'ಡೇ ಕೇರ್ ಕಿಮೋಥೆರಪಿ ಚಿಕಿತ್ಸಾ ಕೇಂದ್ರ'ಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಶುಕ್ರವಾರ ಮೈಸೂರಿನಲ್ಲಿ ವಿದ್ಯುಕ್ತವಾಗಿ ಉದ್ಘಾಟಿಸಿದರು.

ಮೈಸೂರು ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಕಿಮೋಥೆರಪಿ ಸೇವೆಗೆ ಚಾಲನೆ ನೀಡಿದರು. ಇದಕ್ಕೂ ಮುನ್ನ ಕಿದ್ವಾಯಿ ಸಂಸ್ಥೆ ಸಹಯೋಗದಲ್ಲಿ ಜಿಲ್ಲಾ ಆಸ್ಪತ್ರೆಯಲ್ಲಿ ಆರಂಭಿಸಿರುವ 20 ಹಾಸಿಗೆ ಸಾಮರ್ಥ್ಯದ ಕಿಮೋಥೆರಪಿ ಚಿಕಿತ್ಸಾ ಕೇಂದ್ರವನ್ನು ಉದ್ಘಾಟಿಸಿ, ರೋಗಿಗಳ ಆರೋಗ್ಯ ವಿಚಾರಿಸಿದರು.

ದೇಶದಲ್ಲಿ 2ನೇ ಸ್ಥಾನ: ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ದೇಶದಲ್ಲಿ ತಮಿಳುನಾಡು ನಂತರ ಅತೀ ಹೆಚ್ಚು ಜನ ಕ್ಯಾನ್ಸರ್‌ಗೆ ತುತ್ತಾಗುತ್ತಿರುವುದು ಕರ್ನಾಟಕದಲ್ಲಿ. ನಮ್ಮ ರಾಜ್ಯದಲ್ಲಿ ವರ್ಷಕ್ಕೆ 70 ಸಾವಿರ ಜನರಲ್ಲಿ ಕ್ಯಾನ್ಸರ್ ಪತ್ತೆಯಾಗುತ್ತಿದೆ. ಬಹಳ ಜನ ಕ್ಯಾನ್ಸರ್ ರೋಗಿಗಳು ಚಿಕಿತ್ಸೆಗೆ ಬೆಂಗಳೂರಿನ ಕಿದ್ವಾಯಿ ಸಂಸ್ಥೆಗೆ ಹೋಗಬೇಕಿತ್ತು. ಆದರೆ ಅದು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಇತ್ತೀಚೆಗೆ ಕ್ಯಾನ್ಸರ್ ವಾಸಿ ಮಾಡುವ ಔಷಧಿಗಳೂ ಲಭ್ಯವಾಗುತ್ತಿವೆ ಎಂದು ವೈದ್ಯರು ತಿಳಿಸಿದರು. ಆದರೆ ಆ ಔಷಧಿಯ ಬೆಲೆ ದುಬಾರಿ. ಹಾಗಾಗಿ ಅದೆಷ್ಟೋ ಜನ ಚಿಕಿತ್ಸೆ ಪಡೆಯದೆ ಸಾವಿಗೀಡಾಗುತ್ತಿದ್ದಾರೆ. ಆದ್ದರಿಂದ ಕ್ಯಾನ್ಸರ್ ರೋಗಿಗಳ ಜೀವ ರಕ್ಷಣೆ ದೃಷ್ಟಿಯಿಂದ 16 ಜಿಲ್ಲಾ ಆಸ್ಪತ್ರೆಗಳಲ್ಲಿ ತಲಾ 10 ಹಾಸಿಗೆ ಸಾಮರ್ಥ್ಯದ ಕಿಮೋಥೆರಪಿ ಚಿಕಿತ್ಸಾ ಕೇಂದ್ರಗಳನ್ನು ಆರಂಭಿಸಲಾಗಿದೆ. 2024–25ನೇ ಸಾಲಿನ ಆಯವ್ಯಯದಲ್ಲೇ ಘೋಷಣೆ ಮಾಡಲಾಗಿತ್ತು. ಆದರೆ ಕಾರಣಾಂತರಗಳಿಂದ ಕಳೆದ ವರ್ಷ ಸೇವೆ ನೀಡಲು ಸಾಧ್ಯವಾಗಲಿಲ್ಲ. ಈಗಿನಿಂದ ಆರಂಭವಾಗಿರುವ 16 ಕಿಮೋಥೆರಪಿ ಕೇಂದ್ರಗಳಿಂದ ಚಿಕಿತ್ಸೆಗಾಗಿ ನೂರು ಕಿಮೀ ಪ್ರಯಾಣಿಸಬೇಕಿದ್ದ

■ 11ನೇ ಪುಟಕ್ಕೆ

ಮೈಸೂರು ಮಿತ್ರ
ಶನಿವಾರ 24 ಮೇ 2025

ನಾಗರಹೊಳೆ ಅಭಯಾರಣ್ಯದಲ್ಲಿ ಆನೆ ಗಣತಿ ಆರಂಭ

● ಮೂರು ಹಂತದಲ್ಲಿ 300 ಸಿಬ್ಬಂದಿಯಿಂದ ಗಣತಿ ಕಾರ್ಯ ● ಆನೆ–ಮಾನವ ಸಂಘರ್ಷಕ್ಕೆ ಪರಿಹಾರ ಕಂಡುಕೊಳ್ಳುವ ಉದ್ದೇಶವೂ ಇದೆ.




ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಶುಕ್ರವಾರ ಆರಂಭವಾದ ಆನೆ ಗಣತಿ ಕಾರ್ಯದಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾದ ಪಿ.ಎ.ಸೀಮಾ, ಎಸಿಎಫ್ ಲಕ್ಷ್ಮೀಕಾಂತ್ ಪರಿಶೀಲಿಸಿದರು. ಮತ್ತೊಂದು ಚಿತ್ರದಲ್ಲಿ ಅರಣ್ಯ ಪ್ರದೇಶದಲ್ಲಿ ಆನೆ ಗಣತಿಗಾಗಿ ಗಸ್ತಿನಲ್ಲಿರುವ ಸಿಬ್ಬಂದಿ ತಂಡವನ್ನು ಕಾಣಬಹುದು.

ಮೈಸೂರು,ಮೇ 23(ಎಂಟಿವೈ)– ಅರಣ್ಯ ಹಾಗೂ ಅಂತರರಾಜ್ಯ ಗಡಿಭಾಗದಲ್ಲಿ ಮಾನವ ಹಾಗೂ ಕಾಡಾನೆ ಸಂಘರ್ಷ ತಡೆಗಟ್ಟುವುದರೊಂದಿಗೆ ಆನೆಗಳ ನಿಖರ ಸಂಖ್ಯೆ ದಾಖಲು ನಿಟ್ಟಿನಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಇಂದಿನಿಂದ ಮೂರು ದಿನಗಳ ಆನೆ ಗಣತಿ ಕಾರ್ಯ ಆರಂಭವಾಗಿದೆ. 300ಕ್ಕೂ ಹೆಚ್ಚು ಸಿಬ್ಬಂದಿ ಮೂರು ಹಂತದಲ್ಲಿ ವೈಜ್ಞಾನಿಕ ವಿಧಾನದಲ್ಲಿ ಆನೆ ಗಣತಿ ನಡೆಸಲಿದ್ದಾರೆ.

ದಕ್ಷಿಣ ಭಾರತದ ಕರ್ನಾಟಕ, ಕೇರಳ ಹಾಗೂ ತಮಿಳುನಾಡಿನಲ್ಲಿ ಏಕಕಾಲಕ್ಕೆ ಇಂದಿನಿಂದ ಆನೆ ಗಣತಿ ಕಾರ್ಯ ಆರಂಭವಾಗಿದ್ದು, ಈ ಮೂರು ರಾಜ್ಯಗಳ ಅರಣ್ಯ ಸಿಬ್ಬಂದಿ ಆಯಾ ಅರಣ್ಯ ಪ್ರದೇಶದಲ್ಲಿ ಗಣತಿ ಕಾರ್ಯ ನಡೆಸಿ, ಆನೆಗಳ ನಿಖರ ಸಂಖ್ಯೆಯನ್ನು ದಾಖಲಿಸಲಿದ್ದಾರೆ. ಇತ್ತೀಚಿನ ದಿನಗಳಲ್ಲಿ ಕಾಡಾನೆ ಹಾಗೂ ಮಾನವರ ಸಂಘರ್ಷ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಆನೆ ದಾಳಿಯಿಂದಾಗಿ ಜೀವ ಹಾನಿಯೂ ಸಂಭವಿಸುತ್ತಿದೆ. ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಆನೆಗಳ ನಿಖರ ಸಂಖ್ಯೆ ಪತ್ತೆ ಮಾಡಿ, ಅಗತ್ಯ ಕ್ರಮ ಕೈಗೊಳ್ಳಲು ಉದ್ದೇಶಿಸಿ ಆನೆ ಗಣತಿ ಕಾರ್ಯ ಆರಂಭಿಸಲಾಗಿದೆ.

ನಾಗರಹೊಳೆಯಲ್ಲಿ ಗಣತಿ ಕಾರ್ಯ: ಒಂದೆಡೆ ಕೇರಳ, ಮತ್ತೊಂದೆಡೆ ಮೈಸೂರು, ಕೊಡಗು ಜಿಲ್ಲಾ ಗಡಿ ಹೊಂದಿಕೊಂಡಿರುವ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಶುಕ್ರವಾರದಿಂದ ಮೂರು ಹಂತದಲ್ಲಿ ಆನೆ ಗಣತಿ ಕಾರ್ಯ ನಡೆಯಲಿದೆ. ಮೊದಲ ದಿನ ಬ್ಲಾಕ್ ಸ್ಯಾಂಪ್ಲಿಂಗ್, ಮೇ 24ರಂದು ಲೈನ್ ಟ್ರಾನ್ಸೆಕ್ಟ್ ಮತ್ತು ಮೇ 25ರಂದು ವಾಟರ್ ಹೋಲ್ ಕೌಂಟ್ ಮೂಲಕ ಗಣತಿ ನಡೆಯಲಿದೆ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ 8 ವಲಯಗಳಾದ ಹುಣಸೂರು, ವೀರನಹೊಸಳ್ಳಿ, ಮೇಟಿಕುಪ್ಪೆ, ಅಂತರಸಂತೆ, ಡಿ.ಬಿ.ಕುಪ್ಪೆ, ನಾಗರಹೊಳೆ, ಕಲ್ಲಹಳ್ಳ, ಆನೆಚೌಕೂರು ವಲಯದಲ್ಲಿ 91 ಗಸ್ತು ಪ್ರದೇಶ ಗುರುತಿಸಲಾಗಿದ್ದು, ಅವುಗಳಲ್ಲಿ ಮೂವರು ಸಿಬ್ಬಂದಿಗಳಲ್ಲ ತಂಡವನ್ನು ಒಂದೊಂದು ಗಸ್ತು ಪ್ರದೇಶಕ್ಕೆ ಆನೆ ಗಣತಿಗೆ ನಿಯೋಜಿಸಲಾಗಿದೆ.

ಮೊದಲ ದಿನ (ಬ್ಲಾಕ್ ಸ್ಯಾಂಪ್ಲಿಂಗ್): ಮೊದಲ ದಿನವಾದ ಇಂದು 5 ಚ.ಕಿ.ಮೀ ವ್ಯಾಪ್ತಿಯ ಬ್ಲಾಕ್‌ಗಳಲ್ಲಿ ಗಣತಿಗಾಗಿ ನಿಯೋಜಿಸಿರುವ ಸಿಬ್ಬಂದಿ ಕನಿಷ್ಠ 15 ಕಿ.ಮೀ ಕಾಲ್ನಡಿಗೆಯಲ್ಲಿ ಸಾಗಿ ಕಣ್ಣಿಗೆ ಬೀಳುವ ಆನೆಗಳ ದಾಖಲಿಸಲಿದ್ದಾರೆ. ಅದು ಗಂಡಾನೆಯೇ ಇಲ್ಲ, ಹೆಣ್ಣಾನೆಯೇ, ಮರಿ ಆನೆಗಳ ಸಂಖ್ಯೆ ದಾಖಲಿಸಲಿದ್ದಾರೆ. ಅಲ್ಲದೆ, ಅವುಗಳ ಅಂದಾಜು ವಯಸ್ಸು ಇತರೆ ಮಾಹಿತಿ ದಾಖಲಿಸಲಾಗುತ್ತದೆ.

ಎರಡನೇ ದಿನ (ಲೈನ್ ಟ್ರಾನ್ಸೆಕ್ಟ್): ಎರಡನೇ ದಿನವಾದ ಶನಿವಾರ 2 ಕಿ.ಮೀ ಟ್ರಾನ್ಸೆಕ್ಟ್ ಅನ್ನು ಮುಂಜಾನೆ 6 ಗಂಟೆಗೆ ಆರಂಭಿಸಲಾಗುತ್ತದೆ. ಟ್ರಾನ್ಸೆಕ್ಟ್ ನಡಿಗೆಯಲ್ಲಿ ಎರಡೂ ಬದಿಯಲ್ಲಿ ಕಾಣಸಿಗುವ ಆನೆಗಳ ಲದ್ದಿ, ಹೆಜ್ಜೆಗಳ ಗುರುತುಗಳ ಮಾಹಿತಿಯನ್ನು ದಾಖಲಿಸಲಾಗುತ್ತದೆ.

ಮೂರನೇ ದಿನ 3 (ಕೆರೆಗಳ ಬಳಿ ಗಣತಿ): ಮೂರನೇ ದಿನವಾದ ಭಾನುವಾರ ಗಣತಿಗಾಗಿ ಗುರುತಿಸಿರುವ ಗಸ್ತು ವ್ಯಾಪ್ತಿಯಲ್ಲಿ ಆಯ್ದ ಕೆರೆಗಳ ಬಳಿ ಮುಂಜಾನೆ 6ರಿಂದ ಸಂಜೆ 6ರವರೆಗೆ ಕಾದು ಕುಳಿತು, ಕೆರೆಗೆ ಬರುವ ಆನೆಗಳ ಛಾಯಾಚಿತ್ರದೊಂದಿಗೆ ಮಾಹಿತಿಯನ್ನು ದಾಖಲಿಸುತ್ತಾರೆ.

ಆನೆಗಳ ಲಿಂಗ ಪ್ರಮಾಣ, ಪ್ರತಿ ಕಿ.ಮೀಗೆ ಆನೆಗಳ ಸಾಂದ್ರತೆ ಹೆಚ್ಚಾಗಿರುವ ಪ್ರದೇಶಗಳನ್ನು ಗುರುತಿಸುವುದರಿಂದ ಮಾನವ–ಆನೆ ಸಂಘರ್ಷ ತಡೆಗಟ್ಟುವುದು, ಸಂರಕ್ಷಣಾ ನಿರ್ವಹಣೆ ತಂತ್ರಗಳನ್ನು ವಿನ್ಯಾಸಗೊಳಿಸುವುದಕ್ಕೆ ಅನುಕೂಲವಾಗುತ್ತದೆ. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶವು ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ವ್ಯಾಪಿಸಿದ್ದು ರಾಜ್ಯದಲ್ಲಿ ಹೆಚ್ಚು ಆನೆಗಳನ್ನು ಹೊಂದಿರುವ ಪ್ರದೇಶವಾಗಿರುತ್ತದೆ. ವಿಶಾಲವಾದ ಕಾರಿಡಾರ್ ಪ್ರದೇಶವನ್ನು ಹೊಂದಿರುತ್ತದೆ. ನಾಗರಹೊಳೆ ಹುಲಿ ಸಂರಕ್ಷಿತ ವ್ಯಾಪ್ತಿಯ 91 ಗಸ್ತುಗಳಲ್ಲಿ 300ಕ್ಕೂ ಹೆಚ್ಚು ಸಿಬ್ಬಂದಿ ಇದರಲ್ಲಿ ಭಾಗವಹಿಸಲಿದ್ದಾರೆ. ಗಣತಿಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದ್ದು ಆನ್‌ಲೈನ್ ಮೂಲಕ ಪ್ರತಿ ಗಸ್ತಿನಲ್ಲಿ ಕನಿಷ್ಠ ಒಬ್ಬ ಸಿಬ್ಬಂದಿಗೆ ಆನೆಗಣತಿಗೆ ತರಬೇತಿ ನೀಡಲಾಗಿದೆ ಎಂದು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ನಿರ್ದೇಶಕರಾದ ಪಿ.ಎ. ಸೀಮಾ ತಿಳಿಸಿದ್ದಾರೆ.

ರೌಂಡ್ ಟೇಬಲ್ ಇಂಡಿಯಾ ವತಿಯಿಂದ ಇಲವಾಲ ಸರ್ಕಾರಿ ಶಾಲೆಗೆ 4 ಕೊಠಡಿ ಬಳುವಳಿ



ರೌಂಡ್ ಟೇಬಲ್ ಇಂಡಿಯಾ ವತಿಯಿಂದ ಇಲವಾಲ ಸರ್ಕಾರಿ ಶಾಲೆಯಲ್ಲಿ ನಿರ್ಮಿಸಿರುವ 4 ತರಗತಿ ಕೊಠಡಿಗಳನ್ನು ಸಂಸದ ಯದುವೀರ್ ಉದ್ಘಾಟಿಸಿದರು. ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ಉಪಸ್ಥಿತರಿದ್ದರು.

ಮೈಸೂರು, ಮೇ 23(ಎಂಕೆ)– ಶಿಕ್ಷಣದ ಮೂಲಕ ಸ್ವಾತಂತ್ರ್ಯ ರಾಷ್ಟ್ರೀಯ ಯೋಜನೆಯಡಿ ಒನ್ ಮೋರ್ ಪ್ರೆಶ್ ಸಹಯೋಗದೊಂದಿಗೆ ರೌಂಡ್ ಟೇಬಲ್ ಇಂಡಿಯಾ ವತಿಯಿಂದ ಮೈಸೂರಿನ ಇಲವಾಲ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಿರ್ಮಿಸಿರುವ 4 ತರಗತಿ ಕೊಠಡಿಗಳನ್ನು ಶುಕ್ರವಾರ ಉದ್ಘಾಟಿಸಲಾಯಿತು.

ರೌಂಡ್ ಟೇಬಲ್ ಇಂಡಿಯಾ ದೇಶಾದ್ಯಂತ ಸರ್ಕಾರ ಶಾಲೆಗಳಲ್ಲಿ ತರಗತಿ ಕೊಠಡಿಗಳು, ಶೌಚಾಲಯಗಳು ಮತ್ತು ಕುಡಿಯುವ ನೀರಿನ ಸೌಲಭ್ಯ, ಗ್ರಂಥಾಲಯ, ವಿಜ್ಞಾನ ಪ್ರಯೋಗಾಲಯ, ಆಟದ ಮೈದಾನಗಳ ಅಭಿವೃದ್ಧಿ ಮೂಲಕ ಬಡ ಮಕ್ಕಳ ಶಿಕ್ಷಣಕ್ಕೆ ನೆರವಾಗುತ್ತಿದೆ. 1997 ರಿಂದ ರೌಂಡ್ ಟೇಬಲ್ ಇಂಡಿಯಾ ಸುಮಾರು 485 ಕೋಟಿ ರೂ. ವೆಚ್ಚದಲ್ಲಿ 3,782 ಯೋಜನೆಗಳನ್ನು ಕೈಗೊಂಡಿದ್ದು, ಸುಮಾರು 3.41 ಮಿಲಿಯನ್ ಚದರ ಅಡಿ ವಿಸ್ತೀರ್ಣ ಒಳಗೊಂಡ 9,272ಕ್ಕೂ ಹೆಚ್ಚು ತರಗತಿ ಕೊಠಡಿಗಳನ್ನು ನಿರ್ಮಿಸಿದೆ. ಇದರಿಂದ 10.2 ಮಿಲಿಯನ್ ಮಕ್ಕಳಿಗೆ ಅನುಕೂಲವಾಗಿದೆ.

ಮೈಸೂರು-ಕೊಡಗು ಲೋಕಸಭಾ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ನೂತನ ತರಗತಿ ಕೊಠಡಿಗಳನ್ನು ಉದ್ಘಾಟಿಸಿದರು. ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅಧ್ಯಕ್ಷತೆ ವಹಿಸಿದ್ದರು. ಬಿಇಒ ಎಂ.ಪ್ರಕಾಶ್, ಮೈಸೂರು ಗ್ರಾಮೀಣ ಕ್ಷೇತ್ರದ ಬಿಇಒ ಶ್ರೀ. ರೋಟರಿ ಮೈಸೂರು ಅಧ್ಯಕ್ಷ ಎನ್.ಪ್ರವೀಣ್, ಪಿರಮಿಡ್ ಟಿಂಬರ್ಸ್‌ನ ಅಲಿಯಾಸ್ಗರ್ ಎಂ.ವಾಘ್, ರಾಷ್ಟ್ರೀಯ ಯೋಜನೆಗಳ ಸಂಚಾಲಕ ಪ್ರವೀಶ್ ಜೈನ್, ಕುಮಾರ್‌ಪಾಲ್ ಎಂ ಜೈನ್, ಸಂಜನಾ ನಿರ್ಮಿತ್, ಕೆ.ಎ.ಮೋಹನ ರಾಜ್, ಅಕ್ಷಯ್ ಕೋನೇರಿ, ಕೆ.ಎಸ್. ಪವನ್, ಎಂ.ಎಸ್.ಸುಹಾಸ್, ನಿತಿನ್ ಪುರುಷೋತ್ತಮ್ ಮತ್ತಿತರರಿದ್ದರು.

ರಂಗ ಸಂಗೀತ, ಸಮಕಾಲೀನ ನೃತ್ಯ ಪ್ರದರ್ಶನ

ಮೈಸೂರು, ಮೇ 23– ರಂಗಾಯಣದ ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಅಭ್ಯಾಸ ಮಾಲಿಕೆಯಾಗಿ ಚಂದ್ರಶೇಖರ ಆಚಾರ್ ಹೆಗ್ಗೋಠಾರ ಅವರು ತರಬೇತಿ ನೀಡಿ ನಿರ್ದೇಶಿಸಿರುವ ರಂಗ ಸಂಗೀತ ಕಾರ್ಯಕ್ರಮ ಹಾಗೂ ದೀಪಕ್ ಹರ್ಷ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಸಮಕಾಲೀನ ನೃತ್ಯ ಪ್ರದರ್ಶನವನ್ನು ಮೇ 25 ರಂದು ಸಂಜೆ 6.30ಕ್ಕೆ ರಂಗಾಯಣದ ಭೂಮಿಗೀತ ರಂಗ ಮಂದಿರದಲ್ಲಿ ಏರ್ಪಡಿಸಲಾಗಿದೆ. ಪ್ರವೇಶ ಉಚಿತ.

ಶ್ರೀ ಕಲಾನಿಕೇತನ್ ನೂತನ ಮಳಿಗೆ ಉದ್ಘಾಟನೆ



ಶ್ರೀ ಕಲಾನಿಕೇತನ್ ನೂತನ ಮಳಿಗೆಯನ್ನು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪ್ರಕಾಶಕ ಸಂಸ್ಥೆ ಅಕಾಡೆಮಿ ನ್ಯೂಸ್ ಪೇಪರ್ಸ್ ಪ್ರೈವೇಟ್ ಲಿಮಿಟೆಡ್‌ನ ಕಾರ್ಯಕಾರಿ ನಿರ್ದೇಶಕರಾದ ಶ್ರೀಮತಿ ರ್‍ಯಾಲಿ ಗಣಪತಿ ಅವರು ಉದ್ಘಾಟಿಸಿದರು. ಸಂಸ್ಕೃತ ವಿದ್ವಾಂಸ ಭಾನುಪ್ರಕಾಶ್ ಶರ್ಮಾ, ಶ್ರೀ ಕಲಾನಿಕೇತನ್ ಮಾಲೀಕರಾದ ಶ್ರೀಮತಿ ರೇವತಿ ರೆಡ್ಡಿ, ಶ್ರೀಮತಿ ಕಾವೇರಮ್ಮ ಶೇಷಾದ್ರಿ ಮತ್ತಿತರರಿದ್ದರು.

ಮೈಸೂರು, ಮೇ 23(ಎಂಕೆ)– ಮೈಸೂರಿನ ವಿವಿ ಮೊಹಲ್ಲಾದ 7ನೇ ಮುಖ್ಯ ರಸ್ತೆಯ 6ನೇ ಕ್ರಾಸ್‌ನಲ್ಲಿ ಶ್ರೀ ಕಲಾನಿಕೇತನ್ 40ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ತೆರೆದಿರುವ ನೂತನ ಮಳಿಗೆಯನ್ನು ಶುಕ್ರವಾರ ಉದ್ಘಾಟಿಸಲಾಯಿತು.

ದೀಪ ಬೆಳಗಿಸಿ, ಟೇಪ್ ಕತ್ತರಿಸುವ ಮೂಲಕ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪ್ರಕಾಶಕ ಸಂಸ್ಥೆ ಅಕಾಡೆಮಿ ನ್ಯೂಸ್ ಪೇಪರ್ಸ್ ಪ್ರೈವೇಟ್ ಲಿಮಿಟೆಡ್‌ನ ಕಾರ್ಯಕಾರಿ ನಿರ್ದೇಶಕರಾದ ಶ್ರೀಮತಿ ರ್‍ಯಾಲಿ ಗಣಪತಿ ಅವರು ಮಳಿಗೆ ಉದ್ಘಾಟಿಸಿ ಶುಭಕೋರಿದರಲ್ಲದೆ 40 ವರ್ಷಗಳಿಂದ ಅಪಾರ ಮಹಿಳೆಯರ ಮೆಚ್ಚುಗೆಗೆ ಪಾತ್ರರಾದ ಶ್ರೀ ಕಲಾನಿಕೇತನ್‌ನ ಮಾಲೀಕರಾದ ರೇವತಿ ರೆಡ್ಡಿ ಅವರ ಸಾಧನೆ ಶ್ಲಾಘನೀಯ. ಎಲ್ಲರ ಪ್ರೋತ್ಸಾಹ ಅವರಿಗೆ ಸದಾ ಇರಲಿದೆ ಎಂದರು.


ವಿಶೇಷ ಆಹ್ವಾನಿತರಾಗಿ ಭಾಗವಹಿಸಿದ್ದ ಸಂಸ್ಕೃತ ವಿದ್ವಾಂಸ ಭಾನುಪ್ರಕಾಶ್ ಶರ್ಮಾ ಮಾತನಾಡಿ, ಮಹಿಳೆಯರಿಗಾಗಿಯೇ ತೆರೆದಿರುವ ವಿಶೇಷವಾದ ಮಳಿಗೆ ಇದಾಗಿದೆ. ಆಗಮಿಸಿರುವ ಎಲ್ಲರೂ ತಮಗೆ ಪರಿಚಿತ ಇರುವವರಿಗೆ ತಿಳಿಸಿದರೆ ಅವರು ಸಹ ಇಲ್ಲಿನ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಮುಖ್ಯವಾಗಿ ಮಹಿಳೆಯರಿಗೆ ಪ್ರೋತ್ಸಾಹ ನೀಡಬೇಕು ಎಂದರಲ್ಲದೆ ಜಗತ್ತಿಗೆ ಸೀರೆಯನ್ನು ಕೊಟ್ಟ ಶ್ರೀಕೃಷ್ಣನ ಫೋಟೋವನ್ನು ಮಳಿಗೆಯಲ್ಲಿಡುವಂತೆ ಸಲಹೆ ನೀಡಿದರು. ಶ್ರೀ ಕಲಾನಿಕೇತನ್ ಮಾಲೀಕರಾದ ಶ್ರೀಮತಿ ರೇವತಿ ರೆಡ್ಡಿ, ಶ್ರೀಮತಿ ಕಾವೇರಮ್ಮ ಶೇಷಾದ್ರಿ ಮತ್ತಿತರರಿದ್ದರು.

ವಿವಿಧ ಬಗೆಯ ಆಕರ್ಷಕ ಸೀರೆಗಳು ಲಭ್ಯ: ಶ್ರೀ ಕಲಾನಿಕೇತನ್‌ನ ನೂತನ ಮಳಿಗೆಯಲ್ಲಿ ನಾರಾಯಣಪೇಟೆ ರೇಷ್ಮೆ ಸೀರೆ, ಗದ್ವಾಲ್, ವೆಂಕಟಗಿರಿ, ಪೋಚಂಪಲ್ಲಿ ರೇಷ್ಮೆ ಸೀರೆಗಳು, ಕೈಮಗ್ಗದ ಮೂಲಕ ತಯಾರಾದ ಸೀರೆಗಳು, ಕಾಟನ್ ಸೀರೆಗಳು ಲಭ್ಯವಿವೆ.

ಬೈಲಕುಪ್ಪೆಯಲ್ಲಿ ಉಚಿತ ವೈದ್ಯಕೀಯ ಶಿಬಿರ

ಮೈಸೂರು, ಮೇ 23– ಎನ್‌ಜೆ ಆಸ್ಪತ್ರೆ – ಮೈಸೂರು ಇನ್ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋಎಂಟರಾಲಜಿ ಹಾಗೂ ಡ್ರಿಕುಂಗ್ ಚಾರಿಟಬಲ್ ಸೊಸೈಟಿ ವತಿಯಿಂದ ಬೈಲಕುಪ್ಪೆಯ ಕಾಗ್ಯೂಡ್ಪಾ ಮೊನಾಸ್ಟಿಕ್ ಇನ್ಸ್ಟಿಟ್ಯೂಟ್‌ನ ಟಿಡಿಎಲ್ ಕ್ಯಾಂಪ್ 5ರಲ್ಲಿ ಮೇ 25ರಂದು ಬೆಳಗ್ಗೆ 9ರಿಂದ ಸಂಜೆ 4ರವರೆಗೆ ಉಚಿತ ವೈದ್ಯಕೀಯ ಶಿಬಿರವನ್ನು ಆಯೋಜಿಸಲಾಗಿದೆ. ಬೋನ್ ಮಿನರಲ್ ಡೆನ್ಸಿಟಿ, ಲಿವರ್ ಫೈಬ್ರೋಸ್ಕಾನ್, ಗಾಲ್ ಬ್ಲಾಡರ್ ರಿಸ್ಕ್ ಸ್ಕ್ರೀನಿಂಗ್ ಹಾಗೂ ಬ್ಲಡ್ ಪ್ರೆಷರ್ ತಪಾಸಣೆ ಜೊತೆಗೆ ತಜ್ಞ ವೈದ್ಯರೊಂದಿಗೆ ಉಚಿತ ಸಮಾಲೋಚನೆ ಪ್ರಯೋಜನ ಪಡೆಯಬಹುದು. ಶಿಬಿರದಲ್ಲಿ ಜಾಯಿಂಟ್ ರೀಪ್ಲೇಸ್‌ಮೆಂಟ್ ಮತ್ತು ಸ್ಪೈನ್ ಸರ್ಜನ್ ಡಾ.ಮನು ಪ್ರಕಾಶ್, ಸ್ತ್ರೀರೋಗ ಹಾಗೂ ಅಪಾಯಕಾರಿ ಗರ್ಭಾವಸ್ಥೆ ತಜ್ಞೆ ಡಾ.ಸಿಂಧುಲಕ್ಷ್ಮೀ, ಗ್ಯಾಸ್ಟ್ರೋ ಸರ್ಜನ್ ಹಾಗೂ ಗ್ಯಾಸ್ಟ್ರೋ ಇಂಟೆಸ್ಟೈನಲ್ ಕ್ಯಾನ್ಸರ್ ತಜ್ಞ ಡಾ.ಸತೀಶ್ ದುರ್ಗೇಶ್, ಸ್ತ್ರೀರೋಗ, ಲ್ಯಾಪ್ರೋಸ್ಕೋಪಿಕ್ ಶಸ್ತ್ರಚಿಕಿತ್ಸೆ ಹಾಗೂ ಕ್ಯಾನ್ಸರ್ ತಜ್ಞೆ ಡಾ.ಮಮತಾ ಚಂದ್ರಪ್ಪ ಮತ್ತು ಡೆಂಟಲ್ ಸರ್ಜನ್ ಡಾ.ಮಹೇಶ್ ಭಾಗವಹಿಸಲಿದ್ದಾರೆ. ತಪಾಸಣೆಗೆ ಬರುವವರು ಹಿಂದಿನ ವೈದ್ಯಕೀಯ ದಾಖಲಾತಿಗಳನ್ನು ತರಬೇಕು. ಹೆಚ್ಚಿನ ಮಾಹಿತಿ ಹಾಗೂ ನೋಂದಣಿಗೆ ಮೊ.ಸಂ. 9986173718/ 8553373950 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಎಸ್‌ಎಸ್‌ಎಲ್‌ಸಿ: ಕು.ನಿತ್ಯಶ್ರೀ ಎನ್. ಉಡುಪ ರಾಜ್ಯಕ್ಕೆ ನಾಲ್ಕನೇ ಟಾಪರ್



ಮೈಸೂರು, ಮೇ 23– ಮೈಸೂರಿನ ರಾಮಕೃಷ್ಣನಗರದ ರಾಮಕೃಷ್ಣ ವಿದ್ಯಾಕೇಂದ್ರದ 10ನೇ ತರಗತಿಯ ಕು.ನಿತ್ಯಶ್ರೀ ಎನ್. ಉಡುಪಗೆ ಮರುಮೌಲ್ಯಮಾಪನದಲ್ಲಿ ಹೆಚ್ಚಿನ ಏಳು ಅಂಕ ಗಳಿಸುವುದರೊಂದಿಗೆ 622 ಅಂಕ ಪಡೆದು ರಾಜ್ಯಕ್ಕೆ ನಾಲ್ಕನೇ ಸ್ಥಾನ ಪಡೆದಿದ್ದಾರೆ. ಸಂಸ್ಕೃತ – 125, ಇಂಗ್ಲೀಷ್ – 98, ತೃತೀಯ ಭಾಷೆ ಕನ್ನಡ – 100, ಗಣಿತ – 100, ವಿಜ್ಞಾನ – 100, ಸಮಾಜಶಾಸ್ತ್ರ – 99.

ವೃದ್ಧ ಮಹಿಳೆಯರು ನಾಪತ್ತೆ

ಮೈಸೂರು, ಮೇ 23(ಎಂಕೆ)– ಮೈಸೂರು, ತಾಲೂಕಿನ ಹಡಜನ ಗ್ರಾಮದ ನಿವಾಸಿಗಳಾದ ಶಿವಮ್ಮ(79) ಹಾಗೂ ಪುಟ್ಟಬಸಮ್ಮ(82) ನಾಪತ್ತೆಯಾಗಿದ್ದು, ಈ ಸಂಬಂಧ ಮೈಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಶಿವಮ್ಮ: ಸುಮಾರು 79 ವರ್ಷದ ಶಿವಮ್ಮ 5.2 ಅಡಿ ಎತ್ತರವಿದ್ದು, ಸಾಧಾರಣ ಮೈಕಟ್ಟು, ಬಿಳಿ ಮೈ ಬಣ್ಣದವರಾಗಿದ್ದಾರೆ. ಕನ್ನಡ ಮಾತನಾಡಲಿದ್ದು, ಓದಲು–ಬರೆಯಲು ಬರುವುದಿಲ್ಲ.



ಪುಟ್ಟಬಸಮ್ಮ: 82 ವರ್ಷದ ಪುಟ್ಟಬಸಮ್ಮ 5 ಅಡಿ ಎತ್ತರ, ಎಣ್ಣೆಗೆಂಪು ಮೈಬಣ್ಣದವರಾಗಿದ್ದು, ಕನ್ನಡ ಬಿಟ್ಟು ಬೇರೆ ಭಾಷೆ ಮಾತನಾಡಲು ಬರುವುದಿಲ್ಲ. ಇಬ್ಬರು ವೃದ್ಧೆಯರ ಮಾಹಿತಿ ಕಂಡುಬಂದಲ್ಲಿ ಮೈಸೂರು ಜಿಲ್ಲೆಯ ಠಾಣಾಧಿಕಾರಿಗಳ ದೂ.ಸಂ.0821–2520040, ಪೊಲೀಸ್ ಕಂಟ್ರೋಲ್ ರೂಂ.ನಂ.0821–2444955, ಮೊ.ನಂ. 9880415196 ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ಬಾಲರಾಮನ ಮೂರ್ತಿ ಪ್ರತಿಷ್ಠಾಪನಾ ಧಾರ್ಮಿಕ ಕಾರ್ಯಕ್ಕೆ ಕೆಲವರ ಅಡ್ಡಿ

● ಮೈಸೂರಿನ ಹಾರೋಹಳ್ಳಿಯಲ್ಲಿ 'ದಕ್ಷಿಣ ಅಯೋಧ್ಯೆ' ಸ್ಥಾಪನೆ ಕೂಡದು; ದಲಿತ ಸಂಘಟನೆಗಳ ವಾದ
● ಫ್ಲೆಕ್ಸ್ ಕಿತ್ತು ಹಾಕಿ ಧಾರ್ಮಿಕ ಕಾರ್ಯಗಳಿಗೆ ತಡೆ; ದೇವಾಲಯ ನಿರ್ಮಾಣ ಪ್ರಕ್ರಿಯೆ ಸ್ಥಗಿತ

ಮೈಸೂರು, ಮೇ23(ಬಿಎಲ್ ಯು)– ಅಯೋಧ್ಯೆಯ ಬಾಲರಾಮನ ಮೂರ್ತಿಯ ಕಲ್ಲು ದೊರೆತ ಮೈಸೂರಿನ ಹಾರೋಹಳ್ಳಿ ಬಳಿಯ ಜಮೀನಿನಲ್ಲಿ 'ದಕ್ಷಿಣ ಅಯೋಧ್ಯೆ' ಹೆಸರಿನಲ್ಲಿ ದೇವಾಲಯ ನಿರ್ಮಾಣ ಮಾಡಲು ದಲಿತ ಪರ ಸಂಘಟನೆಗಳಿಂದ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಇಂದಿನಿಂದ ಆರಂಭವಾಗಬೇಕಿದ್ದ ದೇವಾಲಯ ನಿರ್ಮಾಣ ಕಾರ್ಯ ಸ್ಥಗಿತಗೊಂಡಿತು.



ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ನಿರ್ಮಾಣ ಮಾಡಿರುವ ರಾಮಮಂದಿರದಲ್ಲಿ ಪ್ರತಿಷ್ಠಾಪಿಸಿರುವ ಬಾಲರಾಮನ ವಿಗ್ರಹದ ಕಲ್ಲು ಮೈಸೂರಿನ ಹಾರೋಹಳ್ಳಿ ಬಳಿ ರಾಮದಾಸ್ ಎಂಬುವರ ಜಮೀನಿನಲ್ಲಿ ದೊರೆತಿತ್ತು.

ಅದು 'ಉತ್ತರ ಅಯೋಧ್ಯೆ'ಯಾದರೆ, ಬಾಲರಾಮನ ಕೆತ್ತನೆಗೆ ಕಲ್ಲು ದೊರೆತ ಹಾರೋಹಳ್ಳಿ 'ದಕ್ಷಿಣ ಅಯೋಧ್ಯೆ' ಎಂದು ನಿರ್ಧರಿಸಿ, ಇಲ್ಲಿ ದೇವಾಲಯ ನಿರ್ಮಾಣ ಮಾಡಲು ತೀರ್ಮಾನಿಸಲಾಗಿತ್ತು.

ಈ ಹಿನ್ನೆಲೆ ಜಮೀನಿನ ಮಾಲೀಕ ರಾಮದಾಸ್ ಅವರು ದಕ್ಷಿಣ ಅಯೋಧ್ಯೆ ಹೆಸರಿನಲ್ಲಿ ಇಂದು ದೇವಾಲಯ ನಿರ್ಮಾಣ ಕಾರ್ಯ ಆರಂಭಿಸಿದ್ದರು. ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ, ಸಂಸದ ಯದು ವೀರ್, ಸ್ಥಳೀಯ ಶಾಸಕ ಜಿ.ಟಿ.ದೇವೇಗೌಡ, ಬಾಲರಾಮನ ಮೂರ್ತಿ ಕೆತ್ತನೆ ಮಾಡಿದ ಅರುಣ್ ಯೋಗಿರಾಜ್, ಆರ್‌ಎಸ್‌ಎಸ್ ಮುಖಂಡ ವೆಂಕಟ ರಾಮ್‌ಜೀ ಸೇರಿದಂತೆ ಹಲವರನ್ನು ಇಂದಿನ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿತ್ತು.

ದಕ್ಷಿಣ ಅಯೋಧ್ಯೆಯ ದೇವಾಲಯ ನಿರ್ಮಾಣದ ಧಾರ್ಮಿಕ ಪೂಜಾ ಕೈಂಕರ್ಯ ಇಂದು ಬೆಳಗ್ಗೆ ಆರಂಭವಾಗಿತ್ತು. ಈ ವೇಳೆ ಸ್ಥಳಕ್ಕೆ ಬಂದ ಮಾಜಿ ಮೇಯರ್ ಪುರುಷೋತ್ತಮ್ ನೇತೃತ್ವದ ದಲಿತಪರ ಸಂಘಟನೆಯ ಕಾರ್ಯಕರ್ತರು, ಪೂಜಾ ಕಾರ್ಯಕ್ಕೆ ಅಡ್ಡಿಪಡಿಸಿದರು.

ಇದು ದಲಿತರ ಮಾಲೀಕತ್ವಕ್ಕೆ ಸೇರಿದ ಭೂಮಿಯಾದರೂ ಕೃಷಿಗಾಗಿ ಸರ್ಕಾರ ನೀಡಿರುವ ಭೂಮಿಯಾಗಿದೆ. ಇಲ್ಲಿ ಕೃಷಿಗೆ ಬಳಸದಿದ್ದರೆ ಶಿಕ್ಷಣ ಸಂಸ್ಥೆ ಇಲ್ಲವೇ ಗ್ರಂಥಾಲಯಕ್ಕೆ ಬಳಸಿದರೆ ನಮ್ಮ ಅಭ್ಯಂತರವಿಲ್ಲ. ಅದು ಬಿಟ್ಟು ದೇವಾಲಯದ ಹೆಸರಿನಲ್ಲಿ ಭೂಮಿ ಕಬಳಿಸಲು ನಾವು ಬಿಡುವುದಿಲ್ಲ ಎಂದು ಆರ್ಭಟಿಸಿದರು.

ಹಲವು ದಶಕಗಳಿಂದ ರಾಮನ ಭಜನೆ ಮಾಡಿಸುತ್ತಾ ನಮ್ಮನ್ನು ಅಜ್ಞಾನದಲ್ಲಿಟ್ಟಿದ್ದಾರೆ. ಡಾ.ಅಂಬೇಡ್ಕರ್ ನೀಡಿದ ಕಾನೂನಿನಿಂದ ಶೇಕಡ 5 ರಷ್ಟಿದ್ದ ನಮ್ಮ ಸಾಕ್ಷರತೆ ಈಗ ಶೇಕಡ 75 ರಷ್ಟಾಗಿದೆ. ಈ ಸಂದರ್ಭದಲ್ಲೂ ಮತ್ತೆ ನಮ್ಮನ್ನು ಮೌಢ್ಯ, ಕಂದಾಚಾರಕ್ಕೆ ದೂಡುವುದು ಎಷ್ಟು ಸರಿ ಎಂದು ಪ್ರಶ್ನಿಸಿದ ಪುರುಷೋತ್ತಮ್, ಯಾವುದೇ ಕಾರಣಕ್ಕೂ ಈ ಸ್ಥಳದಲ್ಲಿ ದೇವಾಲಯ ಸ್ಥಾಪನೆಗೆ ನಾವು ಬಿಡುವುದಿಲ್ಲ ಎಂದು ಎಚ್ಚರಿಸಿದರು.

ಇಷ್ಟಾದರೂ ದೇವಾಲಯ ನಿರ್ಮಾಣದ ಧಾರ್ಮಿಕ ಕಾರ್ಯ ಆರಂಭಿಸಿದರೆ ಕಾರ್ಯಕ್ರಮಕ್ಕೆ ಬರುವ ಅತಿಥಿಗಳು ಇಲ್ಲಿ ಕಾಲಿಡದಂತೆ ತಡೆಯುತ್ತೇವೆ ಎಂದು ಎಚ್ಚರಿಸಿದರು.

ದೇವಾಲಯ ನಿರ್ಮಾಣ ಮಾಡಬೇಕಿದ್ದ ಸ್ಥಳದಲ್ಲಿ ಹಾಕಿದ್ದ ಫ್ಲೆಕ್ಸ್‌ಗಳನ್ನು ಹರಿದು ಹಾಕಿದರು. ಆಯೋಜಕರ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದರು.

ಇದರಿಂದ ಅನಿವಾರ್ಯವಾಗಿ ದೇವಾಲಯ ನಿರ್ಮಾಣ ಮುನ್ನ ಆರಂಭಿಸಿದ್ದ ಧಾರ್ಮಿಕ ಕಾರ್ಯವನ್ನು ಆಯೋಜಕರು ಸ್ಥಗಿತಗೊಳಿಸಿದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಮೇ 23– ವಿಜಯನಗರ ಸೇವಾ ಟ್ರಸ್ಟ್ ಮತ್ತು ನಾರಾಯಣ ಆಸ್ಪತ್ರೆ ಸಂಯುಕ್ತ ಆಶ್ರಯದಲ್ಲಿ ಮೇ 25 ರಂದು ಬೆಳಗ್ಗೆ 6.30 ರಿಂದ 10.30 ರವರೆಗೆ ವಿಜಯನಗರ 1ನೇ ಹಂತದಲ್ಲಿರುವ ವಿಜಯನಗರ ಮುಡಾ ಸ್ಪೋರ್ಟ್ಸ್ ಮೈದಾನದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ.

ಮುಖ್ಯ ಅತಿಥಿಗಳಾಗಿ ಶಾಸಕ ಕೆ. ಹರೀಶ್‌ಗೌಡ, ವಿಜಯನಗರ ಸೇವಾ ಟ್ರಸ್ಟ್ ಅಧ್ಯಕ್ಷ ಎಸ್. ಶಂಕರ್ ಮತ್ತು ಕಾರ್ಯದರ್ಶಿ ನವೀನ್ ಭಾಗವಹಿಸಲಿದ್ದಾರೆ.

ಎಸ್‌ಎಸ್‌ಎಲ್‌ಸಿಯಲ್ಲಿ ಪ್ರಥಮ ಸ್ಥಾನ ಪಡೆದವರ ಸಾಲಿಗೆ ಸೇರಿದ ತನ್ಮಯ್

ಮರು ಮೌಲ್ಯಮಾಪನದಲ್ಲಿ ಶೇ.100ಕ್ಕೆ ನೂರು ಅಂಕ ಪಡೆದು ಸಾಧನೆ

ಮೈಸೂರು, ಮೇ23(ಜಿಎ)–ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ವಿದ್ಯಾರ್ಥಿ ಎಂ.ಎನ್. ತನ್ಮಯ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮರು ಮೌಲ್ಯಮಾಪನದಲ್ಲಿ ಶೇ.100ರಷ್ಟು ಅಂಕಗಳಿಸಿ ರಾಜ್ಯಕ್ಕೆ ಪ್ರಥಮ ಸ್ಥಾನವನ್ನು ಪಡೆದ ವಿದ್ಯಾರ್ಥಿಗಳ ಸಾಲಿಗೆ ಸೇರುವ ಮೂಲಕ ಶಾಲೆಯ ಇತಿಹಾಸದಲ್ಲೇ ಹೊಸ ದಾಖಲೆ ಬರೆದಿದ್ದಾರೆ.



ರಾಮಕೃಷ್ಣ ವಿದ್ಯಾಶಾಲೆಯ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ತನ್ಮಯ್‌ಗೆ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ವಿದ್ಯಾರ್ಥಿಗೆ ಸಿಹಿಯನ್ನು ತಿನಿಸಿ, ಸ್ವಾಮಿ ವಿವೇಕಾನಂದರ ಭಾವಚಿತ್ರವನ್ನು ನೀಡಿ ಅಭಿನಂದಿಸಿದರು.

ಪರೀಕ್ಷೆಯ ಫಲಿತಾಂಶದಲ್ಲಿ ತನ್ಮಯ್‌ಗೆ 622 ಅಂಕಗಳು ಬಂದಿತ್ತು. ಕನ್ನಡ, ಸಮಾಜ ವಿಜ್ಞಾನ, ವಿಜ್ಞಾನ ವಿಷಯದಲ್ಲಿ ಒಂದೊಂದು ಅಂಕ ಕಡಿಮೆಯಾಗಿತ್ತು. ಮರು ಮೌಲ್ಯಮಾಪನ ಮಾಡಿಸಿದಾಗ ಆ ಮೂರು ವಿಷಯಗಳಲ್ಲೂ ಶೇ.100ರಷ್ಟು ಅಂಕ ಬಂತು. ಇದರಿಂದ ನೂರಕ್ಕೆ ನೂರು ಅಂಕಗಳಿಸಿಕೊಂಡರು.

ರಾಮಕೃಷ್ಣ ವಿದ್ಯಾಶಾಲೆಯ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ತನ್ಮಯ್‌ಗೆ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ವಿದ್ಯಾರ್ಥಿಗೆ ಸಿಹಿಯನ್ನು ತಿನಿಸಿ, ಸ್ವಾಮಿ ವಿವೇಕಾನಂದರ ಭಾವಚಿತ್ರವನ್ನು ನೀಡಿ ಗೌರವಿಸಿದರು.

ನಂತರ ಮುಕ್ತಿದಾನಂದಜೀ ಮಾತನಾಡಿ, ಪರಿಪೂರ್ಣತೆಯ ಅಭಿವ್ಯಕ್ತಿಯೇ ನಿಜವಾದ ವಿದ್ಯಾಭ್ಯಾಸವಾಗಿದೆ. ಗಣಿತ, ವಿಜ್ಞಾನ ವಿಷಯದಲ್ಲಿ ನೂರಕ್ಕೆ ನೂರು ಅಂಕಗಳಿಸಬಹುದು. ಆದರೆ ಭಾಷಾ ವಿಷಯಗಳು, ಸಮಾಜ ವಿಜ್ಞಾನದಲ್ಲಿ ಸಂಪೂರ್ಣ ಅಂಕ ಗಳಿಸುವುದಕ್ಕೆ ಬಹಳ ಪ್ರಯತ್ನ ಮಾಡಬೇಕು. ಇದಕ್ಕೆ ವಿದ್ಯಾರ್ಥಿಯ ವ್ಯಕ್ತಿತ್ವದ ಅಂತರ್ಯದಲ್ಲಿ ದೃಢತೆ–ಸಾಮರ್ಥ್ಯವಿರಬೇಕು. ಈ ಅಂಶವೂ ಎಲ್ಲರಲ್ಲೂ ಸಾಮಾನ್ಯವಾಗಿ ಇರುತ್ತದೆ. ಅದನ್ನು ಹೊರಹೊಮ್ಮಿಸಲು ಅಪರೂಪದ ಮಹಾನ್ ಸಾಧನೆಗಳಿಂದ ಮಾತ್ರ ಸಾಧ್ಯವಾಗುತ್ತದೆ. ಇಂತಹ ಗುಣ–ಧರ್ಮಗಳು ತನ್ಮಯ್‌ನಲ್ಲಿ ಇದ್ದ ಕಾರಣ ಆತ ಸಾಧನೆ ಮಾಡಿದ್ದಾನೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಉತ್ತಮ ಗುಣಮಟ್ಟದ ಸಾಧನೆಯಾಗಬೇಕಾದರೆ ಹಿರಿಯರು, ತಂದೆ–ತಾಯಿ, ದೇವರ ಆಶೀರ್ವಾದ ಬಹಳ ಮುಖ್ಯವಾಗಿ ಬೇಕು. ತನ್ಮಯ್‌ನಿಂದ ಮುಂದೆ ಸಮಾಜಕ್ಕೆ ಉತ್ತಮ ಕೊಡುಗೆಗಳು ಲಭಿಸಲಿ, ಆತನ ಸೇವಾ ಯಜ್ಞವೂ ಪರಿಪೂರ್ಣತೆಯಿಂದ ಕೂಡಿರಲಿ ಎಂದು ಶ್ರೀಗಳು ಹರಸಿದರು.

ನಂತರ ವಿದ್ಯಾರ್ಥಿ ತನ್ಮಯ್ ಮಾತನಾಡಿ, ತಾನು ಮಾಡಿರುವ ಈ ಸಾಧನೆಯನ್ನು, ನನಗೆ ಪಾಠ ಮಾಡಿದ ಗುರುಗಳಿಗೆ ಹಾಗೂ ಪ್ರಾಂಶುಪಾಲರಿಗೆ ಅರ್ಪಿಸುತ್ತೇನೆ. ನಮ್ಮ ವಿದ್ಯಾಶಾಲೆಯೂ ವರ್ಷ–ವರ್ಷವೂ ಉತ್ತಮವಾದ ಫಲಿತಾಂಶವನ್ನು ಪಡೆದುಕೊಳ್ಳುತ್ತಿತ್ತು. ನೂರಕ್ಕೆ ನೂರು ಅಂಕವನ್ನು ಗಳಿಸುವ ಗುರಿಯನ್ನು ಹಲವಾರು ಸ್ನೇಹಿತರು ಹೊಂದಿದ್ದರೂ ಅದನ್ನು ಮುಟ್ಟಿರಲಿಲ್ಲ. ನಮ್ಮ ಅಣ್ಣ ವಿಹಾನ್ ಕೂಡ ಕೆಲ ವರ್ಷದ ಹಿಂದೆ ಇದೇ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ 624 ಅಂಕವನ್ನು ಪಡೆದು ರಾಜ್ಯಕ್ಕೆ 2ನೇ ಸ್ಥಾನವನ್ನು ಪಡೆದುಕೊಂಡಿದ್ದ. ಇದೆಲ್ಲ ನನ್ನ ಮನಸ್ಸಿನಲ್ಲಿ ಇತ್ತು. ನನ್ನ ಶಿಕ್ಷಕರು ಕೂಡ ನಿನ್ನಿಂದ ಇದು ಸಾಧ್ಯ ಎಂದು ಹುರುಪು ತುಂಬಿದರು. ನಮಗೆ ಪ್ರಾಂಶುಪಾಲರಾಗಿ ಈಗ ನಿವೃತ್ತಿ ಹೊಂದಿರುವ ಬಾಲಾಜಿ ಮಾಸ್ಟರ್ ಬಹಳವಾಗಿ ನನ್ನಲ್ಲಿ ಆತ್ಮವಿಶ್ವಾಸವನ್ನು ಗಳಿಸಿಕೊಟ್ಟಿದ್ದರು. ಆದ್ದರಿಂದ ಈ ಸಾಧನೆಯನ್ನು ಅವರಿಗೋಸ್ಕರವಾದರೂ ಮಾಡಬೇಕು ಎನಿಸಿತು. ಈಗ ಸಾಧನೆ ಮಾಡಿದ್ದೇನೆ ಎಂದು ವಿವರಿಸಿದರು.

ರಾಮಕೃಷ್ಣ ವಿದ್ಯಾಶಾಲೆಯ ಮುಖ್ಯಸ್ಥ ಸ್ವಾಮಿ ಯುಕ್ತೇಶಾನಂದಜೀ, ಪ್ರಾಂಶುಪಾಲ ಟಿ.ಕೆ.ಚಂದ್ರಶೇಖರ್, ನಿವೃತ್ತ ಪ್ರಾಂಶುಪಾಲ ಬಾಲಾಜಿ, ಪೋಷಕರಾದ ನಿರಂಜನ್ ಮತ್ತು ಸೌಮ್ಯ ಮತ್ತಿತರರು ಉಪಸ್ಥಿತರಿದ್ದರು.

ಚಿನ್ನದ ಪದಕ ಬಹುಮಾನ

ರಾಮಕೃಷ್ಣ ವಿದ್ಯಾಶಾಲೆ ಪ್ರಾರಂಭವಾಗಿ 70 ವರ್ಷವಾಗಿದೆ. ಇಷ್ಟು ಇತಿಹಾಸವಿರುವ ಈ ಶಾಲೆಯಲ್ಲಿ ಇಂತಹ ಸಾಧನೆ ಮಾಡಿರುವ ತನ್ಮಯ್‌ಗೆ ರಾಮಕೃಷ್ಣ ಆಶ್ರಮದಿಂದ ಚಿನ್ನದ ಪದಕವನ್ನು ಬಹುಮಾನವಾಗಿ ನೀಡಲಾಗುತ್ತದೆ. ಡಿಸೆಂಬರ್‌ನಲ್ಲಿ ಆಶ್ರಮದ ಶತಮಾನೋತ್ಸವ ಕಾರ್ಯಕ್ರಮ ನಡೆಯುತ್ತದೆ. ಅಲ್ಲಿಗೆ ಕೊಲ್ಕತ್ತಾ ಸೇರಿದಂತೆ ದೇಶದ ವಿವಿಧೆಡೆಯಿಂದ, ವಿದೇಶದಿಂದ ಗಣ್ಯ ವ್ಯಕ್ತಿಗಳು ಆಗಮಿಸುತ್ತಾರೆ. ಅಂತಹ ವೇದಿಕೆಯಲ್ಲಿ ತನ್ಮಯ್‌ಗೆ ಚಿನ್ನದ ಪದಕವನ್ನು ಪ್ರದಾನ ಮಾಡಲಾಗುತ್ತದೆ.

ಸ್ವಾಮಿ ಮುಕ್ತಿದಾನಂದಜೀ,
ಅಧ್ಯಕ್ಷ, ಶ್ರೀ ರಾಮಕೃಷ್ಣ ಆಶ್ರಮ

ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶ್ರೀ ರಾಮಕೃಷ್ಣ ವಿದ್ಯಾಶಾಲೆಗೆ ನೂರಕ್ಕೆ ನೂರರಷ್ಟು ಫಲಿತಾಂಶ ಬಂದಿದೆ. ಪರೀಕ್ಷೆಗೆ 97 ವಿದ್ಯಾರ್ಥಿಗಳು ಹಾಜರಾಗಿದ್ದರು. ಇದರಲ್ಲಿ 600ಕ್ಕಿಂತ ಹೆಚ್ಚಿನ ಅಂಕವನ್ನು 32 ವಿದ್ಯಾರ್ಥಿಗಳು ಪಡೆದಿದ್ದಾರೆ.

'ಆಪರೇಷನ್ ಸಿಂಧೂರ' ಯಶಸ್ವಿ
ಚಾಮುಂಡೇಶ್ವರಿ ಕ್ಷೇತ್ರ ಬಿಜೆಪಿ ವತಿಯಿಂದ ತಿರಂಗಾಯಾತ್ರೆ



'ಆಪರೇಷನ್ ಸಿಂಧೂರ' ಕಾರ್ಯಾಚರಣೆ ಯಶಸ್ಸಿನ ಹಿನ್ನಲೆಯಲ್ಲಿ ತಿರಂಗಾ ಯಾತ್ರೆಯನ್ನು ಮೈಸೂರು ಹೂಟಗಳ್ಳಿ ಸಂತೆ ಮಾಳದಿಂದ ಕೆಎಚ್‌ಬಿ ಕಾಲೋನಿಯವರಿಗೆ ಶುಕ್ರವಾರ ನಡೆಸಲಾಯಿತು.

ಮೈಸೂರು, ಮೇ 23(ಎಸ್‌ಪಿಎನ್)– 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ಯಶಸ್ಸಿನ ಹಿನ್ನಲೆಯಲ್ಲಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಘಟಕದ ವತಿಯಿಂದ ಆಯೋಜಿಸಿದ್ದ ತಿರಂಗಾ ಯಾತ್ರೆಯನ್ನು ಮೈಸೂರು ಹೂಟಗಳ್ಳಿ ಸಂತೆ ಮಾಳದಿಂದ ಕೆಎಚ್‌ಬಿ ಕಾಲೋನಿಯವರಿಗೆ ಶುಕ್ರವಾರ ನಡೆಸಲಾಯಿತು.

ತಿರಂಗಾಯಾತ್ರೆಗೆ ಸಂಸದ ಯದುವೀರ್ ಚಾಮರಾಜ ಕೃಷ್ಣದತ್ತ ಒಡೆಯರ್, ಶ್ರೀ ಯೋಗನರಸಿಂಹ ಸ್ವಾಮಿ ದೇವಸ್ಥಾನದ ಕಾರ್ಯದರ್ಶಿ ಶ್ರೀನಿವಾಸ್, ನಿವೃತ್ತ ಯೋಧ ಶ್ರೀಧರ್ ನೇತೃತ್ವದಲ್ಲಿ ಚಾಲನೆ ನೀಡಿ, ತಿರಂಗಾ ಯಾತ್ರೆಯಲ್ಲಿ ಹೆಜ್ಜೆಹಾಕಿದರು. ಈ ವೇಳೆ ವಂದೇ ಮಾತರಂ, ಭಾರತ್ ಮಾತಾಕೀ ಜೈ ಸೇರಿದಂತೆ ವಿವಿಧ ಘೋಷಣೆಗಳನ್ನು ಕೂಗಿ, ಭಾರತೀಯ ಸೈನ್ಯದ ಶೌರ್ಯವನ್ನು ಗುಣಗಾನ ಮಾಡಿದರು.

ನಿವೃತ್ತ ಯೋಧ ಶ್ರೀಧರ್ ಮಾತನಾಡಿ, ಶತ್ರು ದೇಶದ ನಡುವೆ ಯುದ್ಧಗಳು ನಡೆದಾಗ ದೇಶದೊಳಗೆ ಒಗ್ಗಟ್ಟು ಅತೀಮುಖ್ಯ. ದೇಶದ ರಕ್ಷಣೆ ವಿಚಾರದಲ್ಲಿ ಯಾರೂ ದೇಶದ ವಿರುದ್ಧ ಮಾತನಾಡಿದೆ, ಒಗ್ಗಟ್ಟು ಪ್ರದರ್ಶಿಸಿ, ಯುದ್ಧಭೂಮಿಯಲ್ಲಿರುವ ಸೈನಿಕನಿಗೆ ಮಾನಸಿಕ ಸ್ಥೈರ್ಯ ತುಂಬಬೇಕು. ಏ.22ರಂದು ಜಮ್ಮು ಮತ್ತು ಕಾಶ್ಮೀರದ ಪೆಹಲ್ಗಾಮ್‌ನಲ್ಲಿ 26 ಹಿಂದೂಗಳ ನರಮೇಧವನ್ನು ಪ್ರತಿಯೊಬ್ಬ ಭಾರತೀಯರು ಖಂಡಿಸಬೇಕು. ಈಗಾಗಲೇ ಇದರ ವಿರುದ್ಧ ಭಾರತೀಯ ಸೇನೆ ಪಾಕಿಸ್ತಾನದೊಳಗಿನ ಉಗ್ರರ ಕ್ಯಾಂಪ್‌ಗಳನ್ನು ಪುಡಿಪುಡಿ ಮಾಡಿದೆ ಎಂದರು.


ದೇಶದ ರಕ್ಷಣೆ ವಿಚಾರದಲ್ಲಿ ನಾವೆಲ್ಲಾ ಒಂದು ಎನ್ನುವ ಭಾವನೆ ದೇಶದಲ್ಲಿ ಮೂಡಬೇಕು. ಆಗ ಮಾತ್ರ ಯಾವುದೇ ಕಠಿಣ ಸಂದರ್ಭವನ್ನು ಭಾರತೀಯ ಸೇನೆ ಎದುರಿಸಲು ಸಾಧ್ಯ. ಹಾಗಾಗಿ ಭಾರತೀಯ ರಕ್ಷಣಾ ಕ್ಷೇತ್ರದಲ್ಲಿ 'ಆಪರೇಷನ್ ಸಿಂಧೂರ' ಮುಂದಿನ ಪೀಳಿಗೆಗೆ ಒಂದು ಪಾಠವಿದ್ದಂತೆ. ಇದರಿಂದ ನಮ್ಮ ಭಾರತೀಯ ಸೇನೆಯ ಯುದ್ಧ ಕೌಶಲ್ಯವೂ ಜಗತ್ತಿಗೆ ಪರಿಚಯವಾಗಿದೆ, ದೇಶಿಗಳು ಶಸ್ತ್ರಗಳು, ತಂತ್ರಜ್ಞಾನ ಜಗತ್ತಿಗೆ ಪರಿಚಯವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಶತ್ರು ರಾಷ್ಟ್ರ, ಭಾರತಕ್ಕೆ ಯಾವುದೇ ಬೆದರಿಕೆ ಒಡ್ಡಿದರೂ ಆ ಸನ್ನಿವೇಶವನ್ನು ಸಮರ್ಥವಾಗಿ ಎದುರಿಸಲು ಭಾರತೀಯ ಸೇನೆಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಒದಗಿಸಬೇಕು. ಪ್ರಸ್ತುತ ಪ್ರಧಾನಮಂತ್ರಿ ನರೇಂದ್ರ ಮೋದಿ ಸರ್ಕಾರ, ಭಾರತದಲ್ಲಿ ನಡೆಯುವ ಯಾವುದೇ ಉಗ್ರಕೃತ್ಯಗಳು ಯುದ್ಧಕ್ಕೆ ಸಮಾನ ಎಂಬ ನಿಲುವು ತೆಗೆದುಕೊಂಡಿರುವುದು ಸಾಗತಾರ್ಹ ಎಂದು ತಿಳಿಸಿದರು.

ಅಂತೆಯೇ ಕೇಂದ್ರ ಸರ್ಕಾರ, ಗಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸೈನಿಕರಿಗೆ ಸಂಪೂರ್ಣ ಅಧಿಕಾರ ನೀಡಿದ್ದು, ಒಂದು ಗುಂಡಿಗೆ ಎರಡು ಗುಂಡು ನೀತಿಯಿಂದ ಪಾಕಿಸ್ತಾನ, ಚೀನಾ ಗಡಿಗಳಲ್ಲಿ ಶತ್ರು ಪಾಳೆಯದ ಸೈನ್ಯ ನಮ್ಮ ಮೇಲೆ ದಾಳಿ ಮಾಡುವ ಮುನ್ನ ಎರಡು ಬಾರಿ ಯೋಚಿಸುವ ಮಟ್ಟಕ್ಕೆ ಬಂದಿರುವುದು ಎಲ್ಲರೂ ಹೆಮ್ಮೆಪಡುವ ವಿಷಯ ಎಂದರು.

ಈ ವೇಳೆ ಬಿಜೆಪಿ ಮುಖಂಡ ಕವೀಶ್‌ಗೌಡ, ಹಿರಿಯ ಮುಖಂಡರಾದ ಎಸ್.ಆರ್.ಗೋಪಾಲರಾವ್, ಚಾಮುಂಡೇಶ್ವರಿ ಕ್ಷೇತ್ರ ಬಿಜೆಪಿ ಅಧ್ಯಕ್ಷ ಪೈಟಿ.ರವಿ, ಮಾಜಿ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ಶ್ರೀನಿವಾಸ್, ರಾಜಕುಮಾರ್, ನಗರ ಪ್ರಧಾನ ಕಾರ್ಯದರ್ಶಿ ಬಿ.ಎಮ್.ರಘು, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಅಧ್ಯಕ್ಷ ದೇವರಾಜ್, ಕಾರ್ಯಕರ್ತರಾದ ಗಣೇಶ್, ಹೇಮಂತ್‌ಕುಮಾರ್, ರೇವಣ್ಣ, ಕುಮಾರ್, ಶರತ್‌ವೇದರಾಜ್, ರವಿಕೃಷ್ಣ, ಗಂಗಣ್ಣಗೌಡ, ಗುರುಸ್ವಾಮಿ, ನಾರಾಯಣಚಾರ್, ಹೂಟಗಳ್ಳಿ ರಾಮಚಂದ್ರ, ಮಹಿಳಾ ಮುಖಂಡರಾದ ಸವಿತಾ ಪುಟ್ಟೇಗೌಡ, ಶಾಲಿನಿ ಕೂರ್ಗಳ್ಳಿ, ಮಂಜುಳಾ ಕುಮಾರ್, ನಾರಾಯಣ್, ವಿಜಯ್‌ಕುಮಾರ್, ಮೈದನಹಳ್ಳಿ ನವೀನ್ ಉಪಸ್ಥಿತರಿದ್ದರು.


ನಟ ದರ್ಶನ್–ಪತ್ನಿ ವಿಜಯಲಕ್ಷ್ಮಿಗೆ ಸಮನ್ಸ್ ಜಾರಿ



ಬೆಂಗಳೂರು: ರೇಣುಕಾ ಸ್ವಾಮಿ ಕೊಲೆ ಪ್ರಕರಣದಲ್ಲಿ ಜಾಮೀನು ಸಿಕ್ಕಿ ಇತ್ತೀಚೆಗಷ್ಟೇ 22 ವರ್ಷದ ವಿವಾಹ ವಾರ್ಷಿಕೋತ್ಸವ ಆಚರಿಸಿಕೊಂಡ ಚಾಲೆಂಜಿಂಗ್ ಸ್ಟಾರ್ ದರ್ಶನ್ ಮತ್ತು ಅವರ ಪತ್ನಿ ವಿಜಯಲಕ್ಷ್ಮಿಗೆ ಸಂಕಷ್ಟ ಎದುರಾಗಿದೆ. ದರ್ಶನ್ ತಮ್ಮ ಮೈಸೂರು ಫಾರಂ ಹೌಸ್‌ನಲ್ಲಿ ವಿದೇಶಿ ಬಾತುಕೋಳಿ ಸಾಕಿದ್ದಕ್ಕೆ ಈ ಹಿಂದೆ ಪ್ರಕರಣ ದಾಖಲಾಗಿತ್ತು. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರಿನ ನರಸೀಪುರ ನ್ಯಾಯಾಲಯ ಸಮನ್ಸ್ ಜಾರಿ ಮಾಡಿದೆ.

'ಬಾರ್ ಹೆಡೆಡ್ ಗೂಸ್' ಎಂಬ ಬಾತು ಕೋಳಿಗಳನ್ನು ಸಾಕಿದ್ದ ದರ್ಶನ್ ಅವರ ಮೈಸೂರಿನ ಕೆಂಪಯ್ಯನ ಹುಂಡಿಯಲ್ಲಿರುವ ತೋಟದ ಮೇಲೆ ಅರಣ್ಯಾಧಿಕಾರಿಗಳು ದಾಳಿ ಮಾಡಿದ್ದರು. ಈ ವೇಳೆ ವಿದೇಶಿ ಪ್ರಭೇದದ ಬಾತು ಕೋಳಿ ವಶಕ್ಕೆ ಪಡೆದಿದ್ದರು. ಪ್ರಕರಣದ ವಿಚಾರಣೆಯು ಮೈಸೂರು ಜಿಲ್ಲೆ ಟಿ.ನರಸೀಪುರ ನ್ಯಾಯಾಲಯದಲ್ಲಿ ನಡೆಯುತ್ತಿದ್ದು, ಇದೀಗ ನ್ಯಾಯಾಲಯವು ದರ್ಶನ್ ಹಾಗೂ ವಿಜಯಲಕ್ಷ್ಮಿ ಅವರಿಗೆ ಸಮನ್ಸ್ ಜಾರಿ ಮಾಡಿ ಜುಲೈ 4 ರಂದು ನ್ಯಾಯಾಲಯಕ್ಕೆ ಹಾಜರಾಗುವಂತೆ ಸೂಚಿಸಿದೆ.

ಇಂದು ಡಿ.ಮಾದೇಗೌಡರಿಗೆ ನರೆಡ್ಕೋದಿಂದ
ಮೈಸೂರಲ್ಲಿ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ



ಮೈಸೂರು, ಮೇ23(ಜಿಎ)–ನರೆಡ್ಕೋ ವತಿಯಿಂದ ನಗರದ ಕೆಆರ್ ಎಸ್ ರಸ್ತೆ ಯಲ್ಲಿರುವ ಹೋಟೆಲ್ ಕ್ಲಬ್ ಮಹೇಂದ್ರಾ (ಗೋಲ್ಡನ್ ಲ್ಯಾಂಡ್ ಮಾರ್ಕ್ ಹೋಟೆಲ್)ದಲ್ಲಿ ನಾಳೆ (ಮೇ24) ಸಂಜೆ 6.30ಕ್ಕೆ ನರೆಡೋ ಪ್ರಶಸ್ತಿಗಳು–2025 ಕಾರ್ಯ ಕ್ರಮ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮೈಸೂರು ವಲಯದ ಅಧ್ಯಕ್ಷ ವಿ.ಸಿ. ರವಿಕುಮಾರ್ ಈ ವಿಷಯ ತಿಳಿಸಿ, ಕಾರ್ಯಕ್ರಮದಲ್ಲಿ ಮಾಜಿ ಎಂಎಲ್‌ಸಿ ಡಿ.ಮಾದೇಗೌಡರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಅಭಿನಂದಿಸಲಾಗುತ್ತದೆ ಎಂದರು.

ಮುಖ್ಯ ಅತಿಥಿಯಾಗಿ ಸಂಸದ ಯದು ವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ನರೆಡ್ಕೋ ರಾಷ್ಟ್ರೀಯ ಅಧ್ಯಕ್ಷ ಜಿ.ಹರಿ ಬಾಬುಜೀ, ರಾಷ್ಟ್ರೀಯ ಉಪಾಧ್ಯಕ್ಷ ಶ್ರೀ.ಮುಪ್ಪಾ ವೇಂಕಟೇಶ್ ಚೌಧರಿ, ಚೆಸ್ಕಾಂ ಮ್ಯಾನೇಜಿಂಗ್ ಡೈರೆಕ್ಟರ್ ಕೆ.ಎಂ. ಮುನಿ ಗೋಪಾಲ್ ರಾಜು, ನರೆಡ್ಕೋ ಕರ್ನಾಟಕ ಉಪಾಧ್ಯಕ್ಷ ಮನೋಜ್ ಲೋದ ಪಾಲ್ಗೊಳ್ಳಲಿದ್ದಾರೆ. ನರೆಡ್ಕೋ ಮೈಸೂರು ಛೇರ್ಮನ್ ಆದಿಶೇಷನ್ ಗೌಡ, ಕಾರ್ಯದರ್ಶಿ ಜಿ.ಕೆ.ಸುಧೀಂದ್ರ, ಉಪಾಧ್ಯಕ್ಷ ಎಂ.ಡಿ. ರಾಘವೇಂದ್ರ ಪ್ರಸಾದ್, ಖಜಾಂಚಿ ಎ.ಪಿ.ನಾಗೇಶ್, ಸಹ ಕಾರ್ಯದರ್ಶಿ ಗಗನ್ ದೀಪ್, ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ ಎನ್.ದಿವೇಶ್ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ನರೆಡ್ಕೋ ಮೈಸೂರು ಅಧ್ಯಕ್ಷ ಆದಿಶೇಷನ್ ಗೌಡ, ಉಪಾಧ್ಯಕ್ಷ ಎಂ.ಡಿ. ರಾಘವೇಂದ್ರ ಪ್ರಸಾದ್, ಖಜಾಂಚಿ ಎ.ಪಿ.ನಾಗೇಶ್, ಸಹ ಕಾರ್ಯದರ್ಶಿ ಗಗನ್ ದೀಪ್, ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ ಎನ್. ದಿವೇಶ್ ಉಪಸ್ಥಿತರಿದ್ದರು.

ಮಾವು, ಹಲಸು ಮೇಳಕ್ಕೆ ಜಿಲ್ಲಾಧಿಕಾರಿ ಚಾಲನೆ



ಮಾವು ಮತ್ತು ಹಲಸು ಮೇಳಕ್ಕೆ ಜಿಲ್ಲಾಧಿಕಾರಿಗಳು ಶುಕ್ರವಾರ ಚಾಲನೆ ನೀಡಿದರು.

ಮಡಿಕೇರಿ, ಮೇ 23– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ತೋಟಗಾರಿಕೆ ಇಲಾಖೆ ಹಾಗೂ ಜಿಲ್ಲಾ ಹಾಪ್‌ಕಾಮ್ಸ್ ವತಿಯಿಂದ ಮೇ 26 ರವರೆಗೆ ನಗರದ ಹಾಪ್ ಕಾಮ್ಸ್ ಆವರಣದಲ್ಲಿ ಮಾವು ಮತ್ತು ಹಲಸು ಮೇಳ ನಡೆಯಲಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ನಗರದ ಅಂಚೆ ಕಚೇರಿ ಎದುರಿನ ಹೈಟೆಕ್ ಮಾರಾಟ ಮಳಿಗೆಯ ಆವರಣದಲ್ಲಿ ಶುಕ್ರವಾರ ಮೇಳಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮಾವು ಮತ್ತು ಹಲಸು ಮೇಳದಲ್ಲಿ ಬೇರೆ ಬೇರೆ ಜಿಲ್ಲೆಗಳಿಂದ ಜನರು ಬರುವುದರಿಂದ ಬಹಳ ಬೇಡಿಕೆ ಪಡುತ್ತದೆ ಎಂದರು. ಮಾವು ಮತ್ತು ಹಲಸು ಮೇಳವನ್ನು ಈ ವರ್ಷವೂ ನಾಲ್ಕು ದಿನಗಳವರೆಗೆ ವಿಸ್ತರಿಸಲಾಗಿದೆ ಎಂದರು.

ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಎಚ್.ಆರ್.ಯೋಗೇಶ್ ಮಾತನಾಡಿ ನೈಸರ್ಗಿಕವಾಗಿ ಮಾಗಿಸಿದ ಕಾರ್ಬೈಡ್ ಮುಕ್ತ ಹಣ್ಣುಗಳನ್ನು ರೈತರಿಂದ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವುದು ಮೇಳದ ಉದ್ದೇಶವಾಗಿದೆ. ಮೇಳದಲ್ಲಿ ಮಲಗೋವಾ, ಸಿಂಧೂರಿ, ರಸಪುರಿ, ತೋತಾಪುರಿ, ಬಾದಾಮಿ, ಮಲ್ಲಿಕಾ, ದಸೇರಿ ಹಣ್ಣುಗಳನ್ನು ನೈಸರ್ಗಿಕವಾಗಿ ಮಾಗಿಸಿ ಗ್ರಾಹಕರಿಗೆ ಯೋಗ್ಯ ಬೆಲೆಗೆ ನೇರ ಮಾರಾಟ ಮಾಡಲಾಗುತ್ತದೆ ಎಂದು ಹೇಳಿದರು. ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷ ಬಿದ್ದಾಟಂಡ ರಮೇಶ್ ಚಂಗಪ್ಪ, ಉಪಾಧ್ಯಕ್ಷ ಮಲ್ಲಂಡ ಮಧುದೇವಯ್ಯ, ನಿರ್ದೇಶಕ ನಾಗೇಶ್ ಕುಂದಲ್ಪಾಡಿ, ಬಿ.ಎ.ಹರೀಶ್, ಎಸ್.ಪಿ.ಪೊನ್ನಪ್ಪ, ಬೇಬ ಪೂವಯ್ಯ, ಎಂ.ಮನೋಹರ್, ಸುವಿನ್ ಗಣಪತಿ, ಉಮೇಶ್‌ರಾಜ ಅರಸ್, ಸುಧೀರ್, ಹಾಪ್‌ಕಾಮ್ಸ್ ಸಿಇಒ ರೇಷ್ಮ ಗಿರೀಶ್, ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಮುತ್ತಪ್ಪ ಇತರರು ಇದ್ದರು.

ಮಳೆಯ ನಡುವೆಯೇ ನಡೆದ ಸಿಂಧೂರ ವಿಜಯೋತ್ಸವ



ಮಡಿಕೇರಿಯಲ್ಲಿ ಮಳೆಯ ನಡುವೆಯೇ ಸಿಂಧೂರ ವಿಜಯೋತ್ಸವ ಆಚರಿಸಲಾಯಿತು.

ಮಡಿಕೇರಿ, ಮೇ 23– ಭಾರತದ ಕೆಚ್ಚೆದೆಯ ಯೋಧರಿಗೆ ‘ಸಿಂಧೂರ ವಿಜಯೋತ್ಸವ’ದ ಮೂಲಕ ಭಾರೀ ಮಳೆಯ ನಡುವೆಯೇ ನಗರದಲ್ಲಿ ಗೌರವವನ್ನು ಸಲ್ಲಿಸಲಾಯಿತು.

ಸಿಂಧೂರ ವಿಜಯೋತ್ಸವ ಸಮಿತಿಏರ್ಪಡಿಸಿದ್ದ ವಿಜಯೋತ್ಸವ ಇಂದು ಬೆಳಗ್ಗೆ ನಗರದ ಎವಿ ಶಾಲೆಯ ಬನ್ನಿಮಂಟಪದಿಂದ ಗಾಂಧಿ ಮೈದಾನದವರೆಗೆ ನಡೆಯಿತು. ಮೆರವಣಿಗೆಯ ಮುಂಚೂಣಿಯಲ್ಲಿ ಭಾರತೀಯ ಸೈನ್ಯದ ಅಧಿಕಾರಿಗಳು ಮತ್ತು ಸೈನಿಕರು ತಮ್ಮ ಬಿರುದು ಬಾವಲಿಗಳೊಂದಿಗೆ ಹೆಜ್ಜೆ ಹಾಕಿದರೆ, ಇವರನ್ನು ಹಿಂಬಾಲಿಸಿ 300 ಅಡಿ ಉದ್ದದ ರಾಷ್ಟ್ರ ಧ್ವಜವನ್ನು ಹಿಡಿದ ಯುವ ಸಮೂಹ ಸೈನ್ಯದ ಪರವಾದ ಘೋಷಣೆಗಳ ಸಹಿತ ಹೆಜ್ಜೆ ಹಾಕಿದರು.

ಸಿಂಧೂರ ವಿಜಯೋತ್ಸವದ ಸಂಚಾಲಕ ಕೆ.ಕೆ. ದಿನೇಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಜಿಪಂ ಮಾಜಿ ಅಧ್ಯಕ್ಷ ಬಿ.ಎ.ಹರೀಶ್, ಸುವಿನ್ ಗಣಪತಿ, ತಳೂರು ಕಿಶೋರ್ ಕುಮಾರ್, ಕಾಂತಿ ಸತೀಶ್, ಬಿ.ಕೆ.ಜಗದೀಶ್, ಆರ್.ಕೆ. ಚಂದ್ರ, ಹೊಸೂರು ಸತೀಶ್ ಕುಮಾರ್, ಸಂಪತ್ ಕುಮಾರ್, ಮಹೇಶ್ ಜೈನಿ ಸೇರಿದಂತೆ ಸಾವಿರಾರು ಮಂದಿ ಪಾಲ್ಗೊಂಡಿದ್ದರು. ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಕೊಡಗು ಜಿಲ್ಲಾ ಘಟಕದ ಅಧ್ಯಕ್ಷ ಕೊಟ್ಟುಕತ್ತೀರ ಸೋಮಣ್ಣ ಮಾತನಾಡಿ, ಪಾಕಿಸ್ತಾನದ ಸೇನಾನೆಲೆಗಳನ್ನು ಅವರ ದೇಶದೊಳಕ್ಕೆ ನುಗ್ಗಿ ಧ್ವಂಸಗೊಳಿಸುವ ಮೂಲಕ ಭಾರತ ವಿಂದು ವಿಶ್ವ ಸಮುದಾಯದ ಮುಂದೆ ತಲೆ ಎತ್ತಿ ನಿಂತಿರುವುದಾಗಿ ಅತ್ಯಂತ ಹೆಮ್ಮೆಯಿಂದ ನುಡಿದರು.

ಸಂಸದ ಯದುವೀರ್ ಒಡೆಯರ್ ಮಾತನಾಡಿ, ಭಯೋತ್ಪಾದಕರಿಗೆ ಕುಮ್ಮಕ್ಕು ನೀಡಿ ಭಾರತದಲ್ಲಿ ದುಷ್ಕೃತ್ಯವೆಸಗುತ್ತಿದ್ದ ಪಾಕಿಸ್ತಾನಕ್ಕೆ, ಭಾರತೀಯ ಸೈನ್ಯವು ಆಪರೇಷನ್ ಸಿಂಧೂರದ ಮೂಲಕ ತಕ್ಕ ಪಾಠವನ್ನೆ ಕಲಿಸಿದೆ. ಹೀಗಿದ್ದೂ ಪಾಕ್‌ನ ಮನಸ್ಥಿತಿ ‘ನಾಯಿ ಬಾಲ ಡೊಂಕು’ ಎಂಬಂತೆ ಇದೆಯೆಂದು ತೀಕ್ಷ್ಣವಾಗಿ ನುಡಿದು, ಗಡಿಗಳನ್ನು ಸಮರ್ಥವಾಗಿ ಕಾಯುವ ಸೇನಾಪಡೆಗಳಿಂದ ನಾವು ನೆಮ್ಮದಿಯಿಂದ ಇದ್ದೇವೆ ಎಂದರು. ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಬೆಂಗಳೂರಿನ ಖ್ಯಾತ ವಾಗ್ಮಿ ವಿಶ್ವಮೋಹನ್ ಮಾತನಾಡಿ, ಪಾಕಿಸ್ತಾನವೆನ್ನುವುದು ಒಂದು ರಣಹೇಡಿ ದೇಶ, ನೇರಾನೇರ ಯುದ್ಧಕ್ಕಿಳಿಯದೆ, ತನ್ನೊಳಗೆ ಭಯೋತ್ಪಾದಕರನ್ನು ಪೋಷಿಸಿಕೊಂಡು ಭಾರತದಲ್ಲಿ ದುಷ್ಕೃತ್ಯಗಳನ್ನು ನಿರಂತರವಾಗಿ ನಡೆಸಲು ಮುಂದಾಗುತ್ತಿರುವ ದೇಶ. ಅಂತಹ ದೇಶಕ್ಕೆ ಆಪರೇಷನ್ ಸಿಂಧೂರದ ಮೂಲಕ ಸ್ಪಷ್ಟ ಸಂದೇಶವನ್ನು ರವಾನಿಸಲಾಗಿದೆಯೆಂದು ತಿಳಿಸಿದರು.

ವೇದಿಕೆಯಲ್ಲಿ ಸಿಂಧೂರ ವಿಜಯೋತ್ಸವದ ಸಂಚಾಲಕರಾದ ಕೆ.ಕೆ.ದಿನೇಶ್ ಕುಮಾರ್, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರ ಸಂಘ ಚಾಲಕ್ ಚಕ್ಕೇರ ಮನು ಕಾವೇರಪ್ಪ ಮೊದಲಾದವರಿದ್ದರು. ಮಹೇಶ್ ಕುಶಾಲನಗರ ಅವರು ಆರಂಭದಲ್ಲಿ ‘ವಂದೇ ಮಾತರಂ’ ದೇಶಭಕ್ತಿ ಗೀತೆಯನ್ನು ಹಾಡಿದರು. ಕುಕ್ಕೇರ ಅಜಿತ್ ಸರ್ವರನ್ನೂ ವಂದಿಸಿದರು.

ಹುಲಿ ದಾಳಿಗೆ ತೀವ್ರವಾಗಿ ಗಾಯಗೊಂಡ ಹಸು

ಗೋಣಿಕೊಪ್ಪ, ಮೇ 23– ಪೊನ್ನಂಪೇಟೆ ತಾಲೂಕು ಟಿ. ಶೆಟ್ಟಿಗೇರಿ ಗ್ರಾಮದಲ್ಲಿ ರಾತ್ರಿ ಬೆಳೆಗಾರ ಅಪ್ಪಚಂಗಡ ಬೋಪಯ್ಯರ ಕೊಟ್ಟಿಗೆಯಲ್ಲಿ ಕಟ್ಟಿದ್ದ ಹಸುವಿನ ಮೇಲೆ ಹುಲಿ ದಾಳಿ ನಡೆಸಿದೆ.

ರಾಜ್ಯ ವನ್ಯಜೀವಿ ಸಮಿತಿ ಸದಸ್ಯ ಸಂಕೇತ್ ಪೂವಯ್ಯ ಸ್ಥಳಕ್ಕೆ ಭೇಟಿ ನೀಡಿ ಹಸುವಿಗೆ ಸೂಕ್ತ ಚಿಕಿತ್ಸೆ ನೀಡಲು ಹಾಗೂ ಹುಲಿಯ ಹೆಜ್ಜೆ ಗುರುತು ಪತ್ತೆಹಚ್ಚಿ ಸೆರೆಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚನೆ ನೀಡಿದ್ದಾರೆ. ಮುಖ್ಯ ಪಶು ವೈದ್ಯಾಧಿಕಾರಿ ಡಾ. ಬಿ. ಜಿ. ಗಿರೀಶ್ ಚಿಕಿತ್ಸೆ ನೀಡಿದರು ಸ್ಥಳಕ್ಕೆ ಪೊನ್ನಂಪೇಟೆ ವಲಯ ಅರಣ್ಯ ಅಧಿಕಾರಿ ಶಂಕರ್ ಮತ್ತು ಸಿಬ್ಬಂದಿಗಳು ಭೇಟಿ ನೀಡಿದ್ದರು. ಸ್ಥಳೀಯ ಪ್ರಮುಖ ಅಪ್ಪಚಂಗಡ ಮೋಟಯ್ಯ, ಪೊನ್ನಂಪೇಟೆ ಡಿಆರ್‌ಎಫ್‌ಓ ನಾಗೇಶ್, ಅರಣ್ಯ ಗಸ್ತು ಪಾಲಕ ಎಸ್ ಹನುಮೇಗೌಡ, ಮಣಿಕಂಠ, ಹಾಗೂ ಆರ್‌ಆರ್‌ಟಿ ಸಿಬ್ಬಂದಿಗಳಾದ ಶಶಾಂಕ್, ಶೈಲೇಶ್, ಪುನೀತ್, ಚಾಲಕರಾದ ಸಿಕಂದರ್, ಹರೀಶ್ ಸ್ಥಳೀಯರಾದ ಅಪ್ಪಚಂಗಡ ಬಬಿನ್ ಬೆಳ್ಳಿಯಪ್ಪ ಮತ್ತಿತರರು ಇದ್ದರು.

ಸೆಸ್ಕ್ ವಿಭಾಗದಿಂದ ಅಗತ್ಯ ಮುನ್ನೆಚ್ಚರಿಕಾ ಕ್ರಮ: ರಮೇಶ್ ಬಂಡಿಸಿದ್ದೇಗೌಡ

ಮಡಿಕೇರಿ ಮೇ 23– ಜಿಲ್ಲೆಯಲ್ಲಿ ಮುಂಗಾರು ಸಂದರ್ಭದಲ್ಲಿ ಸೆಸ್ಕಾಂನಿಂದ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ ಎಂದು ನಿಗಮದ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಬಿರುಗಾಳಿ ಸಹಿತ ಹೆಚ್ಚಿನ ಮಳೆಯಾಗುವ ಹಿನ್ನೆಲೆ ವಿದ್ಯುತ್ ಕಂಬಗಳು ಹಾಗೂ ಪರಿವರ್ತಕಕ್ಕೆ ಹಾನಿಯಾಗುವುದು ಕಂಡು ಬರುತ್ತದೆ. ಆದ್ದರಿಂದ ಆಯಾಯ ಸಂದರ್ಭದಲ್ಲಿಯೇ ವಿದ್ಯುತ್ ಕಂಬ ಹಾಗೂ ಪರಿವರ್ತಕಗಳ ಬದಲಾವಣೆಗೆ ಕ್ರಮವಹಿಸಲಾಗುತ್ತದೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಕಳೆದ ಬಾರಿ 4 ಸಾವಿರಕ್ಕೂ ಹೆಚ್ಚು ಕಂಬಗಳು ಹಾನಿಯಾಗಿತ್ತು, ಹಾಗೆಯೇ ಹಲವು ವಿದ್ಯುತ್ ಪರಿವರ್ತಕಗಳು ಹಾನಿಯಾಗಿದ್ದವು, ಆ ಸಂದರ್ಭದಲ್ಲಿ 24 ಗಂಟೆಯೊಳಗೆ ಸರಿಪಡಿಸುವ ಕಾರ್ಯ ನಡೆದಿತ್ತು ಪ್ರಸಕ್ತ ವರ್ಷದಲ್ಲಿ ಲೈನ್ ಮೆನ್‌ಗಳಿಗೆ ಸ್ಮಾರ್ಟ್ ಫೋನ್‌ಗಳನ್ನು ಸಹ ವಿತರಿಸಲಾಗಿದೆ. ಟೋಲ್ ಫ್ರೀ ಸಂಖ್ಯೆಯನ್ನು ಸಹ ನೀಡಲಾಗುತ್ತಿದ್ದು, ಸಾರ್ವಜನಿಕರು ವಿದ್ಯುತ್ ಅಡಚಣೆ ಸಂಬಂಧಿಸಿದಂತೆ ಮಾಹಿತಿ ನೀಡ ಬಹುದಾಗಿದೆ ಎಂದು ತಿಳಿಸಿದರು.



ಸೆಸ್ಕಾಂ ನಿಗಮದ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ ಲೈನ್‌ಮೆನ್‌ಗಳಿಗೆ ಕಿಟ್‌ಗಳನ್ನು ವಿತರಿಸಿದರು.

ಲೈನ್‌ಮೆನ್‌ಗಳಿಗೆ ಕಿಟ್‌ಗಳನ್ನು ವಿತರಿಸಲಾಯಿತು. ಅಧೀಕ್ಷಕ ಎಂಜಿನಿಯರ್ ಸೋಮಶೇಖರ್ ಸೆಸ್ಕ್ ಕಾರ್ಯಪಾಲಕ ಎಂಜಿನಿಯರ್ ಎಂ.ರಾಮಚಂದ್ರ, ಬೃಹತ್ ಕಾಮಗಾರಿ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಮಾದೇಶ್ ಇತರರು ಇದ್ದರು.

ಕ್ಲಬ್, ಸ್ಪಾಗಳಲ್ಲಿ ಅಕ್ರಮ ಚಟುವಟಿಕೆ, ಬೆಟ್ಟಿಂಗ್ ಹಾವಳಿ ತಡೆಯಲು ಕಟ್ಟುನಿಟ್ಟಿನ ಕ್ರಮ

ಮಂಡ್ಯ ಜಿಲ್ಲೆಯಲ್ಲಿ 250 ಮಂದಿ ಪುಡಿ ರೌಡಿಗಳ ವಿರುದ್ಧ ರೌಡಿಶೀಟರ್ ತೆರೆಯಲು ಚಿಂತನೆ: ಎಸ್ಪಿ

ಮಂಡ್ಯ, ಮೇ 23– ಜಿಲ್ಲೆಯ ಕ್ಲಬ್, ಸ್ಪಾಗಳಲ್ಲಿ ಅಕ್ರಮ ಚಟುವಟಿಕೆಗಳನ್ನು ತಡೆಯಲು ಹಾಗೂ ಬೆಟ್ಟಿಂಗ್ ಹಾವಳಿ ನಿಯಂತ್ರಿಸಲು ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಶಾಸಕ ರವಿಕುಮಾರ್ ಗಣಿಗ ಕೆಡಿಪಿ ಸಭೆಯಲ್ಲಿ ಜಿಲ್ಲೆಯಲ್ಲಿ ಬೆಟ್ಟಿಂಗ್, ಕ್ಲಬ್ ಹಾಗೂ ಸ್ಪಾಗಳಲ್ಲಿ ವೇಶ್ಯಾವಾಟಿಕೆ, ಅಕ್ರಮ ಚಟುವಟಿಕೆ ಹಾಗೂ ನಿಯಮ ಉಲ್ಲಂಘನೆ ಹಾವಳಿ ಹೆಚ್ಚಾಗಿದೆ. ಇದರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಪೊಲೀಸ್ ಇಲಾಖೆ ಸಿದ್ಧವಿದೆ ಎಂದು ಹೇಳಿದರು.

ಮಂಡ್ಯ ನಗರ ಸೇರಿದಂತೆ ವಿವಿಧೆಡೆ ಈಗಾಗಲೇ ಪೊಲೀಸರು ಕ್ಲಬ್‌ಗಳ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ.



ಮನೆಗಳ್ಳರಿಂದ ವಶಪಡಿಸಿಕೊಂಡ ಚಿನ್ನಾಭರಣಗಳೊಂದಿಗೆ ಪೊಲೀಸರು

ಕೆಲವು ಕ್ಲಬ್‌ಗಳು ಕಾನೂನು ಕ್ರಮ ಉಲ್ಲಂಘಿಸಿರುವ ಬಗ್ಗೆ ಮಾಹಿತಿ ಬಂದಿದೆ. ಅವುಗಳ ಪರವಾನಗಿಯನ್ನು ರದ್ದುಗೊಳಿಸಲು ಚಿಂತನೆ ನಡೆಸಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಐಪಿಎಲ್ ಕ್ರಿಕೆಟ್ ಬೆಟ್ಟಿಂಗ್‌ಗೆ ಸಂಬಂಧಿಸಿದಂತೆ ಈಗಾಗಲೇ ಜಿಲ್ಲೆಯಾದ್ಯಂತ ಏಳು ಪ್ರಕರಣ ದಾಖಲಿಸಿದ್ದು, ನಾಲ್ಕೈದು ಪ್ರಕರಣಗಳಲ್ಲಿ ಹಲವು ಆರೋಪಿಗಳನ್ನು ಬಂಧಿಸಲಾಗಿದೆ. ಜೊತೆಗೆ ಜಿಲ್ಲೆಯಲ್ಲಿ ಕ್ರಿಕೆಟ್ ಬೆಟ್ಟಿಂಗ್ ತಡೆಯುವ ನಿಟ್ಟಿನಲ್ಲಿ ಪೊಲೀಸರು ಅಗತ್ಯ ಕ್ರಮ ಕೈಗೊಂಡಿದ್ದಾರೆ ಎಂದು ತಿಳಿಸಿದರು.

ನಗರದ ಕ್ಲೌಡ್–11 ಸಲೂನ್ ಮತ್ತು ಸ್ಪಾನಲ್ಲಿ ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದ ಹಿನ್ನೆಲೆಯಲ್ಲಿ ಮಾಹಿತಿ ಆಧಾರದ ಮೇಲೆ ದಾಳಿ ನಡೆಸಿ ನಾಲ್ವರು ಯುವತಿಯರನ್ನು ರಕ್ಷಿಸಲಾಗಿದೆ. ಸ್ಪಾ ನಡೆಸುತ್ತಿದ್ದವರನ್ನು ಬಂಧಿಸಲಾಗಿದೆ. ಅಲ್ಲದೆ, ಕಟ್ಟಡದ ಮಾಲೀಕನ ವಿರುದ್ಧವೂ ಕ್ರಮ ಕೈಗೊಳ್ಳಲಾಗಿದೆ. ನಗರದಲ್ಲಿ ಸ್ಪಾಗಳು ಮತ್ತು ಸಲೂನ್ ಹೆಸರಿನಲ್ಲಿ ವೇಶ್ಯಾವಾಟಿಕೆ ದಂಧೆ ನಡೆಸುವವರ ಮೇಲೆ ಹದ್ದಿನ ಕಣ್ಣಿಡಲಾಗಿದೆ. ಇದರ ಬಗ್ಗೆ ಪೊಲೀಸರು ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ. ಅಕ್ರಮವಾಗಿ ಸ್ಪಾ ಹೆಸರಿನಲ್ಲಿ ವೇಶ್ಯಾವಾಟಿಕೆ ದಂಧೆ ಕಂಡು ಬಂದರೆ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ವೇಶ್ಯಾವಾಟಿಕೆ ನಡೆಯಲು ಕೆಲವು ಪೊಲೀಸರು ಶಾಮೀಲಾಗಿದ್ದಾರೆ. ಅಲ್ಲದೆ, ಮಾಹಿತಿ ಇದ್ದರೂ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂಬ ಆರೋಪಗಳು ಕೇಳಿ ಬಂದಿದ್ದು, ಆ ರೀತಿ ಘಟನೆ ನಡೆದಿದ್ದರೆ ಭಾಗಿಯಾದ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಪೊಲೀಸ್ ಇಲಾಖೆ ಯಾವುದೇ ಸ್ಪಾಗಳಿಗೆ ಅನುಮತಿ ನೀಡುವುದಿಲ್ಲ. ಸ್ಪಾ ಮತ್ತು ಸಲೂನ್‌ಗಳಿಗೆ ಅನುಮತಿ ಕೊಡುವುದು ಸ್ಥಳೀಯ ಪ್ರಾಧಿಕಾರಗಳು ಮಾತ್ರ ನೀಡುತ್ತವೆ ಎಂದು ಸ್ಪಷ್ಟಪಡಿಸಿದರು.

250 ಮಂದಿ ಮೇಲೆ ರೌಡಿಶೀಟರ್ ತೆರೆಯಲು ಚಿಂತನೆ

ಮಂಡ್ಯದಲ್ಲಿ ರೌಡಿ ಚಟುವಟಿಕೆಗಳು ಹೆಚ್ಚಾಗಿದ್ದು, ಪುಡಿ ರೌಡಿಗಳ ಹಾವಳಿ ತಡೆಯಲು ಇತ್ತೀಚೆಗೆ ನಗರದ ಪೊಲೀಸ್ ಪರೇಡ್‌ಗ್ರೌಂಡ್‌ನಲ್ಲಿ ಜಿಲ್ಲೆಯ 968 ರೌಡಿಗಳ ಪರೇಡ್ ನಡೆಸಿದ್ದು, ಈ ಪೈಕಿ 300 ಮಂದಿ ರೌಡಿಶೀಟರ್‌ಗಳು ಅಪರಾಧ ಚಟುವಟಿಕೆಗಳಲ್ಲಿ ಸಕ್ರಿಯವಾಗಿರುವುದು ಕಂಡು ಬಂದಿದೆ. ಇವರ ಮೇಲೆ ತೀವ್ರ ನಿಗಾ ಇಟ್ಟಿದ್ದು, ಯಾವುದೇ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗದಂತೆ ತಾಕೀತು ಮಾಡಲಾಗಿದೆ. ಮತ್ತೆ ಪುನರಾವರ್ತನೆಯಾದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಜಿಲ್ಲೆಯ ಕೆಲವೆಡೆ ಪುಡಿರೌಡಿಗಳ ಅಟ್ಟಹಾಸ, ಅಪರಾಧ, ಕಳ್ಳತನ ಚಟುವಟಿಕೆಗಳು ಹೆಚ್ಚಾಗಿದ್ದು, ಸುಮಾರು 250 ಮಂದಿಯನ್ನು ಜಿಲ್ಲಾ ಪೊಲೀಸರು ಗುರುತಿಸಿದ್ದಾರೆ. ಈ ಪೈಕಿ 16ರಿಂದ 18 ವರ್ಷದ ಅಪ್ರಾಪ್ತರು ಗಣನೀಯ ಸಂಖ್ಯೆಯಲ್ಲಿದ್ದು, ಹೈಕೋರ್ಟ್‌ನ ನಿಯಮದಂತೆ ಇವರ ವಿರುದ್ಧ ರೌಡಿಶೀಟರ್ ತೆರೆಯಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು. ಗೋಷ್ಠಿಯಲ್ಲಿ ಎಎಸ್ಪಿ ಗಂಗಾಧರಸ್ವಾಮಿ, ಡಿವೈಎಸ್ಪಿ ಕೃಷ್ಣಪ್ಪ, ಪಿಎಸ್‌ಐಗಳಾದ ಶ್ರೀಧರ್, ಮಹೇಶ್ ಸೇರಿದಂತೆ ಪೊಲೀಸರು ಅಧಿಕಾರಿಗಳು, ಸಿಬ್ಬಂದಿಗಳಿದ್ದರು.

ಪ್ರತ್ಯೇಕ ಕಳ್ಳತನ ಪ್ರಕರಣ: 540 ಗ್ರಾಂ ಚಿನ್ನಾಭರಣ ವಶ

ಮಂಡ್ಯ: ಪ್ರತ್ಯೇಕ ಎರಡು ಕಳ್ಳತನ ಪ್ರಕರಣಗಳಲ್ಲಿ ಮೂವರು ಕುಖ್ಯಾತ ಖದೀಮರನ್ನು ಬಂಧಿಸಿ 35.60 ಲಕ್ಷ ರೂ. ಮೌಲ್ಯದ 540 ಗ್ರಾಂ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ ಎಂದು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಕಳೆದ ಮಾರ್ಚ್ 6ರಂದು ಮಳವಳ್ಳಿ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಹೊಸದೊಡ್ಡಿ ಗ್ರಾಮದ ಗೋವಿಂದಯ್ಯ ಮನೆಯಲ್ಲಿ 4.90 ಲಕ್ಷ ರೂ. ಬೆಲೆ ಬಾಳುವ 75 ಗ್ರಾಂ ಚಿನ್ನ ಕಳ್ಳತನವಾಗಿದೆ ಎಂದು ದೂರು ನೀಡಿದ್ದರು. ದೂರಿನನ್ವಯ ಆರೋಪಿಗಳ ಪತ್ತೆಗೆ ಮಳವಳ್ಳಿ ಗ್ರಾಮಾಂತರ ಠಾಣೆಯ ಇನ್ಸ್‌ಪೆಕ್ಟರ್ ಮಹೇಶ್, ಶಿವಶಂಕರ್ ನೇತೃತ್ವದ ತಂಡ ರಚಿಸಲಾಗಿತ್ತು. ಆರೋಪಿಗಳ ಬಂಧನಕ್ಕೆ ಬಲೆ ಬೀಡಲಾಗಿತ್ತು.

ಇದರನ್ವಯ ಮಾರ್ಚ್ 21ರಂದು ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲೂಕಿನ ವಿಜಯನಗರದ ನಿವಾಸಿ ಸೈಯ್ಯದ್ ಅಹ್ಮದ್ ಹಾಗೂ ಬೆಂಗಳೂರಿನ ಕೆ.ಆರ್.ಪುರಂನ ದೇವಸಂದ್ರದ ತಸ್ಲೀಮ್ ಪಾಷಾ ಎಂಬ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಇವರು ಮಳವಳ್ಳಿ ಗ್ರಾಮಾಂತರ ಠಾಣೆಯ ಮೂರು ಪ್ರಕರಣಗಳಿಗೆ ಬೇಕಾಗಿದ್ದ ಆರೋಪಿಗಳಾಗಿದ್ದಾರೆ. ಮಂಡ್ಯ ಪಶ್ಚಿಮ ಠಾಣೆ, ಮಳವಳ್ಳಿ ಟೌನ್, ಮದ್ದೂರಿನ ಕೆಸ್ತೂರು, ಬೆಂಗಳೂರಿನ ತಲಘಟ್ಟಪುರ ಪೊಲೀಸ್ ಠಾಣೆಗಳಲ್ಲಿ ತಲಾ ಒಂದೊಂದು ಪ್ರಕರಣಗಳು ದಾಖಲಾಗಿವೆ. ಬಂಧಿತರಿಂದ 25.63 ಲಕ್ಷ ರೂ. ಮೌಲ್ಯದ 319 ಗ್ರಾಂ ಚಿನ್ನ, 132 ಗ್ರಾಂ ಬೆಳ್ಳಿ ಆಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಹಲಗೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮೇ 8ರಂದು ಹಲಗೂರು ಗ್ರಾಮದ ವೃದ್ಧೆ ಕಮಲಮ್ಮ ಎಂಬುವರಿಗೆ ದುಷ್ಕರ್ಮಿಯೊಬ್ಬ ಮನೆಗೆ ಬಂದು ಮತ್ತು ಬರುವ ಸಿಹಿ ತಿನಿಸು ನೀಡಿ ಪ್ರಜ್ಞೆ ತಪ್ಪಿಸಿ ಮೈಮೇಲಿದ್ದ 15 ಗ್ರಾಂ 6 ಚಿನ್ನದ ಬಳೆಗಳು, ಕುತ್ತಿಗೆಯಲ್ಲಿದ್ದ 30 ಗ್ರಾಂ ಚಿನ್ನದ ಚೈನು, 6 ಗ್ರಾಂ ಚಿನ್ನದ ಉಂಗುರ ಸೇರಿದಂತೆ ಒಟ್ಟು 12 ಲಕ್ಷ ರೂ. ಮೌಲ್ಯದ 126 ಗ್ರಾಂ ಚಿನ್ನಾಭರಣ ದೋಚಿದ್ದ ಪ್ರಕರಣ ದಾಖಲಾಗಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಕಾರ್ಯಪ್ರವೃತ್ತರಾದ ಹಲಗೂರು ಠಾಣೆಯ ಇನ್ಸ್‌ಪೆಕ್ಟರ್ ಶ್ರೀಧರ್, ಪಿಎಸ್‌ಐ ಲೋಕೇಶ್ ನೇತೃತ್ವದ ತಂಡ ಮೇ 14ರಂದು ಬೆಂಗಳೂರಿನ ಬನ್ನೇರುಘಟ್ಟ ಬಳಿಯ ಪಿಳ್ಳಗಾನಹಳ್ಳಿ ಮೂಲದ ಮುನಾಜಿರ್ ಎಂಬಾತನನ್ನು ಬಂಧಿಸಿ ವಿಚಾರಣೆ ನಡೆಸಿದಾಗ ಆರೋಪಿಯ ತಪ್ಪೊಪ್ಪಿಕೊಂಡಿದ್ದಾನೆ. ಬಂಧಿತನಿಂದ 126 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ.

ಈತನ ವಿರುದ್ಧ ಹಲಗೂರು ಠಾಣೆಯಲ್ಲಿ ಎರಡು ಹಾಗೂ ರಾಮನಗರ ಜಿಲ್ಲೆಯ ಕನಕಪುರ ಗ್ರಾಮಾಂತರ, ಸಾತನೂರು ಠಾಣೆಗಳಲ್ಲಿ ತಲಾ ಒಂದು ಪ್ರಕರಣ ದಾಖಲಾಗಿದೆ ಎಂದು ವಿವರಿಸಿದರು. ಪ್ರಕರಣಗಳ ಪತ್ತೆಯಲ್ಲಿ ಭಾಗವಹಿಸಿದ್ದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಹಾಗೂ ಎಎಸ್ಪಿ ಗಂಗಾಧರಸ್ವಾಮಿ ಪ್ರಶಂಸಿಸಿದ್ದಾರೆ.

ಬಾಲ್ಯವಿವಾಹ ಮುಕ್ತ ಸಂಕಲ್ಪದೊಂದಿಗೆ ಬೃಹತ್ ವಾಕಥಾನ್



ಚಾಮರಾಜನಗರದಲ್ಲಿ ಬೃಹತ್ ಜನಜಾಗೃತಿ ಜಾಥಾ ನಡೆಯಿತು.

ಚಾಮರಾಜನಗರ, ಮೇ 23 – ಬಾಲ್ಯವಿವಾಹ ಮುಕ್ತ ಜಿಲ್ಲೆಯನ್ನಾಗಿಸುವ ಸಂಕಲ್ಪದೊಂದಿಗೆ ನಗರದಲ್ಲಿಂದು ಹಮ್ಮಿಕೊಳ್ಳಲಾಗಿದ್ದ ವಾಕಥಾನ್, ಪ್ರತಿಜ್ಞಾ ಸ್ವೀಕಾರದ ಬೃಹತ್ ಜನಜಾಗೃತಿ ಜಾಥಾ ಪಟ್ಟಣದ ನಾಗರಿಕರ ಗಮನ ಸೆಳೆಯಿತು.

ಬೆಳಗ್ಗೆಯೇ ನಗರದ ಚಾಮರಾಜೇಶ್ವರ ದೇವಾಲಯದ ಆವರಣದಲ್ಲಿ ವಾಕಥಾನ್‌ನಲ್ಲಿ ಭಾಗವಹಿಸಲು ಸಮಾವೇಶಗೊಂಡಿದ್ದ ಜಿಲ್ಲಾಮಟ್ಟದ ಅಧಿಕಾರಿಗಳು, ವಿದ್ಯಾರ್ಥಿಗಳು, ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಸಂಘಸಂಸ್ಥೆಗಳ ಪದಾಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ, ನಟ ಗಣೇಶ್ ರಾವ್ ಮತ್ತು ಅಂತರಾಷ್ಟ್ರೀಯ ಖೋ ಖೋ ಕ್ರೀಡಾಪಟು ಚೈತ್ರಾ ಬಾಲ್ಯವಿವಾಹ ಮುಕ್ತ ಜಿಲ್ಲೆ ಯನ್ನಾಗಿಸುವ ವಾಕಥಾನ್‌ಗೆ ವಿಶೇಷ ಮೆರುಗು ತಂದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಹಾಗೂ ಇತರೆ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ವಾಕಥಾನ್‌ಗೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್‌ರೊಂದಿಗೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ ಹಸಿರು ನಿಶಾನೆ ತೋರಿದರು.

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್ ಮಾತನಾಡಿ ಸಾಮಾಜಿಕ ಅನಿಷ್ಠ ಪದ್ಧತಿಯಾಗಿರುವ ಬಾಲ್ಯವಿವಾಹವನ್ನು ಬೇರು ಸಮೇತ ಕಿತ್ತೊಗೆಯಲು ತಳಮಟ್ಟದ ಅಧಿಕಾರಿಗಳಿಂದ ನಿರಂತರ ಪ್ರಯತ್ನಗಳಾಗಬೇಕಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ ಮಾತನಾಡಿ ಜಿಲ್ಲೆಯಲ್ಲಿ ಬಾಲ್ಯವಿವಾಹ ತಡೆಗಟ್ಟಲು ಪೊಲೀಸ್ ಇಲಾಖೆ ಸಂಪೂರ್ಣ ಸಹಕಾರ ನೀಡುತ್ತಿದೆ. ಖುಷಿಯಿಂದ ಕಳೆಯಬೇಕಾದ ಬಾಲ್ಯವನ್ನು ಮಕ್ಕಳಿಂದ ಬಲವಂತವಾಗಿ ಕಿತ್ತುಕೊಳ್ಳದೆ ಮುಂದಿನ ಭವಿಷ್ಯದ ಜೀವನಕ್ಕೆ ಸಿದ್ಧ ಪಡಿಸಬೇಕಾದ ಜವಾಬ್ದಾರಿ ಪೋಷಕರಿಗೆ ಇದೆ ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಬಾಲ್ಯವಿವಾಹ ನಿರ್ಮೂಲನೆಯ ಪ್ರತಿಜ್ಞಾ ವಿಧಿ ಬೋಧಿಸಿ, ವಾಕಥಾನ್‌ಗೆ ಶುಭ ಹಾರೈಸಿದರು. ವಾಕಥಾನ್‌ನಲ್ಲಿ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಮತ್ತು ಗಣ್ಯರು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಉತ್ಸಾಹದಿಂದ ಸಾಗಿದರು. ಬಳಿಕ ನಗರದ ಭುವನೇಶ್ವರಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಬಾಲ್ಯವಿವಾಹ ನಿರ್ಮೂಲನೆಯ ಘೋಷವಾಕ್ಯಗಳನ್ನು ಮೊಳಗಿಸಿ ಜಾಗೃತಿ ಮೂಡಿಸಿದರು. ಪ್ರವಾಸಿ ಮಂದಿರದಲ್ಲಿ ವಾಕಥಾನ್ ಮುಕ್ತಾಯಗೊಂಡಿತು.

ಬಿಳಿಗಿರಿರಂಗನ ಬೆಟ್ಟದಲ್ಲಿ ಜೀವನೋತ್ಸಾಹ ಶಿಬಿರ ಆರಂಭ

ಯಳಂದೂರು, ಮೇ 23– (ವಿ.ನಾಗರಾಜು)– ಇಂದು ಮನೆಗಳಲ್ಲಿ ಕೊಠಡಿಗಳು ಹೆಚ್ಚಾಗಿ ಮನಸ್ಸುಗಳು ದೂರವಾಗುತ್ತಾ ಮೊಬೈಲ್ ಮತ್ತು ರಿಮೋಟ್ ಕೈಗೆ ಕೊಟ್ಟು ಜೀವನೋತ್ಸಾಹವನ್ನು ಬಲಿ ಕೊಡುತ್ತಿದ್ದೇವೆ ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್ ನುಡಿದರು.

ಸುತ್ತೂರು ಶ್ರೀಕ್ಷೇತ್ರ, ಜಗದ್ಗುರು ವೀರಸಿಂಹಾಸನ ಮಹಾಸಂಸ್ಥಾನ ಮಠ ಆಯೋಜಿಸಿದ್ದ "ಜೀವನೋತ್ಸಾಹ" ಶಿಬಿರದ ಅಧ್ಯಕ್ಷತೆ ವಹಿಸಿದ್ದ ಅವರು, ವೃದ್ಧಾಶ್ರಮಗಳು, ಆಸ್ಪತ್ರೆಗಳು ಹೆಚ್ಚಾಗುತ್ತಿರುವುದು ಆರೋಗ್ಯಕರ ಸಮಾಜದ ಲಕ್ಷಣ ಅಲ್ಲ. ನಮ್ಮ ದುಡಿಮೆ ಹಣದಿಂದ ಸಮಸ್ಯೆ ಪರಿಹಾರವಾಗುವ ಬದಲಿಗೆ, ಸಮಸ್ಯೆ ಮಾಡಿಕೊಳ್ಳುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು. ಪ್ರಕೃತಿ ಮಡಿಲಿನಲ್ಲಿರುವ ಬಿಳಿಗಿರಿರಂಗನ ಬೆಟ್ಟದಲ್ಲಿ ಜೀವನೋತ್ಸಾಹ ಶಿಬಿರವನ್ನು ಶ್ರೀಮಠ ಆಯೋಜಿಸಿರುವುದು ಹೆಚ್ಚು ಅರ್ಥಪೂರ್ಣವಾಗಿದೆ. ನಾನು ಕಾಂಕ್ರೀಟ್ ಕಾಡಿನಿಂದ ಹೊರಟು, ಪ್ರಾಕೃತಿಕ ಸಾಲಿನಲ್ಲಿ ಈ ಬೆಟ್ಟಕ್ಕೆ ಬರುವಾಗ ನನಗೆ ಅನ್ನಿಸಿದ್ದು, ಪ್ರಕೃತಿಯೆ ಜೀವನೋತ್ಸಾಹದ ಚಿಲುಮೆ ಆಗಿದೆ ಎಂದು ಬಣ್ಣಿಸಿದರು.

ಪರಿಸರದಲ್ಲಿ ಸಮತೋಲನ ತಪ್ಪಿದ್ದರಿಂದ ನೂರಾರು ರೀತಿಯ ವೈರಸ್‌ಗಳು, ಬ್ಯಾಕ್ಟೀರಿಯಾಗಳು ಸೃಷ್ಟಿ ಆಗುತ್ತಿವೆ. ಕೋವಿಡ್, ಆಂಥ್ರಾಕ್ಸ್ ರೋಗಗಳು ಬರಲು ಪ್ರಕೃತಿ ಸಮತೋಲನ ತಪ್ಪಿದ್ದೇ ಕಾರಣ ಎಂದು ಜೀವ ವಿಜ್ಞಾನಿಗಳು ಎಚ್ಚರಿಸಿದ್ದನ್ನು ನಾವು ನೆನಪಿಸಿಕೊಳ್ಳಬೇಕು ಎಂದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕವಿತಾ, ಕೆಪಿಎಸ್ಸಿ ಸದಸ್ಯರಾದ ಪ್ರಭುದೇವ, ಹಿರಿಯ ಕಲಾವಿದ ಮುಖ್ಯಮಂತ್ರಿ ಚಂದ್ರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಮೇ 26, ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭ



ಆರಾಧ್ಯ

ಚಾಮರಾಜನಗರ, ಮೇ 23– ಮಾಧ್ಯಮ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಜೆಎಸ್‌ಎಸ್ ಮಹಾವಿದ್ಯಾಪೀಠ ನೀಡುವ ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿಗೆ ಜಿಲ್ಲೆಯ ಹಿರಿಯ ವರದಿಗಾರ ಕೆ.ಎಸ್. ಫಾಲಲೋಚನ ಆರಾಧ್ಯ ಆಯ್ಕೆಯಾಗಿದ್ದು, ಮೇ 26ರ ಬೆಳಗ್ಗೆ 11 ಗಂಟೆಗೆ ಪ್ರಶಸ್ತಿ ಪ್ರದಾನ ಸಮಾರಂಭ ವನ್ನು ಆಯೋಜನೆ ಮಾಡಲಾಗಿದೆ. ಜೆಎಸ್‌ಎಸ್ ಮಹಾ ವಿದ್ಯಾಪೀಠ ಹಾಗೂ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಹಯೋಗದಲ್ಲಿ ನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸೆಮಿನಾರ್ ಹಾಲ್‌ನಲ್ಲಿ ಬೆಳಗ್ಗೆ 11ಕ್ಕೆ ನಡೆಯುವ ಸಮಾರಂಭ ವನ್ನು ಶಾಸಕ ಸಿ. ಪುಟ್ಟರಂಗಶೆಟ್ಟಿ ಉದ್ಘಾಟಿಸಲಿದ್ದಾರೆ. ಶಾಸಕ ಎ.ಆರ್. ಕೃಷ್ಣಮೂರ್ತಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್, ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್, ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾರ್ಯ ದರ್ಶಿ ಶಿವಕುಮಾರಸ್ವಾಮಿ ಭಾಗವಹಿಸಲಿದ್ದಾರೆ. ಸಂಘದ ಅಧ್ಯಕ್ಷ ದೇವರಾಜು ಕಪ್ಪಸೋಗೆ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ.

ಪಟ್ಟಣದಲ್ಲಿ ನಡೆದ ಬೃಹತ್ ತಿರಂಗಾ ಮೆರವಣಿಗೆ



ಪಟ್ಟಣದ ಡಿ.ದೇವರಾಜ ಅರಸು ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ತಿರಂಗಾ ಮೆರವಣಿಗೆಗೆ ಸ್ವಾಮೀಜಿಗಳು ಚಾಲನೆ ನೀಡಿದರು. ಶಿವಲಿಂಗೇಂದ್ರ ಸ್ವಾಮೀಜಿ, ಇಮ್ಮಡಿ ಉದ್ದಾನ ಸ್ವಾಮೀಜಿ, ಇಮ್ಮಡಿ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಗುರುಸಿದ್ದಸ್ವಾಮೀಜಿ, ಮಾಜಿ ಶಾಸಕ ಸಿ.ಎಸ್.ನಿರಂಜನಕುಮಾರ್ ಇದ್ದರು.

ಗುಂಡ್ಲುಪೇಟೆ, ಮೇ 23 (ಸೋಮ್.ಜಿ)– ಆಪರೇಶನ್ ಸಿಂದೂರ ನಡೆಸಿದ್ದ ಭಾರತದ ಸೈನಿಕರಿಗೆ ನೈತಿಕ ಬೆಂಬಲ ಸೂಚಿಸುವ ಸಲುವಾಗಿ ಪಟ್ಟಣ ದಲ್ಲಿ ಶುಕ್ರವಾರ ಬೃಹತ್ ತಿರಂಗಾ ಮೆರವಣಿಗೆ ನಡೆಸಲಾಯಿತು.

ಪಟ್ಟಣದ ಡಿ.ದೇವರಾಜ ಅರಸು ಕ್ರೀಡಾಂಗಣದ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಪಡಗೂರು ಮಠಾಧ್ಯಕ್ಷರಾದ ಶಿವಲಿಂಗೇಂದ್ರಸ್ವಾಮೀಜಿ, ಮೂಡಗೂರು ಮಠಾಧ್ಯಕ್ಷ ಇಮ್ಮಡಿ ಉದ್ದಾನ ಸ್ವಾಮೀಜಿ, ಬೊಮ್ಮನಹಳ್ಳಿ ಮಠಾಧ್ಯಕ್ಷ ಇಮ್ಮಡಿ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಮತ್ತು ಕಬ್ಬಹಳ್ಳಿ ಮಠಾಧ್ಯಕ್ಷ ಗುರುಸಿದ್ದಸ್ವಾಮೀಜಿ ಚಾಲನೆ ನೀಡಿದರು. ಸರ್ಕಾರಿ ಐಟಿಐ ಕಾಲೇಜು, ಜೆಎಸ್‌ಎಸ್ ಮತ್ತು ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ವಿದ್ಯಾರ್ಥಿ ಗಳು, ಎನ್.ಸಿ.ಸಿ ಮತ್ತು ಎನ್.ಎಸ್.ಎಸ್. ಘಟಕದವರು, ಕನ್ನಡ ಹಾಗೂ ರೈತ ಸಂಘಟನೆಗಳ ನೂರಾರು ಸದಸ್ಯರು 150 ಅಡಿ ಉದ್ದದ ರಾಷ್ಟ್ರಧ್ವಜ ವನ್ನು ಹಿಡಿದು ಭಾರತೀಯ ಸೈನಿಕರ ಪರವಾಗಿ ಜಯಘೋಷ ಕೂಗಿದರು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಯೋಧ ಶಿವಾ ನಂದ ವೃತ್ತದವರೆಗೆ ಸಾಗಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿ.ಎಸ್.ನಿರಂಜನ ಕುಮಾರ್ ಮಾತನಾಡಿ, ದೇಶದ ರಕ್ಷಣೆಯಲ್ಲಿ ಮಹತ್ತರವಾದ ಪಾತ್ರವಹಿಸುತ್ತಿರುವ ನಮ್ಮ ಸೈನಿಕರಿಗೆ ನೈತಿಕ ಬೆಂಬಲ ಸೂಚಿಸುವ ಸಲುವಾಗಿ ತಿರಂಗಾ ಯಾತ್ರೆ ಮಾಡುತ್ತಿದ್ದು, ಸೈನಿಕರ ಶಕ್ತಿಯಿಂದ ಮಾತ್ರ ಉಗ್ರರ ಸಂಹಾರ ಸಾಧ್ಯ ಎಂದು ಸಾಬೀತು ಮಾಡಿದ್ದಾರೆ ಎಂದರು.

ಪುರಸಭೆ ಮಾಜಿ ಅಧ್ಯಕ್ಷ ಎಲ್.ಸುರೇಶ್, ಮಂಡಲಾಧ್ಯಕ್ಷ ಮಹದೇವಪ್ರಸಾದ್, ರೈತ ಮುಖಂಡ ಮಹದೇವಪ್ಪ, ಸಂಪತ್ತು, ಮಹೇಶ್, ಕೆ.ಎಲ್. ಮಹದೇವಸ್ವಾಮಿ, ಶಿವಪ್ರಸಾದ್, ಬಾಬು, ಶಿವಪ್ರಸಾದ್, ಮಂಜುನಾಥ್, ಎಸ್.ಟಿ.ಮಹದೇವ ಸ್ವಾಮಿ, ವೀರಪ್ಪ, ಪುರಸಭೆ ಮಾಜಿ ಸದಸ್ಯೆ ಮಂಗಳಾ ಮಂಜುನಾಥ್, ರಾಜೇಂದ್ರ, ಅಬ್ದುಲ್ ಮಾಲೀಕ್, ಮುನೀರ್‌ಪಾಷಾ, ಎಸ್.ಸಿ.ಮಂಜುನಾಥ್ ಮೊದಲಾದವರು ಇದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

HIRING NOW
Site Engineers - 2 Post
Sales Executive- 1 Post
Telecallers (F) - 1 Post
Driver - 1 Post
Required min 2 Years Exp. for all the Positions
9606184909
Send CV: smpmysuru@gmail.com

Solar Water Heaters built for Modern Living
20 ವರ್ಷಗಳ ವ್ಯಾರಂಟಿ
JUPITER SOLAR
Solar Water Heater SALES & SERVICE



SUNZONE SOLAR SYSTEM
VM Double Road, Kuvempunagar, Mysuru
9845175443

SITE FOR SALE
40x60 S/F
Roopa Nagara
Mob: 9740088990
98866 91475

HOUSE FOR SALE
30x40 new house
Dattagalli & Vijayanagar
Mob: 9740088990

DTCP SITES FOR SALE
ಹುಣಸೂರಿನ ಕೋಟೆ ರಸ್ತೆಯ "VCR ದೇವಗಿರಿ" ಬಡಾವಣೆ ನಿವೇಶನಗಳು ಮಾರಾಟಕ್ಕಿವೆ.
9886048471, 9036291192

WANTED–ಬೇಕಾಗಿದ್ದಾರೆ
ಮೈಸೂರ್ ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಫ್ರಾಗ್ರನ್ಸ್ ಕಂಪನಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಮಯ ರಾತ್ರಿ 10pm to 6am +3 Shift
ಸಂಬಳ: 13773+ Allowances (2000)
ಸಂಪರ್ಕಿಸಿ: ಕೋಮಲ್ ಎಂಟರ್‌ಪ್ರೈಸಸ್
ಸುಪ್ರಾ ಪ್ರಕಾಶ್ 7892725603
8971460235

ಶ್ರೀ ಬಾಲಾಜಿ ಟೂರಿಸ್ಟ್
25.07.25–7 ದಿನ: ದೆಹಲಿ, ಆಗ್ರಾ, ಕಾಶಿ, ಅಯೋಧ್ಯೆ, ಮಥುರಾ, ಬೃಂದಾವನ, ಗಯಾ, ಬುದ್ಧಗಯಾ, ಪ್ರಯಾಗ್
05.09.25–14 ದಿನ: ಚಾರ್‌ಧಾಮ್ ಯಾತ್ರೆ ದೆಹಲಿ, ಯಮುನೋತ್ರಿ, ಗಂಗೋತ್ರಿ, ಕೇದಾರ್‌ನಾಥ್, ಬದ್ರಿನಾಥ್
04.10.25–14 ದಿನ: ಗುಜರಾತ್ ರಾಜ್ಯಾನ ಮಧ್ಯಪ್ರದೇಶ 4 ಜ್ಯೋತಿರ್ಲಿಂಗಗಳು, ಓಂಕಾರೇಶ್ವರ, ಮಹಾಕಾಳೇಶ್ವರ, ಸೋಮನಾಥೇಶ್ವರ, ನಾಗೇಶ್ವರ, ಜೈಪುರ್,ಪುಷ್ಕರ್,ದ್ವಾರಕ, Statue of Unity, ಮೌಂಟ್ ಅಬು, ಅಂಬಾಜಿ, ಇತ್ಯಾದಿ
ವಿಮಾನ/ರೈಲು/ಬಸ್ಸು, ಊಟ–ವಸತಿ, ರೂಂ ಸೇರಿದೆ.
9945770486

AVILABLE FOR RENT
COMMERCIAL PORPOSE ONLY APPOXIMENTLY 500 SQFEET 1st 2nd 3rd FLOOR EACH NEAR DEVARAJA MARKET 2nd BUILDING FROM CANARA BANK A T M
9964991314
9845601370

Walk in interview
SLD excellent public School English Teacher
Nursery Teacher
Office Staff & Car Driver
Venue yelwala KHB Colony Mysore contact
7204284724
8722963130

WANTED
Preferably Male candidates For a reputed company in Mysore
• ACCOUNTANT with 2 years experience in Tally
• ADMINISTRATION ASSISTANT with 1 year experience
Send resume to : unifreshfoodsllp@gmail.com

ಬಸವಮಾರ್ಗ ವ್ಯಸನಮುಕ್ತ ದೇವಸ್ಥಾನ
10 ದಿನಗಳ ಸಂಪೂರ್ಣ ಉಚಿತ ಕುಡಿತ ಬಿಡಿಸುವ ಶಿಬಿರ ಜೂ.1 ರಿಂದ 10ರ ವರೆಗೆ
88033-44999
97429-19191

ಬೋಳು ತಲೆಯ ಸಮಸ್ಯೆಯೇ?



ಕಿಮೋಥೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವಾಭಾವಿಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 BANGALORE 9343142258

ಬಾಡಿಗೆಗಾಗಿ
2100sqft 1&2ನೇ ಮಹಡಿ ವಾಣಿಜ್ಯ ಮಳಿಗೆ ನಂಜುಮಳಿಗೆ ಹತ್ತಿರ, ಮಧ್ವಾಚಾರ್ ರಸ್ತೆ, ಮುತ್ತೂಟ್ ಮನಿ ಕೆ.ಆರ್.ಮೊಹಲ್ಲಾ, ಮೈಸೂರು
9448787351

HOUSE FOR SALE
Newly built 3 BHK independent house, East face @ Lalithadri Nagar, Near Ring Road, Behind Indian Oil Petrol Bunk.
9206666888, 9663452259

30x50, DTCP 11 ``A"
ಖಾತೆ ರೇರಾ ಅಪ್ರೂಡ್ ಸೈಟು ಮಾರಾಟಕ್ಕಿದೆ 26 ಲಕ್ಷಗಳು (80 ಅಡಿ ಬಸ್ ರಸ್ತೆಗೆ ಹತ್ತಿರದಲ್ಲಿದೆ) ತಳೂರು TVS ಫ್ಯಾಕ್ಟರಿ ಹತ್ತಿರ, ಮೈಸೂರು
9742198093

Wanted teaching staff for reputed institution, (Experience preferred) for Hindi, social science, maths and science
Transport facilities available
Drop your resume through WhatsApp Contact no
8971577685
9980631121

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

FARM HOUSE - VILLA PLOTS
(RERA Apprvd - Bank Loan Available)
9800 Sqft - 5 Sq Bldg - 62.00 Lakhs
8000 Sqft - 5 Sq Bldg - 49.00 Lakhs
Main Occupants From HAL - in 14 Acre Boundary on NH 275(Proposed)
After Bilikere - K R Nagar RD.
Call - 9886697052

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಬೇಕಾಗಿದ್ದಾರೆ
ಕೆಲಸ - ಹೋಮ್ ನರ್ಸಿಂಗ್/ಕೇರ್ ಗಿವರ್ಸ್, ಸಂಬಳ : 14 ರಿಂದ 20 ಸಾವಿರ +PF & ESI
ಸ್ಥಳ : ಮಂಗಳೂರು, ಬೆಂಗಳೂರು
99802 98666

ಬಾಡಿಗೆ ಮನೆ ಹಾಗೂ ಜಾಗ ಬೇಕಾಗಿದ್ದರೆ ಹಾಗೂ ಕೊಡುವುದಿದ್ದರೆ ಸಂಪರ್ಕಿಸಿ:
8123386742
7406009827

ಬೇಕಾಗಿದ್ದಾರೆ
ಹೆಸರಾಂತ ಲ್ಯಾಂಡ್ ಡೆವಲಪರ್ಸ್ ಕಂಪನಿಯಲ್ಲಿ ಟಿ.ಕೆ.ಲೇಔಟ್‌ನಲ್ಲಿ ಕೆಲಸ ಮಾಡಲು ಟೆಲಿಕಾಲರ್ಸ್ (ಹುಡುಗಿಯರು) ತಕ್ಷಣವೇ ಬೇಕಾಗಿದ್ದಾರೆ.
ಸಂಬಳ: 15000/– ರಿಂದ 20000/–
9606981213

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

SITE FOR SALE
* East Facing Site
* Near Mysore Airport
* 30x40, E-Khata
* MUDA Khata
* Clear Documents
* Direct Owner
9342123373

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಸೈಟು ಮಾರಾಟಕ್ಕಿದೆ
30x60 E/F
BEML ಲೇಔಟ್
ಜೆ.ಪಿ.ನಗರ, ಶ್ರೀ ನಗರ ಹತ್ತಿರ
7676830832

We Are Hiring
Above 2 Year Experience DTP Operator & Graphics Designer
Contact : (Between 11 am to 6 pm)
95913 59048
96060 69369

ಸುವರ್ಣಾ ಯಾತ್ರಾ
20 ದಿನಗಳ ಗುಜರಾತ್, ಅಯೋಧ್ಯ, ಕಾಶಿ ಮತ್ತು ಇತರೆ ಪ್ರವಾಸ, ಸೋಮನಾಥ, ದ್ವಾರಕಾ ಬೇಟ್ ದ್ವಾರಕಾ, ಮಾತ್ರಗಯ ನಾಗೇಶ್ವರ್, ಆಗ್ರಾ, ಅಯೋಧ್ಯ, ಕಾಶಿ, ಪ್ರಯಾಗ್‌ರಾಜ್ ಹೊರಡುವ ದಿನಾಂಕ: 28–6–2025
9886829622

ಬೇಕಾಗಿದ್ದಾರೆ
ಲಕ್ಷ್ಮೀಪುರಂನಲ್ಲಿ 2 ವರ್ಷದ ಮಗುವನ್ನು ನೋಡಿಕೊಳ್ಳಲು 24 ಗಂಟೆ ಗಂಟೆಗಳ ಕಾಲ ಮಹಿಳಾ ಸಹಾಯಕಿ ಬೇಕಾಗಿದ್ದಾರೆ.
ಕರೆ ಮಾಡಿ: 9632866616

WANTED
Marketing Executive
Pipe Distribution
Salary + Incentive
Age: 20-35, 2 wheeler must.
Call: 9008513355, Mysuru

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಸೋಲಾರ್ ಸರ್ವೀಸ್
8197383645, 9008711654

PRAKRUTHI PROPERTIES
COMMERCIAL PROPERTIES FOR SALE
27x60@Jayanagar
30x45@Jayanagar
20x57-Saraswatipuram
30x40 Dattagalli Ring Road,
60x90 Vijaya Nagar Ring Road
40x60 Ramakrishna Nagar
50x80 Near Sathaghalli Bus Depo
Also Available Residential & Commercial plots in & around Mysore
95386 90359, 90359 90359

HOUSE FOR RENT
60x40, 4 bedrooms, two hall, kitchen, two bathrooms, attach one. Ground floor, Vasu City layout, Ramakrishna-nagar 'K' Block, Mysore.
9986263647, 9731791977

SITES FOR SALE
* 3880 sq.ft. semi commercial, Vijayanagar 2nd Stage 9000 / sq.ft. * 40x60 N/E Corner, Vijayanagar 2nd Stage 3.25 Cr. * 40x60 E/F & S/W sites, Hunsur Road. 1500 / sq.ft. * 2580 sq.ft. N/E Corner, Vijayanagar 2nd. 11,500 / sq.ft.
Mob: 9832407342

ಮನೆ ಮಾರಾಟಕ್ಕಿದೆ
ಮೈಸೂರು ನಗರದಲ್ಲಿರುವ ಅಶೋಕಪುರಂ ಬಡಾವಣೆಯ, 4ನೇ ಕ್ರಾಸ್‌ನಲ್ಲಿರುವ, 17x55 ಅಡಿಗಳಲ್ಲಿ ಹೊಸದಾಗಿ ಕಟ್ಟಿ 3 ವರ್ಷ ಆಗಿರುವ 2BHK ಹೊಂದಿರುವ 2 ಇಂಡಿಪೆಂಡೆಂಟ್ ಆಗಿ ಸಪರೇಟ್ ಆಗಿ ಉತ್ತರ ಹಾಗೂ ಪೂರ್ವ ಬಾಗಿಲು ಹೊಂದಿರುವಂತ ಮನೆ, ಹಾಗೂ ಕಾರ್ಪೋರೇಷನ್ (ಇ–ಖಾತೆ) ಹಾಗೂ ಎಲ್ಲಾ ರೀತಿಯ ದಾಖಲೆಯನ್ನು ಹೊಂದಿರುವ ಮನೆ ಮಾರಾಟಕ್ಕಿದೆ.
9739780095
9113523954

ಮನೆಯಿಂದಲೇ ಕೆಲಸ
ಗೃಹಿಣಿಯರು, ವಿದ್ಯಾರ್ಥಿಗಳು, ವಯಸ್ಕರು, ನಿವೃತ್ತಿ ಹೊಂದಿದವರು, ನಿಮ್ಮ ಬಿಡುವಿನ ವೇಳೆಯಲ್ಲಿ ಮನೆಯಲ್ಲಿಯೇ ಕುಳಿತು, ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್, ಡಾಟಾ ಎಂಟ್ರಿ ಮೊಬೈಲ್ ಬಳಸಿ ಸ್ಟೋರಿ ಟೈಪಿಂಗ್ ಮತ್ತು ಪ್ಯಾಕಿಂಗ್ ಕೆಲಸಗಳು ಮಾಡಿ ಗಳಿಸಿ ತಿಂಗಳಿಗೆ 15000 ದಿಂದ 30000ದವರೆಗೆ ಎಲ್ಲಿರಿಗೂ ಮುಕ್ತ ಅವಕಾಶ ಕರೆಮಾಡಿ.
8951232569
7829483767

ತಕ್ಷಣ ಬೇಕಾಗಿದ್ದಾರೆ
ರಾತ್ರಿ (3 pm to 1 pm) ಯಲ್ಲಿ ಕೆಲಸ ಮಾಡಲು ಟ್ರಕ್ ಡ್ರೈವರ್ ಬೇಕಾಗಿದ್ದಾರೆ. ಪಿಎಫ್, ಇಎಸ್‌ಐ ಮತ್ತು ಊಟದ ವ್ಯವಸ್ಥೆ ಇರುತ್ತದೆ. ಸಂಪರ್ಕಿಸಿ:
Mob: 9341623350

Coaching-II PUC (COMMERCE)
Opposite Marimallappa College - City Centre, excellent coaching in Accounts, Economics, Statistics, Business Studies, Basic Maths. Only 8 students per batch. 100% attention for each student. Low fees for poor students. Contact: Professor
Mob: 9901932751

ಮನೆ ಮಾರಾಟಕ್ಕಿದೆ
30x40 ಮನೆ ಮಾರಾಟಕ್ಕಿದೆ.
20x30
30x50 ಸೈಟು ಮಾರಾಟಕ್ಕಿದೆ.
30x40.
Mob: 9008711654

HOUSES FOR SALE
* 40x72 E/Face 3 floors (Old) Gokulam 1st Stage. 3.25 Cr.
* 30x40 E/Face Duplex house, Vijayanagar 2nd Stage. 1.65 Cr.
* 30x40 S/E and North face 2 houses Vijayanagar 1st Stage.
Mob: 9832407342

SITE FOR SALE
JP Nagar, near Srinagar, Opposite to MMG Layout, North facing 10,890 Sqft. Conversion land, road width 97 ft - length 115 ft. 8 km from the City bus stand, Mysuru. Contact:
Contact: 9342114717

SK CONSTRUCTION
ಮನೆ ಕಟ್ಟಬೇಕೇ ಚಿಂತೇ ಬೇಡ ನಿಮ್ಮ ಕನಸಿನ ಮನೆ ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Plan-3D Elevation ಸಹಿತ ಕಟ್ಟಿಕೊಡುತ್ತೇವೆ.
All Engeneering Service in one Roof
9620528490

ಬೇಕಾಗಿದ್ದಾರೆ
ಪ್ರತಿಷ್ಠಿತ ಫೈನಾನ್ಸ್ ಕಂಪನಿಗೆ ಕೆಲಸ ನಿರ್ವಹಿಸಲು ಹುಡುಗ/ಹುಡುಗಿಯರು ಬೇಕಾಗಿದ್ದಾರೆ.
ಹುದ್ದೆ: ಟೆಲಿಕಾಲರ್/ಮ್ಯಾನೇಜರ್ ಆಸಕ್ತಿಯುಳ್ಳವರು ಸಂಪರ್ಕಿಸಿ:
8050923846

SITE FOR SALE
52X60 SW CORNER SITE FOR SALE IN HPO AND RMS LAYOUT NEAR DR. RAJKUMAR ROAD GOOD LOCATION
9880344263

ಹೋಮ್ ಸ್ಟೇ ಬಾಡಿಗೆಗೆ ದೊರೆಯುತ್ತದೆ
ರೆಸಾರ್ಟ್ ಮಾದರಿಯ 10 ಎಕರೆ ಜಾಗದಲ್ಲಿ ನೆಲೆಸಿರುವ 8 ಕಾಟೇಜ್, 1 ಲೇಬರ್ ರೂಮ್, ಜನರೇಟರ್, 1 ಕೆರೆ, ಸ್ವಿಮ್ಮಿಂಗ್ ಪೂಲ್ [ಅಂಡರ್ ಕನ್ಸ್ಟ್ರಕ್ಷನ್] ಡೈನಿಂಗ್ ಹಾಲ್, ಆಟದ ಮೈದಾನ ಒಳಗೊಂಡ ಹೋಮ್ ಸ್ಟೇ ದಕ್ಷಿಣ ಕೊಡಗಿನಲ್ಲಿ ಬಾಡಿಗೆಗೆ ಲಭ್ಯವಿದೆ.
9986873386

ಬೇಕಾಗಿದ್ದಾರೆ
ಹಳೆ ಆರ್‌ಎಂಸಿ ಸರ್ಕಲ್‌ನ ಪೆಟ್ರೋಲ್ ಬಂಕ್‌ಗೆ ಕ್ಯಾಷಿಯರ್ & ಹೆಲ್ಪರ್ಸ್ (ಪುರುಷ/ಮಹಿಳೆ) ವಯಸ್ಸು : 18 ರಿಂದ 40 ಬೇಕಾಗಿದ್ದಾರೆ.
9035541774

ಮನೆ ಮತ್ತು ಮಳಿಗೆ ಮಾರಾಟಕ್ಕಿದೆ
25x30 ಅಳತೆಯ ಪೂರ್ವ ದಿಕ್ಕಿನ ಮೂರು ಅಂತಸ್ತಿನ (ಕಾರ್ನರ್) ಮನೆ ಮತ್ತು ಮಳಿಗೆ ಮಾರಾಟಕ್ಕಿದೆ. ನಂ.648, 4/4ನೇ ಕ್ರಾಸ್, ರಾಮಕೃಷ್ಣನಗರ, ಇ ಮತ್ತು ಎಫ್ ಬ್ಲಾಕ್, ಮೈಸೂರು. ಮಾಲೀಕರು:
8904481012

SITE FOR SALE
30X70 EAST FACE IPS SRINIVASA NAGARA (Police Layout 3rd Stage)
9480555474

SITE FOR SALE
30x40 W/F
ಶ್ರೀ ಕೃಷ್ಣಧಾಮ ನಗರ, MUDA ಖಾತಾ, ಕಬಿನಿ ವಾಟರ್, ನಿಯರ್ ಶ್ರೀರಾಂಪುರ ರಿಂಗ್ ರೋಡ್ ಸರ್ಕಲ್
9945562267

HOUSE FOR SALE
Vijaynagar 4th Stage 2nd phase 20x30, North Facing G+2 Floors
Brokers Excuse
Contact
9845005718

ಜಮೀನು/ಪಿಜಿ ಬಾಡಿಗೆಗೆ ಇದೆ
ಮೈಸೂರು ತಾ॥ ಭೋಗಾದಿ ರಿಂಗ್ ರಸ್ತೆಯಿಂದ 3 ಕಿಮೀ ದೂರದಲ್ಲಿ ಎಲ್ಲಾ ಸೌಕರ್ಯವಿರುವ 2 1/4 ಎಕರೆ ವಿವಿಧ ಉದ್ದೇಶಕ್ಕೆ ಬಾಡಿಗೆಗೆ ಇದೆ ಹಾಗೂ ಅಪೋಲೋ ಆಸ್ಪತ್ರೆ ರಸ್ತೆಯಲ್ಲಿ 8 ರೂಮಿನ 25 ಜನ ಸಾಮರ್ಥ್ಯದ ಉಪಕರಣಗಳ ಸಮೇತ ಬಾಡಿಗೆಗೆ ಇದೆ.
8197609290

MONTESSORIE TEACHERS AND ಆಯಾ WANTED
9739606258
9739548823

SITE FOR SALE
60x40 West Face, Site Zilla Emloyees Layout Near, Yedalli (Adjacent to KHB Kenchalgud Layout)
Brokers Excuse
9845435804

ಸೈಟು ಬೇಕಾಗಿದೆ
ಚಿಕ್ಕಣ್ಣ/ವರುಣ/ವಾಜಮಂಗಲ/ ಜೆ.ಎಸ್.ಎಸ್/ಬಸವೇಶ್ವರ/ ನಿರ್ಮಾಣ್ ಲೇಔಟ್ ಹಾಗೂ ಇತರೆ ಅಕ್ಕಪಕ್ಕದ ಬಡಾವಣೆಗಳಲ್ಲಿ ಟಿ.ನರಸೀಪುರ ರಸ್ತೆ ಬನ್ನೂರು ರಸ್ತೆ
9686071750

ಸೆಕ್ಯೂರಿಟಿ ಗಾರ್ಡ್ಸ್‌ಗಳು ಬೇಕಾಗಿದ್ದಾರೆ
ಮೈಸೂರಿನ ದೇವೇಗೌಡ ಸರ್ಕಲ್, ಜಯಲಕ್ಷ್ಮೀಪುರಂ, ಬೋಗಾದಿ ಸುತ್ತಮುತ್ತ ಕೆಲಸ ನಿರ್ವಹಿಸಲು ಸೆಕ್ಯೂರಿಟಿ ಗಾರ್ಡ್ಸ್‌ಗಳು ಬೇಕಾಗಿದ್ದಾರೆ. ವಯೋಮಿತಿಯು 50 ವರ್ಷದೊಳಗೆ ವಿದ್ಯಾಭ್ಯಾಸ ಹತ್ತನೇ ತರಗತಿ ಪಾಸ್ ಅಥವಾ ಫೇಲ್ ವೇತನ 12000/– ಹಾಗೂ ಪಿಎಫ್‌ಇಎಸ್‌ಐ ಇರುತ್ತದೆ
6361765969,8792815411

TEACHERS WANTED
SBP SCHOOL BELAGOLA KRS ROAD INDIRA CONVENT GUTHALU COLONY, MANDYA.
QUALIFICATION: BSc, BEd, BA, BEd, PUC, DEd, PUC, NST,
(Bus Driver Wanted)
8747011791
7259547922

ಬೇಕಾಗಿದ್ದಾರೆ
ಸ್ಕೂಟರ್‌ನಲ್ಲಿ ಆಹಾರ ಪದಾರ್ಥಗಳನ್ನು ಮನೆ ಮನೆಗೂ ಡೆಲಿವರಿ ಕೊಡಲು DL ಉಳ್ಳ ಹುಡುಗರು ಬೇಕಾಗಿದ್ದಾರೆ. ಸಂಬಳ: 15000 ಇಚ್ಛೆ ಉಳ್ಳವರು ಸಂಪರ್ಕಿಸಿ ನಜರ್‌ಬಾದ್, ಮೈಸೂರು
9739816440

ಮನೆ ಭೋಗ್ಯಕ್ಕಿದೆ
ಇಂಡಿಪೆಂಡೆಂಟ್ ಮನೆ 20x30 ರ ವಿಸ್ತೀರ್ಣವುಳ್ಳ ಮನೆ EF&WF ಫೇಸ್ ಎರಡು ಕಡೆ ಬಾಗಿಲು ಇದೆ.
3 ಬೆಡ್ ರೂಮಿನ ಮನೆ ಸರಸ್ವತಿಪುರಂ & ಶ್ಯಾಮ್ ಸ್ಟುಡಿಯೋ ಹತ್ತಿರ ಭೋಗ್ಯಕ್ಕಿದೆ. ರೂ. 12 ಲಕ್ಷ ನೆಗೋ
ಸತೀಶ್ ಸ್ವಾಮಿ 9113612442
9845570573

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರದಲ್ಲಿ ಏರಿಯಾದಲ್ಲಿ ಕೆಲಸ ಮಾಡಲು ಅನುಭವವುಳ್ಳ ಸೆಕ್ಯೂರಿಟಿ ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC & ಮೇಲ್ಪಟ್ಟು ಸಂಬಳ: 22000 W/o (8 hours) ಊಟ ತಿಂಡಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು
8050313506
9880727819

ಜಮೀನು ಮಾರಾಟಕ್ಕಿದೆ
ಮೈಸೂರು ತಾಲ್ಲೂಕು ಜೈಪುರ ಹೋಬಳಿ ಪೆರಿಫೆರಲ್ ರಿಂಗ್ ರೋಡ್ ಮತ್ತು ಸ್ಯಾಟ್‌ಲೈಟ್ ಸಿಟಿಗೆ ಹತ್ತಿರವಿರುವ ಜಮೀನು ಮಾರಾಟಕ್ಕಿದೆ. ಹಂಪಾಪುರ ಹೋಬಳಿಯಲ್ಲಿ ಕಬಿನಿ ಹೊಳೆಯ ಅಕ್ಕಪಕ್ಕದಲ್ಲಿ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ
9945661696
9663793666

ಬಾಡಿಗೆಗೆ ಇದೆ
1BHK ಮತ್ತು 2BHK ಬಾಡಿಗೆಗೆ ಇದೆ 1BHK (1st Floor) ಮತ್ತು 2BHK (Ground Floor) No.363, M.Block ಕುವೆಂಪುನಗರ ಪೂರ್ವ ದಿಕ್ಕಿನ ಬಾಗಿಲು
9845596862

ಸೈಟು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್ JSS ಲೇಔಟ್, ನಿರ್ಮಾಣ್ ನಗರ ಹಾಗೂ ಸುತ್ತಮುತ್ತ ಇರುವ ಲೇಔಟ್‌ಗಳಲ್ಲಿ
9844436672

SITE FOR SALE
40X60 South Face Vijayanagara 3rd Stage E - Block
Price: 2.05 Cr Negotiable
8197707001

ಶುಂಠಿ ಕೃಷೀಕರೆ
ಉತ್ತಮ ದರ್ಜೆಯ ಬೇವಿನ ಹಿಂಡಿ ಹಾಗೂ ಬೇವಿನ ಹುಡಿ ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ. ಶ್ರೀ ಕಾಮಾಕ್ಷಿ ಬಯೋ–ನೀಮ್ #203, ಬನ್ನಿಮಂಟಪ, ಮೈಸೂರು–15
80888-87802

SITE FOR SALE
N/E Corner 60x70
Suvarna Nagara Bhogadi Road
8050821108

ಅಡುಗೆ ಭಟ್ಟರು ಬೇಕಾಗಿದ್ದಾರೆ
ಮೈಸೂರಿನ ಹೃದಯ ಭಾಗದಲ್ಲಿರುವ ಹೋಟೆಲ್‌ಗೆ ಒಳ್ಳೆಯ ನುರಿತ ಅನುಭವವುಳ್ಳ ಅಡುಗೆ ಭಟ್ಟರು ಹಾಗೂ ಭಟ್ಟರ ಅಸಿಸ್ಟೆಂಟ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ, ಊಟ, ವಸತಿ ಸೌಲಭ್ಯವಿರುತ್ತದೆ. ಮೊದಲು ಬಂದವರಿಗೆ ಆದ್ಯತೆ ಕೂಡಲೇ ಸಂಪರ್ಕಿಸಿ
9945184824

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಕೆಲಸ ಮಾಡಲು ಹುಡುಗರು, ಹುಡುಗಿಯರು ಬೇಕಾಗಿದ್ದಾರೆ. 1 ರಿಂದ SSLC ಯಾವುದೇ ಡಿಗ್ರಿಯವರಿಗೂ (ಅಥವಾ) (ವಿದ್ಯಾರ್ಹತೆ ಇಲ್ಲ) ವೇತನ ಅರ್ಹತೆಗೆ ತಕ್ಕಂತೆ ವಯೋಮಿತಿ 18 ರಿಂದ 45 ವರ್ಷದವರೆಗೆ ESI, PF (ಊಟ, ವಸತಿ ಸೌಲಭ್ಯವಿರುತ್ತದೆ) (ಪಾರ್ಟ್ ಟೈಮ್ ಇರುತ್ತದೆ.
9164975503,7795465519
8217498208

JOB'S IN MYSORE
Earn (10400/- ರಿಂದ 20500/-) PM, 10th PUC, ಮೇಲ್ಪಟ್ಟಿರುವ Age (18-24), Trainee Manager ಗಳಾಗಿ NO FEE ಪರಸ್ಥಳವರಿಗೆ ಮಾತ್ರ ವಸತಿ ಪ್ರವೇಶಗಳೊಂದಿಗೆ ಖುದ್ದಾಗಿ ಸಂಪರ್ಕಿಸಿ
Walk in (11AM to 3PM)
ಗೌತಮ 9342238667

ನಿವೃತ್ತ ನೌಕರರಿಗೆ ಉದ್ಯೋಗಾವಕಾಶ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benefits: Fixed Salary +PF+ESI+ ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು: ಫೋಟೋ, ಪಾನ್‌ಕಾರ್ಡ್, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ, ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಸ್ಥಳ: Sharada Platina , 1st Floor, Opp. Clock Tower Time 11am and Date 26-05-2025 (Followed by Lunch)
9448376423,9886883858

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ/ ನಾಯಕ/SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ:
(II Marriages Also)
9343175000

ಮನೆ ಕಟ್ಟಿಸುವವರ ಗಮನಕ್ಕೆ
ನಿಮ್ಮ ಕನಸಿನ ಮನೆಯನ್ನು ಚದುರಡಿಗೆ ಕೇವಲ ರೂ.1900/–ಗೆ ಉತ್ತಮ ಸಾಮಾಗ್ರಿಗಳನ್ನು ಉಪಯೋಗಿಸಿ ಕಟ್ಟಿಕೊಡಲಾಗುವುದು ಕೆಂಪು ಇಟ್ಟಿಗೆ, ಅಲ್ಟ್ರಾಟೆಕ್ ಸಿಮೆಂಟ್, ಎಸ್.ಕೆ.ಸ್ಟೀಲ್, ಟೀಕ್‌ವುಡ್ ಬಾಗಿಲು/ಕಿಟಕಿಗಳು, ವಿ–ಗಾರ್ಡ್ ವೈರಿಂಗ್/ಆಂಕರ್ ಸ್ವಿಚಸ್
7892836279

WANTED TEACHERS
JNANAJYOTHI VIDYALAYA (English medium. High school) Wanted H M.Social science-1, Hindi-1 Mathematics-1 immediately
Contact:
9845390377
8197057626

ಮೈಸೂರು ಮಿತ್ರ 46 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಕೆ.ಆರ್.ನಗರದಲ್ಲಿ 513 ಕೋಟಿ ರೂ. ವೆಚ್ಚದ ಕಾಮಗಾರಿಗಳಿಗೆ ಚಾಲನೆ

ಪ್ರಜಾಪ್ರಭುತ್ವದಲ್ಲಿ ಜನರೇ ಮಾಲೀಕರು

ಜನರ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದು ಸರ್ಕಾರದ ಕರ್ತವ್ಯ: ಮುಖ್ಯಮಂತ್ರಿ ಸಿದ್ದರಾಮಯ್ಯ



ಕೆ.ಆರ್.ನಗರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು.

ಕೆ.ಆರ್.ನಗರ, ಮೇ 23– ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ಜನರೇ ಮಾಲೀಕರು. ಕ್ಷೇತ್ರಗಳ ಅಭಿವೃದ್ಧಿ, ಜನರ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದು ಸರ್ಕಾರದ ಹಾಗೂ ಶಾಸಕರ ಕರ್ತವ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕೆ.ಆರ್.ನಗರ ವಿಧಾನಸಭಾ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಕೆ.ಆರ್.ನಗರ ವಿಧಾನಸಭಾ ಕ್ಷೇತ್ರಕ್ಕೆ 404 ಕೋಟಿ ರೂ.ಗಳ ಶಂಕುಸ್ಥಾಪನೆ, 109 ಕೋಟಿ ರೂ. ವೆಚ್ಚದ ಕಾಮಗಾರಿಗಳ ಉದ್ಘಾಟನೆ ಸೇರಿ ಒಟ್ಟು 513 ಕೋಟಿ ರೂ. ವೆಚ್ಚದ ಕಾಮಗಾರಿಗಳಿಗೆ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿದ್ದು, ಇದಕ್ಕೆ ಸ್ಥಳೀಯ ಶಾಸಕ ರವಿಶಂಕರ್ ಕಾರಣ. ಸಣ್ಣ ನೀರಾವರಿ ಸಚಿವರು 197 ಕೋಟಿ ರೂ. ವೆಚ್ಚದ ಶಂಕುಸ್ಥಾಪನೆ ಮತ್ತು ಉದ್ಘಾಟನೆಯನ್ನು ತಮ್ಮ ಇಲಾಖೆಯೊಂದರಲ್ಲಿಯೇ ಮಾಡಿದ್ದಾರೆ. ಆರೋಗ್ಯ ಇಲಾಖೆಯಡಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಉದ್ಘಾಟನೆ ನೆರವೇರಿದೆ ಎಂದರು.

ಪಾಪರ್ ಸರ್ಕಾರವಾಗಿದ್ದರೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿತ್ತೇ?: ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿದ್ದರಿಂದ ಅಭಿವೃದ್ಧಿ ಕಾರ್ಯಗಳಿಗೆ ಈ ಸರ್ಕಾರದ ಬಳಿ ಹಣವಿಲ್ಲ ಎಂದು ಟೀಕಿಸುತ್ತಾರೆ. ಪಾಪರ್ ಸರ್ಕಾರವಾಗಿದ್ದರೆ 513 ಕೋಟಿ ರೂ.ಗಳ ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿತ್ತೇ? ಎಂದು ಪ್ರಶ್ನಿಸಿದರು.

ವಿಪಕ್ಷ ನಾಯಕ ಆರ್.ಅಶೋಕ್, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಛಲವಾದಿ ನಾರಾಯಣಸ್ವಾಮಿ ಇವರೆಲ್ಲರೂ ಬಹಳ ವರ್ಷಗಳಿಂದ ರಾಜಕೀಯದಲ್ಲಿದ್ದು, ಸುಳ್ಳು ಹೇಳುತ್ತಿದ್ದಾರೆ. ಪಂಚ ಗ್ಯಾರಂಟಿ ಯೋಜನೆಗಳನ್ನು ನಮ್ಮ ಸರ್ಕಾರ ಜಾರಿ ಮಾಡಿದೆ. ಜನರು ಈ ಯೋಜನೆಗಳ ಸದುಪಯೋಗ ಪಡಿಸಿಕೊಳ್ಳುತ್ತಿರುವಾಗ ಸುಳ್ಳು ಎಂದು ಹೇಗೆ ಹೇಳುತ್ತಾರೆ ಎಂದರು.

ರಾಜ್ಯದ 3.50 ಕೋಟಿ ಮಹಿಳೆಯರು ಯಾವುದೇ ಭೇದ ಭಾವವಿಲ್ಲದೇ ಶಕ್ತಿ ಯೋಜನೆ ಬಳಸಿಕೊಂಡಿದ್ದಾರೆ. ಬಿಜೆಪಿ ಸರ್ಕಾರ ಇಂತಹ ಯೋಜನೆಯನ್ನು ಜಾರಿ ಮಾಡಿತ್ತೇ? ಎಂದು ಪ್ರಶ್ನಿಸಿದ ಸಿಎಂ ಈವರೆಗೆ 500 ಕೋಟಿ ಮಹಿಳೆಯರು ಉಚಿತವಾಗಿ ಓಡಾಡಿದ್ದಾರೆ. ಪ್ರತಿ ದಿನ 50–60 ಲಕ್ಷ ಮಹಿಳೆಯರು ಇದರ ಪ್ರಯೋಜನ ಪಡೆಯುತ್ತಿದ್ದಾರೆ ಎಂದರು.

ಜಿಎಸ್‌ಟಿ ಸಂಗ್ರಹಣೆಯಲ್ಲಿ ಕರ್ನಾಟಕ 2ನೇ ಸ್ಥಾನದಲ್ಲಿದೆ: ಜಿಎಸ್‌ಟಿ ಸಂಗ್ರಹಣೆಯಲ್ಲಿ ಕರ್ನಾಟಕ 2ನೇ ಸ್ಥಾನದಲ್ಲಿದೆ. ಮುಂದಿನ ವರ್ಷ ನಾವು ಮೊದಲ ಸ್ಥಾನಕ್ಕೆ ಬರುವ ಪ್ರಯತ್ನ ಮಾಡುತ್ತೇವೆ ಎಂದ ಮುಖ್ಯಮಂತ್ರಿಗಳು, ಕಬಿನಿ ಸೇತುವೆಗೆ 25 ಕೋಟಿ ರೂ. ಅನುದಾನ ಒದಗಿಸಲಾಗಿದೆ. ಚುಂಚನಕಟ್ಟೆ ಶ್ರೀರಾಮ ಸಕ್ಕರೆ ಕಾರ್ಖಾನೆಯನ್ನು 40 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ. ಸಾಗರಕಟ್ಟೆ ಸೇತುವೆ, ರಸ್ತೆ ಅಗಲೀಕರಣ ಕಾಮಗಾರಿಗಳಿಗೆ ಅನುದಾನ ಒದಗಿಸಲಾಗಿದೆ. ಎಲ್ಲರೂ ಒಂದೇ ತಾಯಿ ಮಕ್ಕಳಂತೆ ಇರಬೇಕೆಂಬುದು ಸರ್ಕಾರದ ಆಶಯ ಎಂದರು.

ಜನಾಕ್ರೋಶ ಕಾರ್ಯಕ್ರಮ ಮೂಲಕ ಬಿಜೆಪಿ ಸುಳ್ಳು ಪ್ರಚಾರ: ಶಕ್ತಿ ಯೋಜನೆಯಿಂದ ಧರ್ಮಸ್ಥಳ ಕ್ಷೇತ್ರಕ್ಕೆ ಭಕ್ತರ ಸಂಖ್ಯೆ ಹೆಚ್ಚಾಗಿರುವುದನ್ನು ಪ್ರಶಂಸಿಸಿ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರು ಪತ್ರ ಬರೆದಿದ್ದರು. ಗ್ಯಾರಂಟಿ ಯೋಜನೆಗಳು ಜನರ ಮೆಚ್ಚುಗೆಗೆ ಪಾತ್ರವಾಗಿದೆ. ಇತ್ತೀಚೆಗೆ ಹೊಸಪೇಟೆಯಲ್ಲಿ ನಡೆದ ಸರ್ಕಾರದ 2 ವರ್ಷದ ಕಾರ್ಯಕ್ರಮ ಯಶಸ್ವಿಯಾಗಿ ನಡೆದು, 3 ರಿಂದ 4 ಲಕ್ಷ ಜನ ಆಗಮಿಸಿದ್ದರು. ಆದರೆ ಬಿಜೆಪಿಯವರು ಜನಾಕ್ರೋಶ ಕಾರ್ಯಕ್ರಮ ಮಾಡಿ, ಅಭಿವೃದ್ಧಿ ನಡೆಯುತ್ತಿಲ್ಲ. ಬೆಲೆ ಏರಿಕೆಯಾಗಿದೆ ಎಂಬ ಸುಳ್ಳು ಪ್ರಚಾರ ಮಾಡುತ್ತಿದ್ದಾರೆ ಎಂದು ಹೇಳಿದರು.

ಬಿಜೆಪಿ ಅವಧಿಯಲ್ಲಿ ಹಣದ ಲೂಟಿ ನಡೆದಿದೆ: ಹಿಂದೆ ನಮ್ಮ ಸರ್ಕಾರ ನೀಡಿದ್ದ 165 ಭರವಸೆಗಳಲ್ಲಿ 158 ಭರವಸೆಗಳನ್ನು ಈಡೇರಿಸಿದ್ದೇವೆ. ಪ್ರಸ್ತುತ ನಮ್ಮ ಸರ್ಕಾರ 593 ಕಾರ್ಯಕ್ರಮಗಳನ್ನು ಪ್ರಣಾಳಿಕೆಯಲ್ಲಿ ತಿಳಿಸಿದ್ದು, 242 ಭರವಸೆಗಳನ್ನು ಈಡೇರಿಸಿದ್ದೇವೆ. ನಮ್ಮ ಸರ್ಕಾರ ಇನ್ನುಳಿದ ವರ್ಷಗಳಲ್ಲಿ ಉಳಿದ ಎಲ್ಲಾ ಭರವಸೆಗಳನ್ನೂ ಈಡೇರಿಸಲಿದೆ. ಬಿಜೆಪಿಯವರು ತಮ್ಮ ಅಧಿಕಾರಾವಧಿಯಲ್ಲಿ ಹಣ ಲೂಟಿ ಹೊಡೆದರು. 2.70 ಲಕ್ಷ ಕೋಟಿ ರೂ. ಮೊತ್ತದ ಯೋಜನೆಗಳಿಗೆ ಹಣವಿಲ್ಲದೇ ಮಂಜೂರಾತಿ ನೀಡಿದರು. ಬಿಜೆಪಿಯ ಬಸವರಾಜ ಬೊಮ್ಮಾಯಿಯವರು ತಮ್ಮ ಅವಧಿಯಲ್ಲಿ 1.66 ಲಕ್ಷ ಕೋಟಿ ರೂ. ಯೋಜನೆಗಳಿಗೆ ಹಣವಿಲ್ಲದೇ ಮಂಜೂರು ಮಾಡಿದ ಫಲವಾಗಿ ನಮ್ಮ ಸರ್ಕಾರ ಬಾಕಿ ಮೊತ್ತ ಪಾವತಿಸುತ್ತಿದೆ ಎಂದರು.

ಕೆ.ಆರ್.ನಗರ ಶಾಸಕರು ಪ್ರಾಮಾಣಿಕರಾಗಿದ್ದು, ಕ್ಷೇತ್ರದ ಒಳಿತಿಗೆ ಶ್ರಮಿಸುತ್ತಿದ್ದಾರೆ. ಅವರನ್ನು ಮುಂದಿನ ಚುನಾವಣೆಯಲ್ಲಿ ಬೆಂಬಲಿಸಿ ಎಂದು ಜನರಲ್ಲಿ ಮುಖ್ಯಮಂತ್ರಿಗಳು ಮನವಿ ಮಾಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಸಚಿವರಾದ ಕೆ.ವೆಂಕಟೇಶ್, ಎನ್.ಚೆಲುವರಾಯಸ್ವಾಮಿ, ಭೈರತಿ ಸುರೇಶ್, ಬೋಸರಾಜು, ದಿನೇಶ್ ಗುಂಡೂರಾವ್, ಶಾಸಕರಾದ ಅನಿಲ್, ಹರೀಶ್‌ಗೌಡ, ಹೆಚ್.ಎಂ.ಗಣೇಶ್ ಪ್ರಸಾದ್, ವಿಧಾನ ಪರಿಷತ್ ಸದಸ್ಯರಾದ ಡಾ. ಯತೀಂದ್ರ, ಡಾ.ಡಿ.ತಿಮ್ಮಯ್ಯ, ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ, ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಸಂಘಗಳ ಮಹಾಮಂಡಳದ ಅಧ್ಯಕ್ಷ ಎಂ.ರಮೇಶ್, ಪುರಸಭೆ ಅಧ್ಯಕ್ಷ ಶಿವುನಾಯಕ್, ಉಪಾಧ್ಯಕ್ಷೆ ವಸಂತಮ್ಮ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಕೆ.ಎಸ್.ಮಹೇಶ್, ತಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಹೆಚ್.ಟಿ. ಮಂಜುನಾಥ್, ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಪಿ.ರಮೇಶ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಕಾರ್ಯದರ್ಶಿ ಜಿ.ಎಸ್. ವೆಂಕಟೇಶ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ರಾಘು, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ, ಎಸಿ ವಿಜಯಕುಮಾರ್, ತಹಸೀಲ್ದಾರರಾದ ಜಿ.ಸುರೇಂದ್ರಮೂರ್ತಿ, ಎಸ್.ನರಗುಂದ ಸೇರಿದಂತೆ ಚುನಾಯಿತ ಜನಪ್ರತಿನಿಧಿಗಳು ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ತಿ.ನರಸೀಪುರದಲ್ಲಿ ಲೋಕಾಯುಕ್ತ ದೂರು ಸ್ವೀಕಾರ ಕಾರ್ಯಕ್ರಮ

ಪೊಲೀಸ್ ಇನ್ಸ್‌ಪೆಕ್ಟರ್ ವಿರುದ್ಧ ದೂರಿನ ಸರಮಾಲೆ



ಕಾರ್ಯಕ್ರಮದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಎಸ್.ಮದನ್‌ರಾಜ್ ಮಾತನಾಡಿದರು

ತಿ.ನರಸೀಪುರ, ಮೇ 23– ಲೋಕಾಯುಕ್ತ ಅಧಿಕಾರಿಗಳ ದೂರು ಸ್ವೀಕಾರ ವೇಳೆ ಲೋಕಾಯುಕ್ತರ ಕಾರ್ಯವೈಖರಿ ಬಗ್ಗೆಯೇ ಮುಖಂಡರೊಬ್ಬರು ಅಸಮಾಧಾನ ಹೊರ ಹಾಕಿದರೆ, ಪಟ್ಟಣ ಪೊಲೀಸ್ ಇನ್ಸ್‌ಪೆಕ್ಟರ್ ದಬ್ಬಾಳಿಕೆ, ದೌರ್ಜನ್ಯ ಕುರಿತಂತೆ ಪುರಸಭೆ ಮಾಜಿ ಅಧ್ಯಕ್ಷರು ಗಂಭೀರ ಆರೋಪ ಮಾಡಿ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಗುರುಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೋಕಾಯುಕ್ತ ಪೊಲೀಸರು ಸಾರ್ವಜನಿಕರಿಂದ ದೂರು ಸ್ವೀಕರಿಸುವ ವೇಳೆ ಪಟ್ಟಣ ಠಾಣೆ ಪೊಲೀಸ್ ಇನ್ಸ್‌ಪೆಕ್ಟರ್ ಧನಂಜಯ್ ನಡೆ ಬಗ್ಗೆ ಕಿಡಿಕಾರಿದ ಪುರಸಭೆ ಮಾಜಿ ಅಧ್ಯಕ್ಷ ಎಸ್.ಮದನ್ ರಾಜ್ ಪೊಲೀಸ್ ಇನ್ಸ್‌ಪೆಕ್ಟರ್ ಅವರು ವಿನಾ ಕಾರಣ ಬೀದಿ ಬದಿ ವ್ಯಾಪಾರಿಗಳಿಗೆ ತೊಂದರೆ ನೀಡುತ್ತಿರುವುದರಿಂದ ಬಡ ವ್ಯಾಪಾರಿಗಳು ತೀವ್ರ ಸಂಕಷ್ಟ ಎದುರಿಸುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೀದಿ ಬದಿಯಲ್ಲಿ ವ್ಯಾಪಾರಿಗಳಿಗೆ ವ್ಯಾಪಾರ ಮಾಡಲು ಅವಕಾಶ ನೀಡದೆ ಇನ್ಸ್‌ಪೆಕ್ಟರ್ ವ್ಯಾಪಾರಿಗಳ ಮೇಲೆ ಗದಾ ಪ್ರಹಾರ ನಡೆಸಲು ಮುಂದಾಗಿದ್ದಾರೆ. ವ್ಯಾಪಾರಿಗಳ ಜೊತೆ ಸಂಯಮದಿಂದ ವರ್ತಿಸದ ಇವರು ಅವರನ್ನು ಅಶ್ಲೀಲ ಪದಗಳಿಂದ ನಿಂದಿಸುವ ಕಾಯಕದಲ್ಲಿ ನಿರತರಾಗಿದ್ದಾರೆ. ಪುರಸಭೆಯವರೊಂದಿಗೆ ಪೊಲೀಸರು ಬೀದಿ ಬದಿ ವ್ಯಾಪಾರಸ್ಥರನ್ನು ಎತ್ತಂಗಡಿ ಮಾಡಿಸುವ ಮೂಲಕ ಅವೈಜ್ಞಾನಿಕ ನಡೆ ಪ್ರದರ್ಶನ ಮಾಡುತ್ತಿದ್ದಾರೆ. ಬೀದಿ ಬದಿ ವ್ಯಾಪಾರಕ್ಕೆ ಅವಕಾಶ ಕೊಡದ ಪುರಸಭೆಯವರು ಅವರಿಂದ ಸುಂಕ ವಸೂಲಿ ಮಾಡಲು 12 ಲಕ್ಷ ರೂ.ಗೆ ಟೆಂಡರ್ ಕರೆದಿರುವುದು ಎಷ್ಟರ ಮಟ್ಟಿಗೆ ಸರಿ ಇದೆ ಎಂದು ಪ್ರಶ್ನಿಸಿದರು. ಬೀದಿ ಬದಿ ವ್ಯಾಪಾರ ಬೇಡವೆಂದರೆ ಕರೆದಿರುವ ಟೆಂಡರ್ ರದ್ದು ಮಾಡಲಿ ಎಂದು ಒತ್ತಾಯಿಸಿದರು.


ಬೀದಿ ಬದಿ ವ್ಯಾಪಾರ ಮುಂದುವರೆದ ಎಲ್ಲಾ ರಾಷ್ಟ್ರದಲ್ಲೂ ಇದೆ. ವಿಧಾನಸೌಧದ ಮುಂದೆಯೇ ಬೀದಿ ಬದಿ ವ್ಯಾಪಾರ ನಡೆಯುತ್ತದೆ. ಆದರೆ ತಾಲೂಕು ಮಟ್ಟದಲ್ಲಿ ಬಡ ಬೀದಿ ವ್ಯಾಪಾರಿಗಳಿಗೆ ತೊಂದರೆ ಕೊಡಲೊರಟಿರುವ ಪೊಲೀಸ್ ಇನ್ಸ್‌ಪೆಕ್ಟರ್ ನಡೆ ಖಂಡನೀಯ. ಇನ್ಸ್‌ಪೆಕ್ಟರ್ ಧನಂಜಯ್ ವ್ಯಾಪಾರಸ್ಥರೊಂದಿಗೆ ಅವಾಚ್ಯ ಪದ ಬಳಕೆ ಮಾಡುವ ಮೂಲಕ ಸೈಕೋ ರೀತಿ ವರ್ತಿಸುತ್ತಿದ್ದಾರೆ. ಬೀದಿ ಬದಿ ವ್ಯಾಪಾರಿಗಳು ಸಾಲ ಸೋಲ ಮಾಡಿ ಮಕ್ಕಳನ್ನು ಸಾಕಿ ವಿದಾಭ್ಯಾಸ ಕೊಡಿಸುತ್ತಿದ್ದಾರೆ. ಅಷ್ಟೇ ಏಕೆ ಪ್ರಧಾನ ಮಂತ್ರಿಯವರೇ ಬೀದಿ ಬದಿ ವ್ಯಾಪಾರಿಗಳಿಗೆ ಸಾಲ ಸೌಲಭ್ಯ ನೀಡುತ್ತಿಲ್ಲವೇ, ಪಟ್ಟಣದಲ್ಲಿ ಕಾನೂನು ವ್ಯವಸ್ಥೆ ಸಂಪೂರ್ಣ ಕುಸಿದಿದೆ. ಅದರ ಬಗ್ಗೆ ಗಮನ ಹರಿಸದ ಪೊಲೀಸರು ಬಡ ವ್ಯಾಪಾರಿಗಳ ಮೇಲೆ ದರ್ಪ ತೋರಿಸುತ್ತಿದ್ದಾರೆ. ಬಡ ವ್ಯಾಪಾರಿಗಳಿಗೆ ಬೀದಿ ಬದಿ ವ್ಯಾಪಾರ ಮಾಡಲು ಅವಕಾಶ ಕಲ್ಪಿಸಿಕೊಡಬೇಕು ಹಾಗೂ ಸಿಪಿಐ ಅವರು ತಮ್ಮ ನಿಲುವು ಬದಲಿಸಿಕೊಂಡು ವ್ಯಾಪಾರಸ್ಥರೊಂದಿಗೆ ಸೌಜನ್ಯದಿಂದ ವರ್ತಿಸಬೇಕು ಇಲ್ಲದಿದ್ದಲ್ಲಿ ಟಿ.ನರಸೀಪುರವನ್ನು 3 ದಿನಗಳ ಕಾಲ ನಿರಂತರ ಬಂದ್ ಮಾಡಿ ಪ್ರತಿಭಟನೆ ನಡೆಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಸೋಸಲೆ ಶಿವಕುಮಾರ್ ಮಾತನಾಡಿ, ಲೋಕಾಯುಕ್ತರು ಪ್ರತಿ ಬಾರಿ ಬಂದಾಗಲೂ ದೂರು ಸ್ವೀಕರಿಸಿ ಹೋಗುತ್ತಾರೆ. ಸಾರ್ವಜನಿಕರಿಂದ ಪಡೆದ ದೂರು ಏನಾಯ್ತು, ದೂರಿನ ಪ್ರಕಾರ ತಪ್ಪಿತಸ್ಥರಿಗೆ ಶಿಕ್ಷೆಯಾಯ್ತ ಎಷ್ಟು ಅಧಿಕಾರಿಗಳಿಗೆ ನೋಟೀಸ್ ಜಾರಿಯಾಗಿದೆ ಎಂಬ ಬಗ್ಗೆ ಮಾಹಿತಿ ಇಲ್ಲ ಎಲ್ಲಾ ನಿಗೂಢವಾಗಿದೆ. ಹಾಗಾಗಿ ನೀವು ಈ ಹಿಂದೆ ಪಡೆದ ದೂರಿನ ವಿವರ ನೀಡಿ ಉಳಿದ ದೂರು ಸ್ವೀಕರಿಸಿ ಎಂದರು. ಆದರೆ ಲೋಕಾಯುಕ್ತ ಅಧಿಕಾರಿಗಳಿಂದ ಪ್ರಶ್ನೆಗೆ ಸಮರ್ಪಕ ಉತ್ತರ ದೊರಕಲಿಲ್ಲ. ಬದಲಿಗೆ ಶಿವಕುಮಾರ್ ಅವರನ್ನು ಕುಳಿತುಕೊಳ್ಳುವಂತೆ ಸೂಚಿಸಿದ್ದು ಮಾತ್ರ ಲೋಕಾಯುಕ್ತರ ಕಾರ್ಯವೈಖರಿ ಬಗ್ಗೆ ಅನುಮಾನ ಮಾಡಿತು. ಇದೇ ವೇಳೆ 25 ದೂರು ಸಲ್ಲಿಕೆಯಾದವು.

ಲೋಕಾಯುಕ್ತ ಡಿವೈಎಸ್‌ಪಿ ವೆಂಕಟೇಶ್ ಮಾತನಾಡಿ, ತಾಲೂಕಿನ ಎಲ್ಲಾ ಗ್ರಾಪಂಗಳಲ್ಲಿ ಸೇವಾ ಕಾಲಾವಧಿ ಕಾಣುವಂತೆ ಪ್ರದರ್ಶಿಸಬೇಕು. ಕಚೇರಿ ನೌಕರರು ಸರಿಯಾದ ವೇಳೆಗೆ ಕಚೇರಿಗೆ ಹಾಜರಾಗಬೇಕು. ಪ್ರತಿಯೊಬ್ಬ ನೌಕರರು ಕಚೇರಿ ಪ್ರವೇಶ ಮಾಡುವ ವೇಳೆ ತಮ್ಮಬಳಿ ಇರುವ ಹಣದ ಬಗ್ಗೆ ಮಾಹಿತಿ ನೀಡಬೇಕು ಹಾಗೂ ಈ ಸಂಬಂಧ ತಾಪಂ ಇಓಗಳೂ ವಾರಕ್ಕೊಮ್ಮೆ ಗ್ರಾಪಂಗಳಿಗೆ ಭೇಟಿ ನೀಡಿ ಕಾನೂನು ಪಾಲನೆಯಾಗುತ್ತಿರುವ ಬಗ್ಗೆ ಖಚಿತ ಪಡಿಸಿಕೊಳ್ಳಬೇಕು. ಇಲ್ಲದಿದ್ದಲ್ಲಿ ಅಧಿಕಾರಿ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ರೈತ ಮುಖಂಡ ಮಹದೇವಸ್ವಾಮಿ, ರಾಜೂಗೌಡ, ಲೋಕಾಯುಕ್ತ ಎಸ್‌ಐ ಉಮೇಶ್, ತಹಸೀಲ್ದಾರ್ ಟಿ.ಜೆ.ಸುರೇಶ್ ಆಚಾರ್, ಬಿಇಓ ಶಿವಮೂರ್ತಿ, ಪುರಸಭೆ ಮುಖ್ಯಾಧಿಕಾರಿ ಬಿ.ಕೆ.ವಸಂತಕುಮಾರಿ, ಚೆಸ್ಕಾಂ ವೀರೇಶ್, ಸಾರ್ವಜನಿಕ ಆಸ್ಪತ್ರೆ ಆಡಳಿತಾಧಿಕಾರಿ ಡಾ.ರವಿಕುಮಾರ್, ಎಇಇ ಚರಿತ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.05.2025 ಶನಿವಾರ, ಮಳೆ ನಕ್ಷತ್ರ: ಕೃತ್ತಿಕ 11.05.2025 ರಿಂದ 24.05.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ರೇವತಿ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಶಾಲಾಕ್ಯ ತಂತ್ರ ಸ್ನಾತಕೋತ್ತರ ವಿಭಾಗದಿಂದ ಕಣ್ಣಿನ ದೃಷ್ಟಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಮೂತ್ರ ಪಿಂಡ (ಕಿಡ್ನಿ) ಕಾಯಿಲೆಗೆ ಚಿಕಿತ್ಸಾ ಶಿಬಿರ, ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಸಂಧಿವಾತ ವ್ಯಾದಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಬಳಿ, ಕೆಬಿಎಲ್ ಲೇಔಟ್, ಬೆಳಗ್ಗೆ 10ಕ್ಕೆ

■ **ಶ್ರೀ ಶ್ರೀನಿವಾಸಸ್ವಾಮಿ ಕೈಂಕರ್ಯ ಸಭಾ :** ಶ್ರೀ ಶ್ರೀನಿವಾಸಸ್ವಾಮಿಯವರ ವಾರ್ಷಿಕ ಮಹೋತ್ಸವ, ಸಂಜೆ 7ಕ್ಕೆ ಶೇರ್ತಿ ಸೇವೆ, ತಿರುಪ್ಪಾವಾಡೆ ಸೇವೆ, ಸ್ಥಳ: ಶ್ರೀ ಶ್ರೀನಿವಾಸಸ್ವಾಮಿ ಕೈಂಕರ್ಯ ಸಭಾ, ತಿಲಕ್‌ನಗರ.

■ **ಶ್ರೀ ಜಯದೇವ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯೋವಾಸ್ಕುಲರ್ ಸೈನ್ಸಸ್ ಮತ್ತು ಸಂಶೋಧನಾ ಸಂಸ್ಥೆ :** ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ, ಅಧ್ಯಕ್ಷತೆ : ಜಯದೇವ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ, ಮುಖ್ಯ ಅತಿಥಿಗಳು : ಮೈಸೂರು ಮೆಡಿಕಲ್ ಕಾಲೇಜಿನ ಸರ್ಕಾರಿ ನರ್ಸಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಡಾ.ಪಿ.ನಂದಪ್ರಕಾಶ್ ಮತ್ತು ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್‌ನ ಪ್ರಿನ್ಸಿಪಾಲ್ ಡಿ.ಎನ್. ರೇಣುಕಾದೇವಿ, ಸ್ಥಳ: ಜಯದೇವ ಆಸ್ಪತ್ರೆ ಆವರಣ, ಮಧ್ಯಾಹ್ನ 2ಕ್ಕೆ.

■ **ಬಸವ ಬಳಗಗಳ ಒಕ್ಕೂಟ, ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ, ವೀರಶೈವ–ಲಿಂಗಾಯತ ಸಂಘ ಸಂಸ್ಥೆಗಳು :** ನಮ್ಮ ಬಸವ ಜಯಂತಿ–2025, ನಮ್ಮ ನಡೆ ಅನುಭವ ಮಂಟಪದ ಕಡೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಬೆಳಗ್ಗೆ 8ಕ್ಕೆ ಷಟ್‌ಸ್ಥಲ ಧ್ವಜಾರೋಹಣ : ಶ್ರೀ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಬೆಳಗ್ಗೆ 8.30ಕ್ಕೆ ಶ್ರೀ ಬಸವೇಶ್ವರ ಪುತ್ಥಳಿ ಮೆರವಣಿಗೆ, ಸಮ್ಮುಖ : ಡಾ. ಶ್ರೀ ಶರತ್‌ಚಂದ್ರ ಸ್ವಾಮೀಜಿ, ಶ್ರೀ ಗುರುಶಾಂತ ಸ್ವಾಮೀಜಿ, ಶಾಸಕ ಎಚ್.ಎಂ. ಗಣೇಶ್‌ಪ್ರಸಾದ್, ಮುಖ್ಯ ಅತಿಥಿಗಳು : ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್. ಶ್ರೀವತ್ಸ, ಜಿಲ್ಲಾಧಿಕಾರಿ ಡಾ. ಲಕ್ಷ್ಮೀಕಾಂತರೆಡ್ಡಿ, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್, ಮುಡಾ ಕಾರ್ಯದರ್ಶಿ ಪ್ರಸನ್ನಕುಮಾರ್, ಕರಾಮುವಿವಿ ಕುಲಪತಿ ಡಾ. ಶರಣಪ್ಪ ವಿ. ಹಲಸೆ, ಅಪರ ಜಿಲ್ಲಾಧಿಕಾರಿ ಪಿ. ಶಿವರಾಜ್, ಬೆಳಗ್ಗೆ 11ಕ್ಕೆ ಸಭಾ ಕಾರ್ಯಕ್ರಮ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮುಖ : ಡಾ. ಪಂಚಮ ಶ್ರೀ ಶಿವಲಿಂಗೇಶ್ವರ ಸ್ವಾಮೀಜಿ, ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧ್ಯಕ್ಷತೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಶ್ರೀ ಬಸವೇಶ್ವರ ಪುತ್ಥಳಿಗೆ ಪುಷ್ಪಾರ್ಚನೆ : ಪಶು ಸಂಗೋಪನೆ ಸಚಿವ ಕೆ. ವೆಂಕಟೇಶ್, ಮುಖ್ಯ ಅತಿಥಿಗಳು : ಶಾಸಕರಾದ ತನ್ವೀರ್ ಸೇಠ್, ವಿನಯ್ ಕುಲಕರ್ಣಿ, ಜಿ.ಟಿ. ದೇವೇಗೌಡ, ಎ.ಹೆಚ್. ವಿಶ್ವನಾಥ್, ಡಾ. ಯತೀಂದ್ರ ಸಿದ್ದರಾಮಯ್ಯ, ಹೆಚ್.ಎಂ. ಗಣೇಶ್‌ಪ್ರಸಾದ್, ಟಿ.ಎಸ್. ಶ್ರೀವತ್ಸ, ಸಿ.ಎನ್. ಮಂಜೇಗೌಡ, ಡಾ. ತಿಮ್ಮಯ್ಯ, ಕೆ. ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಜಿ.ಡಿ. ಹರೀಶ್‌ಗೌಡ, ಅನಿಲ್ ಚಿಕ್ಕಮಾದು, ಡಿ. ರವಿಶಂಕರ್, ಬಿ.ಕೆ. ನಾಗರಾಜು ಬ್ಯಾತಹಳ್ಳಿ, ಸ್ಥಳ:ಕಲಾಮಂದಿರ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಉಚಿತ ಮೂಳೆ ಖನಿಜ ಸಾಂದ್ರತಾ ಪರೀಕ್ಷಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.

■ **ಶ್ರೀ ನಟರಾಜ ಪ್ರತಿಷ್ಠಾನ :** ಶ್ರೀ ನಟರಾಜ ಪಬ್ಲಿಕ್ ಶಾಲೆಯ ಶಿಕ್ಷಕರಿಗೆ ಪುನಶ್ಚೇತನ ಕಾರ್ಯಾಗಾರ, ಉದ್ಘಾಟನೆ : ಪ್ರಾದೇಶಿಕ ಶಿಕ್ಷಣ ಸಂಸ್ಥೆ ಪ್ರಿನ್ಸಿಪಾಲ್ ಪ್ರೊ. ಪ್ರದ್ಯುಮ್ನಕುಮಾರ್ ಸೇಠಿ, ದಿಕ್ಸೂಚಿ ಭಾಷಣ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಪ್ರತಿಷ್ಠಾನ, ಬೆಳಗ್ಗೆ 11ಕ್ಕೆ.

■ **ನೇವಲ್ ವೆಟರನ್ಸ್ ಅಸೋಸಿಯೇಷನ್ :**ತಿರಂಗ ಯಾತ್ರಾ, ಸ್ಥಳ: ಕುವೆಂಪು ಪ್ರತಿಮೆ, ಕುವೆಂಪುನಗರ, ಬೆಳಗ್ಗೆ 11ಕ್ಕೆ

■ **ಮೈಸೂರು ವಿವಿ ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ :** ರಜತ ಮಹೋತ್ಸವ, ನೂತನ ಜ್ಞಾನದರ್ಶನ ಕಟ್ಟಡದ ಗ್ರಂಥಾಲಯ ಉದ್ಘಾಟನೆ, ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಸ್ಥಿತರು : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ, ಸ್ಥಳ: ಕೇಂದ್ರದ ಆವರಣ, ಮಾನಸಗಂಗೋತ್ರಿ, ಮಧ್ಯಾಹ್ನ 3ಕ್ಕೆ.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಕಥೆ ಹೇಳುವವರು : ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಸಹಾಯಕ ಪ್ರಧಾನ ವ್ಯವಸ್ಥಾಪಕ ಬಿ. ವೇದಾ, ಸ್ಥಳ: ಸುರುಚಿ ರಂಗಮನೆ, ಕಲಾಸುರುಚಿ, ಚಿತ್ರಭಾನು ರಸ್ತೆ, ಸಂಜೆ 4.30ರಿಂದ.

■ **ನರೆಡ್ಕೋ :** ನರೆಡ್ಕೋ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ನರೆಡ್ಕೋ ರಾಷ್ಟ್ರೀಯ ಅಧ್ಯಕ್ಷ ಹರಿಬಾಬು, ಉಪಾಧ್ಯಕ್ಷ ಮುಪ್ಪಾ ವೆಂಕಟೇಶ್ ಚೌದರಿ, ಸೆಸ್ಕಾಂ ವ್ಯಾನೇಜಿಂಗ್ ಡೈರೆಕ್ಟರ್ ಕೆ.ಎಂ. ಮುನಿಗೋಪಾಲ್, ನರೆಡ್ಕೋ, ಕರ್ನಾಟಕ ವೈಸ್ ಛೇರ್‌ಮೆನ್ ಮನೋಜ್ ಲೋದ, ಮಾಜಿ ಶಾಸಕ ಡಿ. ಮಾದೇಗೌಡ, ಸ್ಥಳ: ಗೋಲ್ಡನ್ ಲ್ಯಾಂಡ್ ಮಾರ್ಕ್ ಹೋಟೆಲ್, ಕೆ.ಆರ್.ಎಸ್. ರಸ್ತೆ, ಸಂಜೆ 6.30ಕ್ಕೆ.

■ **ಚಾರು ಸಾಂಸ್ಕೃತಿಕ ಪ್ರತಿಷ್ಠಾನ :** ಚಾರು ಮಂಜೂಷಾ–6 ಕಾರ್ಯಕ್ರಮ, 'ಒಂದು ಕಿರುಪರಿಚಯ' ನಾಟಕ ಪ್ರದರ್ಶನ, ನಾಟಕ ರಚನೆ : ಡಾ. ದು. ಸರಸ್ವತಿ, ನಿರ್ದೇಶನ : ದೀಪಕ್ ಶ್ರೀನಿವಾಸನ್, ಸ್ಥಳ: ಶ್ರೀರಂಗ, ರಂಗಾಯಣದ ಆವರಣ, ಸಂಜೆ 6.30ಕ್ಕೆ.

■ **ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್ :** ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಬೆಳಗಾಂ ಸಾರಿಗೆ ಇಲಾಖೆ ಜಂಟಿ ಆಯುಕ್ತರಾದ ಶ್ರೀಮತಿ ಎಂ.ಪಿ. ಓಂಕಾರೇಶ್ವರಿ, ಡಾ.ವಿಶಾಲ್‌ಕುಮಾರ್ ಗುಪ್ತ, ಅಧ್ಯಕ್ಷತೆ : ಜೆಎಸ್‌ಎಸ್ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಪ್ರೊ. ಎಸ್. ಶ್ರೀಕಂಠಸ್ವಾಮಿ ಅವರಿಂದ ಕ್ಲೀನ್ ಎನರ್ಜಿ ಕುರಿತು ತಾಂತ್ರಿಕ ಉಪನ್ಯಾಸ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ

ದೊಡ್ಡಮಾರಗೌಡನಹಳ್ಳಿಯಲ್ಲಿಂದು, ಮೈಸೂರು ತಾ.

■ **ಶ್ರೀ ಅರುಣೋದಯ ಸೇವಾ ಟ್ರಸ್ಟ್, ಶ್ರೀ ಶನೇಶ್ವರಸ್ವಾಮಿ ದೇವಸ್ಥಾನ :** ಶ್ರೀ ಶನೇಶ್ವರಸ್ವಾಮಿ ದೇವಸ್ಥಾನದ ಉದ್ಘಾಟನೆ, ವಿಗ್ರಹ ಹಾಗೂ ರಾಜಗೋಪುರದ ಕಳಸ ಪ್ರತಿಷ್ಠಾಪನಾ ಮಹೋತ್ಸವ, ಬೆಳಗ್ಗೆ 7.45 ರಿಂದ ಸ್ವಾಮಿಗೆ ಪೂಜಾ ಕೈಂಕರ್ಯ ಪ್ರಾರಂಭ, ದರ್ಶನ, ಅರ್ಪಣೆ, ಮಧ್ಯಾಹ್ನ 12ಕ್ಕೆ ತೀರ್ಥ ಪ್ರಸಾದ ವಿತರಣೆ, ಅನ್ನಸಂತರ್ಪಣೆ, ಉಪಸ್ಥಿತರು : ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಶಾಸಕರಾದ ಅನಿಲ್ ಚಿಕ್ಕಮಾದು, ಜಿ.ಟಿ.ದೇವೇಗೌಡ, ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ಉದ್ಘಾಟನೆ : ಸಹಕಾರ ಸಚಿವ ರಾಜಣ್ಣ, ಸ್ಥಳ: ಶ್ರೀಕ್ಷೇತ್ರ, ಶನೇಶ್ವರಸ್ವಾಮಿ ದೇವಸ್ಥಾನ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ನಖ ಶಿಖಾಂತ ಅಂದ ಆರೋಗ್ಯಗಳ ಆಪ್ತ ಮಾಹಿತಿ, ಪ್ರಸ್ತುತಿ: ಡಾ. ಕೇಶವಕೊರಸೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸಿ.ವಿಶ್ವನಾಥ್, ಬಿ. ಶ್ರೀರಾಂಭಟ್, ವ್ಯಾಖ್ಯಾನ–ಡಾ. ಮ. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಮನೆಮನೆಯ ಹಣತೆ–ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು–ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ. ಡಾ. ಬಿ.ಆರ್. ಅಂಬೇಡ್ಕರ್ ಅವರ ಮೇಲೆ ಪ್ರಭಾವ ಬೀರಿದ ವ್ಯಕ್ತಿಗಳು ಪ್ರೊ. ರಹಮತ್ ತರೀಕೆರೆ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಡಾ. ತ್ರಿವೇಣಿ, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಗೀತೆಗಳು, 3.30 ಮಕ್ಕಳ ಮಂಟಪ–ಹೊಳೆಮತ್ತಿ ನೇಚರ್ ಫೌಂಡೇಶನ್ ಶಿಬಿರದ ಮಕ್ಕಳೊಂದಿಗೆ ಮಾತುಕತೆ, ಪ್ರಸ್ತುತಿ: ಎಂ.ಎಸ್. ಭಾರತಿ, 4.00 ನಾಟಕ–ಒಂದು ಬಹುಮಾನದ ಕಥೆ, ರಚನೆ–ಆರ್. ಪವನಕುಮಾರ್, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್ 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ : ಕಿಸಾನ್‌ವಾಣಿ –ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಜೈವಿಕ ಶಿಲೀಂಧ್ರ ನಾಶಕ ಮತ್ತು ಜಂತುನಾಶಕ ಬಳಕೆ ಕುರಿತು ಸಂವಾದ, ಭಾಗವಹಿಸುತ್ತಾರೆ ಮಂಡ್ಯದ ವಿ.ಸಿ. ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕರಾದ ಡಾ.ವಿ.ಬಿ.ಸನತ್ ಕುಮಾರ್ ಮತ್ತು ಮೈಸೂರು ತಾಲೂಕು ನಾಗನಹಳ್ಳಿಯ ವಿಸ್ತರಣಾ ಶಿಕ್ಷಣ ಘಟಕದ ಸಹಾಯಕ ಪ್ರಾಧ್ಯಾಪಕರಾದ ಡಾ.ಆರ್.ಎನ್. ಪುಷ್ಪ. ಪ್ರಸ್ತುತಿ: ಎನ್.ಕೇಶವಮೂರ್ತಿ, 8.00 ಸವಿನೆನಪು, 8.30ಹಿಂದಿ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಅನಹಿತ ರವಿದರನ್ ಮತ್ತು ಅಪೂರ್ವ ರವಿದರನ್ – ಹಾಡುಗಾರಿಕೆ

ಐಪಿಎಲ್ ಹಂಗಾಮ

ಆರ್‌ಸಿಬಿ ವಿರುದ್ಧ ಹೈದರಾಬಾದ್‌ಗೆ ಭರ್ಜರಿ ಜಯ

ಲಕ್ನೋ, ಮೇ 23– ಸಂಘಟಿತ ಬೌಲಿಂಗ್, ಬ್ಯಾಟಿಂಗ್ ಪ್ರದರ್ಶನದ ನೆರವಿನಿಂದ ಸನ್ ರೈಸರ್ಸ್ ಹೈದರಾಬಾದ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ 42 ರನ್‌ಗಳ ಭರ್ಜರಿ ಗೆಲುವು ಸಾಧಿಸಿದೆ.

ಈ ಸೋಲಿನೊಂದಿಗೆ ಅಂಕಪಟ್ಟಿಯಲ್ಲಿ 2ನೇ ಸ್ಥಾನದಲ್ಲಿದ್ದ ಆರ್‌ಸಿಬಿ 3ನೇ ಸ್ಥಾನಕ್ಕೆ ಕುಸಿದಿದೆ. 12 ಪಂದ್ಯಗಳಲ್ಲಿ 8 ಗೆಲುವಿನೊಂದಿಗೆ 17 ಅಂಕ ಗಳಿಸಿರುವ ಪಂಜಾಬ್ ಕಿಂಗ್ಸ್ 2ನೇ ಸ್ಥಾನಕ್ಕೆ ಜಿಗಿದಿದೆ.

ಗೆಲುವಿಗೆ 232 ರನ್‌ಗಳ ಬೃಹತ್ ಗುರಿ ಪಡೆದಿದ್ದ ಆರ್‌ಸಿಬಿ ಆರಂಭದಿಂದಲೇ ಕೌಂಟರ್ ಅಟ್ಯಾಕ್ ಮಾಡಲು ಶುರು ಮಾಡಿತ್ತು. ವಿರಾಟ್ ಕೊಹ್ಲಿ–ಫಿಲ್ ಸಾಲ್ಟ್ ಅವರ ಆರಂಭಿಕ ಜೊತೆಯಾಟದಿಂದ 43 ಎಸೆತಗಳಲ್ಲಿ 80 ರನ್ ತಂಡಕ್ಕೆ ಸೇರ್ಪಡೆಯಾಯಿತು. ಈ ಬೆನ್ನಲ್ಲೇ ಮಯಾಂಕ್ ಅಗರ್ವಾಲ್ ಫಿಲ್ ಸಾಲ್ಟ್ ಜೋಡಿ 2ನೇ ವಿಕೆಟಿಗೆ 22 ಎಸೆತಗಳಲ್ಲಿ 40 ರನ್ ಕಲೆ ಹಾಕಿತ್ತು. 4ನೇ ವಿಕೆಟ್‌ಗೆ ಜಿತೇಶ್ ಶರ್ಮಾ, ರಜತ್ ಪಾಟಿದಾರ್ ಜೋಡಿ 26 ಎಸೆತಗಳಲ್ಲಿ 44 ರನ್ ಕಲೆ ಹಾಕಿತ್ತು. ಒಂದೆಡೆ ವಿಕೆಟ್ ಕಳೆದುಕೊಳ್ಳುತ್ತಿದ್ದ ಹೊರತಾಗಿಯೂ ಸ್ಫೋಟಕ ಪ್ರದರ್ಶನ ನೀಡುತ್ತಿದ್ದ ಆರ್‌ಸಿಬಿ 14 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 163 ರನ್ ಗಳಿಸಿತ್ತು. ಇದರಿಂದ ಗೆಲುವು ಸುಲಭ ಎಂದೇ ಭಾವಿಸಲಾಗಿತ್ತು. ಆದರೆ 15–16ನೇ ಓವರ್ ದುಬಾರಿಯಾಯಿತು. 15ನೇ ಓವರ್ ಬೌಲಿಂಗ್‌ನಲ್ಲಿ ಬಿಗಿ ಹಿಡಿತ ಸಾಧಿಸಿದ



ನಿತೀಶ್ ಕುಮಾರ್ ರೆಡ್ಡಿ ಕೇವಲ 4 ರನ್ ಬಿಟ್ಟುಕೊಟ್ಟರು. 16ನೇ ಓವರ್‌ನಲ್ಲಿ ಎಶಾನ್ ಮಾಲಿಂಗ 7 ರನ್ ಬಿಟ್ಟುಕೊಟ್ಟು 2 ಪ್ರಮುಖ ವಿಕೆಟ್ ಕಿತ್ತರು. ಮುಂದಿನ 17, 18ನೇ ಓವರ್‌ನಲ್ಲೂ ಆರ್‌ಸಿಬಿ ತಲಾ ಒಂದೊಂದು ಪ್ರಮುಖ ವಿಕೆಟ್ ಕಳೆದುಕೊಂಡಿತು. ಹೀಗಾಗಿ ಗೆಲುವಿನ ಓಟದಲ್ಲಿ ಮುನ್ನುಗ್ಗುತ್ತಿದ್ದ ಆರ್‌ಸಿಬಿ ಅಂತಿಮವಾಗಿ 19.5 ಓವರ್‌ಗಳಲ್ಲಿ 189 ರನ್‌ಗಳಿಗೆ ಆಲೌಟ್ ಆಗುವ ಮೂಲಕ ಸೋಲಿನ ರುಚಿ ಕಂಡಿತು.

ಆರ್‌ಸಿಬಿ ಪರ ಫಿಲ್ ಸಾಲ್ಟ್ 62 ರನ್ (32 ಎಸೆತ, 5 ಸಿಕ್ಸರ್, 4 ಬೌಂಡರಿ), ವಿರಾಟ್ ಕೊಹ್ಲಿ 43 ರನ್ (25 ಎಸೆತ, 1 ಸಿಕ್ಸರ್, 7 ಬೌಂಡರಿ), ರಜತ್ ಪಾಟಿದಾರ್ 18 ರನ್, ಜಿತೇಶ್ ಶರ್ಮಾ 24 ರನ್, ಮಯಾಂಕ್ ಅಗರ್ವಾಲ್ 11 ರನ್, ಟಿಮ್ ಡೇವಿಡ್ 1 ರನ್, ಭುವನೇಶ್ವರ್ ಕುಮಾರ್, ಯಶ್ ದಯಾಳ್ ತಲಾ 3 ರನ್, ಕೃನಾಲ್ ಪಾಂಡ್ಯ 8 ರನ್ ಗಳಿಸಿ ಔಟಾದರು.

ಇದಕ್ಕೂ ಮುನ್ನ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಹೈದರಾಬಾದ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 231 ರನ್ ಗಳಿಸಿತ್ತು. ಮೊದಲ ಓವರ್‌ನಿಂದಲೇ ಸ್ಫೋಟಕ ಪ್ರದರ್ಶನ ನೀಡಲು ಮುಂದಾದ ಸನ್‌ರೈಸರ್ಸ್ ಹೈದರಾಬಾದ್ ಮೊದಲ ವಿಕೆಟ್‌ಗೆ 25 ಎಸೆತಗಳಲ್ಲಿ 54 ರನ್ ಜೊತೆಯಾಟ ನೀಡಿತ್ತು. ಅತ್ತ ಅಭಿಷೇಕ್ ಶರ್ಮಾ 17 ಎಸೆತಗಳಲ್ಲಿ 34 ರನ್ ಗಳಿಸಿ ಔಟಾಗುತ್ತಿದ್ದಂತೆ ಇತ್ತ ಟ್ರಾವಿಸ್ ಹೆಡ್ ಕೂಡ 10 ಎಸೆತಗಳಲ್ಲಿ 17 ರನ್ ಬಾರಿಸಿ ಪೆವಿಲಿಯನ್‌ಗೆ ಮರಳಿದರು.

3ನೇ ವಿಕೆಟ್‌ಗೆ ಇಶಾನ್ ಕಿಶನ್ ಮತ್ತು ಕ್ಲಾಸೆನ್ ಜೋಡಿ 27 ಎಸೆತಗಳಲ್ಲಿ 48 ರನ್, 4ನೇ ವಿಕೆಟಿಗೆ ಕಿಶನ್–ಅನಿಕೇತ್ ವರ್ಮಾ ಜೋಡಿ 17 ಎಸೆತಗಳಲ್ಲಿ ಸ್ಫೋಟಕ 43 ರನ್ ಚಚ್ಚಿ ತಂಡದ ಮೊತ್ತ ಹೆಚ್ಚಿಸಿತು. ಇನ್ನೂ ಕೊನೆಯಲ್ಲಿ ನ್ಯಾಯಕ ಪ್ಯಾಟ್ ಕಮ್ಮಿನ್ಸ್ ಹಾಗೂ ಇಶಾನ್ ಕಿಶನ್ ಜೋಡಿ ಕೇವಲ 18 ಎಸೆತಗಳಲ್ಲಿ 43 ರನ್ ಚಚ್ಚಿ ತಂಡದ ಮೊತ್ತವನ್ನು 200 ರನ್‌ಗಳ ಗಡಿ ದಾಟಿಸುವಲ್ಲಿ ಯಶಸ್ವಿಯಾಯಿತು. ಹೈದರಾಬಾದ್ ಪರ ಇಶಾನ್ ಕಿಶನ್ ಅಜೇಯ 94 ರನ್ (48 ಎಸೆತ, 5 ಸಿಕ್ಸ್, 7 ಬೌಂಡರಿ), ಅಭಿಷೇಕ್ ಶರ್ಮಾ 34 ರನ್, ಟ್ರಾವಿಸ್ ಹೆಡ್ 17 ರನ್, ಹೆನ್ರಿಕ್ ಕ್ಲಾಸೆನ್ 24 ರನ್, ಅನಿಕೇತ್ ವರ್ಮಾ 26 ರನ್, ಅಭಿನವ್ ಮನೋಹರ್ 12 ರನ್, ಪ್ಯಾಟ್ ಕಮ್ಮಿನ್ಸ್ ಅಜೇಯ 13 ರನ್ ಗಳಿಸಿದರು. ಇನ್ನೂ ಆರ್‌ಸಿಬಿ ಪರ ರೊಮಾರಿಯೊ ಶೆಫರ್ಡ್ 2, ಭುವನೇಶ್ವರ್ ಕುಮಾರ್, ಲುಂಗಿ ಎನ್‌ಗಿಡಿ, ಸುಯಶ್ ಶರ್ಮಾ, ಕೃನಾಲ್ ಪಾಂಡ್ಯ ತಲಾ ಒಂದೊಂದು ವಿಕೆಟ್ ಪಡೆದು ಮಿಂಚಿದರು. ಇಶಾನ್ ಕಿಶನ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಗುಜರಾತ್	13	9	4	0	18
ಪಂಜಾಬ್	12	8	3	1	17
ಬೆಂಗಳೂರು	13	8	4	1	17
ಮುಂಬೈ	13	8	5	0	16
ಡೆಲ್ಲಿ	13	6	6	1	13
ಲಕ್ನೋ	13	6	7	0	12
ಕೊಲ್ಕತ್ತಾ	13	5	6	2	12
ಹೈದರಾಬಾದ್	13	5	7	1	11
ರಾಜಸ್ಥಾನ್	14	4	10	0	8
ಚೆನ್ನೈ	13	3	10	0	6

ಇಂದಿನ ಪಂದ್ಯ

ಪಂಜಾಬ್ ಕಿಂಗ್ಸ್
V/S
ಡೆಲ್ಲಿ ಕ್ಯಾಪಿಟಲ್ಸ್

ಸಮಯ: ಸಂಜೆ 7.30

ಸ್ಥಳ : ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣ, ಜೈಪುರ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾಮನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಏಸ್ (ತ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧಡ್ಕನ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಿರಿಕ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಟಕೀಲಾ (ಕ)	4 ಪ್ರದರ್ಶನಗಳು
ರಾಜಕಮಲ್	
ಡೆವಿಲ್ಸ್ ಡಬಲ್ ನೆಕ್ಸ್ಟ್ ಲೆವಲ್ (ತ)	4 ಪ್ರದರ್ಶನಗಳು
ಸಂಗಂ	
ಸೈನೈಡ್ (ಕ)	4 ಪ್ರದರ್ಶನಗಳು
ಲಿಡೋ	
ಯುದ್ಧಕಾಂಡ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಕಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ವೀರ ಯೋಧರ ಸ್ಮಾರಕ ವಿರೂಪಗೊಳಿಸಿದ ದುಷ್ಕರ್ಮಿಗಳು



ಬೆಂಗಳೂರು, ಮೇ23(ಬಿಎಲ್‌ಯು)– ಸಿಲಿಕಾನ್ ಸಿಟಿ ಬೆಂಗಳೂರಿನ ಜೆ.ಸಿ.ನಗರದಲ್ಲಿ ಹುತಾತ್ಮರ ಹೆಸರುಗಳನ್ನು ಉಲ್ಲೇಖಿಸಿರುವ ಸ್ಮಾರಕವನ್ನು ದುಷ್ಕರ್ಮಿಗಳು ವಿರೂಪಗೊಳಿಸಿದ್ದಾರೆ. ವಿರೂಪಗೊಳಿಸಿರುವ ಸ್ಮಾರಕದ ಫೋಟೋವನ್ನು ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಸಂಸದ ಯದುವೀರ್ ಅವರು ದುಷ್ಕರ್ಮಿಗಳ ನಡೆ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾರೆ.

ಈ ಸ್ಮಾರಕವನ್ನು ಕಳೆದ 100 ವರ್ಷದ ಹಿಂದೆ ಮೈಸೂರು ಮಹಾರಾಜರು ಸ್ಥಾಪಿಸಿದ್ದರು. ಭಾರತೀಯ ಸೇನೆಯ ಶೌರ್ಯವನ್ನು ಶ್ಲಾಘಿಸುತ್ತಿರುವ ಈ ಸಮಯದಲ್ಲಿ ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ಹುತಾತ್ಮರನ್ನು ಗೌರವಿಸಬೇಕು. ಆದರೆ ಹೀಗೆ ಸ್ಮಾರಕವನ್ನು ವಿರೂಪಗೊಳಿಸಿರುವುದು ದುರದೃಷ್ಟಕರ ಎಂದು ಹೇಳಿದ್ದಾರೆ. ಈ ಸ್ಮಾರಕವನ್ನು ಭಾರತೀಯ ಸೇನೆ ಸ್ವಾಧೀನಪಡಿಸಿಕೊಂಡು, ಮುಂದೆ ಈ ರೀತಿ ಆಗದಂತೆ ಕ್ರಮ ಕೈಗೊಳ್ಳಬೇಕು ಎಂದು ಯದುವೀರ್ ಆಗ್ರಹಿಸಿದ್ದಾರೆ.

ಮೈಸೂರು ಸ್ಯಾಂಡಲ್ ಸೋಪ್‌ಗೆ ತಮನ್ನಾ ಭಾಟಿಯಾ ರಾಯಭಾರಿ

ರಾಜ್ಯ ಸರ್ಕಾರದ ನಿರ್ಧಾರಕ್ಕೆ ಯದುವೀರ್ ತೀವ್ರ ವಿರೋಧ

ಕನ್ನಡತನದ ಗಂಧ-ಗಾಳಿ ಗೊತ್ತಿಲ್ಲದ ನಟಿ ಗಂಧದ ಸೋಪಿನ ರಾಯಭಾರಿ; ಆಕ್ರೋಶ

ಮೈಸೂರು, ಮೇ23(ಬಿಎಲ್‌ಯು)– ಕನ್ನಡತನದ ಗಂಧ ಗಾಳಿ ಗೊತ್ತಿಲ್ಲದ ನಟಿ ತಮನ್ನಾ ಭಾಟಿಯಾರನ್ನು ಮೈಸೂರು ಸೋಪ್ಸ್ ಮತ್ತು ಡಿಟರ್ಜೆಂಟ್ಸ್ ಲಿಮಿಟೆಡ್‌ಗೆ ರಾಯಭಾರಿಯನ್ನಾಗಿ ಮಾಡಿರುವುದು ಅಸಂಬದ್ಧ ಮತ್ತು ಬೇಜವಾಬ್ದಾರಿಯುತ ನಿರ್ಧಾರ ಎಂದು ಮೈಸೂರು ಮತ್ತು ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಮೈಸೂರು ಸಂಸ್ಥಾನದ ಅರಸರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1916ರಲ್ಲಿ ಈ ಸಂಸ್ಥೆ ಸ್ಥಾಪಿಸಿದರು. ಮೈಸೂರು ಸ್ಯಾಂಡಲ್ ಸೋಪ್ ದಶಕಗಳಿಂದ ಎಲ್ಲರ ಮನೆಯಲ್ಲಿ ಸ್ಥಾನ ಪಡೆದಿದೆ. ಈ ಸಂಸ್ಥೆಯ ಬಹುತೇಕ ವಸ್ತುಗಳನ್ನು ಬಹಳಷ್ಟು ಜನರು ಬಳಸುತ್ತಿದ್ದಾರೆ ಎಂದು ಹೇಳಿದ್ದಾರೆ.

ಇಂತಹ ಸಂಸ್ಥೆಗೆ ಪರಭಾಷೆ ನಟಿಯನ್ನು ರಾಯಭಾರಿಯಾಗಿ ನೇಮಕ ಮಾಡಿರುವುದು ಹುಚ್ಚುತನವಾಗಿದೆ. ಸಾಲದೆಂಬಂತೆ ಆರು ಕೋಟಿ ರೂಪಾಯಿಗೂ ಹೆಚ್ಚು ಹಣ ನೀಡಲಾಗಿದೆ. ಇದು ರಾಜ್ಯ ಕಾಂಗ್ರೆಸ್ ಸರ್ಕಾರದ ಅವಿವೇಕತನದ ತೀರ್ಮಾನವಾಗಿದೆ ಎಂದು ಯದುವೀರ್ ಟೀಕಿಸಿದ್ದಾರೆ.



ಈ ಸಂಸ್ಥೆಗೆ ರಾಯಭಾರಿಯಾಗಿ ಮಾಡಲೇಬೇಕು ಎಂಬುದು ಸರ್ಕಾರದ ನಿರ್ಧಾರವಾಗಿದ್ದರೆ ಕನ್ನಡದ ಜನಪ್ರಿಯ ಹಾಗೂ ಪ್ರತಿಭಾವಂತ ನಟಿಯನ್ನು ನೇಮಿಸಿಕೊಳ್ಳಬಹುದಿತ್ತು. ಅದು ಬಿಟ್ಟು ಪರಭಾಷಾ ನಟಿಗೆ ಮಣೆ ಹಾಕುವ ಮೂಲಕ ರಾಜ್ಯ ಕಾಂಗ್ರೆಸ್ ಸರ್ಕಾರ ಕನ್ನಡಿಗರ ಭಾವನೆಗೆ ಧಕ್ಕೆ ತಂದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ತಮನ್ನಾ ಭಾಟಿಯಾಗೆ ಕನ್ನಡ ಸಂಸ್ಕೃತಿ, ಭಾಷೆ, ಇತಿಹಾಸದೊಂದಿಗೆ ಯಾವುದೇ ನಂಟು ಇಲ್ಲ. ಕನ್ನಡತನದ ಗಂಧ ಗಾಳಿ ಗೊತ್ತಿಲ್ಲ. ಹೀಗಿರುವಾಗ ಈ ನಟಿಯನ್ನು ನಮ್ಮ ಗಂಧದ ಸೋಪಿನ ಸಂಸ್ಥೆಗೆ ರಾಯ ಭಾರಿ ಮಾಡುವ ಅಗತ್ಯವೇನಿತ್ತು ಎಂದು ಪ್ರಶ್ನಿಸಿದ್ದಾರೆ.

ರಾಜ್ಯ ಸರ್ಕಾರ ಕೂಡಲೇ ಈ ನೇಮಕವನ್ನು ರದ್ದು ಮಾಡಬೇಕು. ಈ ಮೂಲಕ ಕೋಟ್ಯಾಂತರ ರೂಪಾಯಿ ಹಣ ಉಳಿಸಬೇಕು ಎಂದು ಸಲಹೆ ನೀಡಿದ್ದಾರೆ.

ಗ್ಯಾರಂಟಿ ಯೋಜನೆಗಳನ್ನು ಘೋಷಣೆ ಮಾಡಿ ಮಾತು ತಪ್ಪಿರುವ ರಾಜ್ಯ ಸರ್ಕಾರ ಈಗ ಪರಭಾಷೆ ನಟಿಗೆ ಮಣೆ ಹಾಕುವ ತೀರ್ಮಾನದಿಂದ ಹಿಂದೆ ಸರಿಯಬೇಕು ಎಂದು ಯದುವೀರ್ ಆಗ್ರಹಿಸಿದ್ದಾರೆ.

ಕುತೂಹಲ ಮೂಡಿಸುವ ಮೈಸೂರು ಸ್ಯಾಂಡಲ್ ಸೋಪ್ ಇತಿಹಾಸ

20ನೇ ಶತಮಾನದ ಆರಂಭದಲ್ಲಿ ಮೈಸೂರು ಸಾಮ್ರಾಜ್ಯದಲ್ಲಿ ಶ್ರೀಗಂಧದ ಮರವನ್ನು ಹೆಚ್ಚಾಗಿ ಬೆಳೆಸಲಾಗುತ್ತಿತ್ತು. ಇಲ್ಲಿನ ಶ್ರೀಗಂಧ ಹೆಸರುವಾಸಿಯಾಗಿದ್ದು, ಯುರೋಪ್‌ಗೆ ರಫ್ತಾಗುತ್ತಿತ್ತು. ಆದರೆ ಮೊದಲ ಮಹಾಯುದ್ಧದ ಸಮಯದಲ್ಲಿ ಶ್ರೀಗಂಧದ ಮರಗಳನ್ನು ರಫ್ತು ಮಾಡಲು ಸಾಧ್ಯವಾಗಲಿಲ್ಲ. ಹಾಗಾಗಿ ಶ್ರೀಗಂಧದ ಅಪಾರ ನಿಕ್ಷೇಪಗಳು ಇಲ್ಲೇ ಉಳಿದವು.

ಇವುಗಳನ್ನು ಸದುಪಯೋಗಪಡಿಸಿಕೊಳ್ಳಲು 1916ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಬೆಂಗಳೂರಿನಲ್ಲಿ ಸರ್ಕಾರಿ ಸೋಪ್ ಕಾರ್ಖಾನೆಯನ್ನು ಸ್ಥಾಪಿಸಿದರು. ಶ್ರೀಗಂಧದ ಎಣ್ಣೆಯನ್ನು ಮುಖ್ಯ ಘಟಕಾಂಶವಾಗಿ ಬಳಸಿಕೊಂಡು ಮೈಸೂರು ಸ್ಯಾಂಡಲ್ ಸೋಪ್ ಮತ್ತು ಈ ಬ್ರ್ಯಾಂಡ್ ಹೆಸರಿನಲ್ಲಿ ಹಲವು ಸಾಬೂನುಗಳನ್ನು ತಯಾರಿಸಲು ಆರಂಭಿಸಲಾಯಿತು. ಅದೇ ವರ್ಷ ಮೈಸೂರಿನಲ್ಲಿ ಮರದಿಂದ ಶ್ರೀಗಂಧದ ಎಣ್ಣೆ ಭಟ್ಟಿ ಇಳಿಸುವ ಕಾರ್ಖಾನೆಯನ್ನು ಸ್ಥಾಪಿಸಲಾಯಿತು.

ರಾಜಾಧಿಕಾರ ಹೋಗಿ ಪ್ರಜಾಪ್ರಭುತ್ವ ಆಚರಣೆಗೆ ಬಂದ ನಂತರ ರಾಜ್ಯ ಸರ್ಕಾರದ ಮೈಸೂರು ಸೋಪ್ಸ್ ಮತ್ತು ಡಿಟರ್ಜೆಂಟ್ಸ್ ಲಿಮಿಟೆಡ್ ಅಡಿ ಮೈಸೂರು ಸ್ಯಾಂಡಲ್ ಸೋಪ್ ಸೇರಿದಂತೆ ಹಲವು ರೀತಿಯ ಉತ್ಪನ್ನಗಳು ತಯಾರಾಗುತ್ತಿದ್ದು, ವಿಶ್ವ ವಿಖ್ಯಾತಿ ಗಳಿಸಿದೆ

ಐದನೇ ಪುಟದಿಂದ

ಮೈಸೂರು ಜಿಲ್ಲಾಸ್ಪತ್ರೆಯಲ್ಲಿ 'ಡೇ ಕೇರ್ ಕಿಮೋಥೆರಪಿ'

ಶೇ.60ರಷ್ಟು ರೋಗಿಗಳಿಗೆ ಹತ್ತಿರದಲ್ಲೇ ಚಿಕಿತ್ಸೆ ಲಭ್ಯವಾಗಲಿದೆ ಎಂದು ತಿಳಿಸಿದರು.

ಎಲ್ಲರಿಗೂ ವೈದ್ಯಕೀಯ ಸೇವೆ: ಭಾರತದಲ್ಲಿ ನೂರು ಕೋಟಿ ಜನರಿಗೆ ಆಹಾರ ಹಾಗೂ ಔಷಧಿಗೂ ತೊಂದರೆ ಇದೆ. ಆದ್ದರಿಂದಲೇ ಮೊದಲ ಬಾರಿ ಮುಖ್ಯಮಂತ್ರಿಯಾದಾಗ ಬಡವರಿಗೆ ತಲಾ ಐದು ಕೆಜಿ ಅಕ್ಕಿ ವಿತರಣೆ ಆರಂಭಿಸಲಾಯಿತು. ಈ ಬಾರಿ ನಮ್ಮ ಸರ್ಕಾರ ಬಂದಾಗ 10 ಕೆಜಿಗೆ ಹೆಚ್ಚಿಸಲಾಯಿತು. ಹಸಿವು ಮುಕ್ತ ರಾಜ್ಯವಾಗಬೇಕೆಂಬುದು ನಮ್ಮ ಆಶಯ. ಆಹಾರದ ಜೊತೆಗೆ ಶಿಕ್ಷಣ, ವೈದ್ಯಕೀಯ ಸೇವೆ ಎಲ್ಲರಿಗೂ ಸಿಗಬೇಕು. ಇದನ್ನೇ ಬಾಬಾ ಸಾಹೇಬ್ ಡಾ.ಅಂಬೇಡ್ಕರ್ ಅವರು ಹೇಳಿದ್ದಾರೆ. ಸಮಾನತೆ ಬರಬೇಕಾದರೆ ಜಾತಿ ವ್ಯವಸ್ಥೆ ಹೋಗಬೇಕು. ಇದು ಆರ್ಥಿಕ ಹಾಗೂ ಸಾಮಾಜಿಕ ಸಮಾನತೆಯಿಂದ ಮಾತ್ರ ಸಾಧ್ಯ. ಈ ನಿಟ್ಟಿನಲ್ಲಿ ಎಲ್ಲರಿಗೂ ವೈದ್ಯಕೀಯ ಸೇವೆ ಲಭ್ಯವಾಗುವುದು ಬಹಳ ಮುಖ್ಯ ಎಂದರು.

ಹೆಚ್ಚು ತಜ್ಞರು, ಪರಿಣಿತರಿದ್ದಾರೆ: ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಬಹಳ ದುಬಾರಿಯಾಗಿದೆ. 20–50 ಲಕ್ಷ ಬಿಲ್ ಆಗಿದೆ ಎಂದು ನನ್ನ ಬಳಿ ಬರುತ್ತಾರೆ. ಆದರೆ ಸರ್ಕಾರದಿಂದ ಗರಿಷ್ಠ ಐದು ಲಕ್ಷ ರೂ. ನೆರವು ನೀಡಲು ಮಾತ್ರ ಸಾಧ್ಯವಿದೆ. ಖಾಸಗಿ ಆಸ್ಪತ್ರೆಯಲ್ಲಿ ಮಾತ್ರ ಗುಣಮುಖರಾಗುತ್ತೇವೆಂಬ ಭಾವನೆಯಿಂದ ಹೊರಬನ್ನಿ. ನನಗೆ ತಿಳಿದಿರುವಂತೆ ಸರ್ಕಾರಿ ಆಸ್ಪತ್ರೆಗಳಲ್ಲೇ ಹೆಚ್ಚು ತಜ್ಞರು ಹಾಗೂ ಪರಿಣಿತ ವೈದ್ಯರಿದ್ದಾರೆ. ಸರ್ಕಾರಿ ಆಸ್ಪತ್ರೆಗಳಲ್ಲೂ ಉತ್ತಮ ವೈದ್ಯಕೀಯ ಸೇವೆ ಸಿಗಲಿದೆ. ಜಯದೇವ ಆಸ್ಪತ್ರೆ ಯಾವ ಖಾಸಗಿ ಆಸ್ಪತ್ರೆಗಿಂತ ಕಡಿಮೆ ಇದೆ. ಆದ್ದರಿಂದ ಸರ್ಕಾರಿ ಆಸ್ಪತ್ರೆಗಳ ಮುಖ್ಯಸ್ಥರು ಒಳ್ಳೆಯವರಾಗಿದ್ದರೆ ಅಲ್ಲಿ ಒಳ್ಳೆಯ ಕೆಲಸಗಳಾಗುತ್ತವೆ. ಮುಖ್ಯವಾಗಿ ಶುಚಿತ್ವ ನಿರ್ವಹಣೆಗೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಹೊಟ್ಟೆ ಪಾಡಿಗೆ ಟೀಕೆ: ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು ಧರ್ಮಾತೀತ, ಜಾತ್ಯಾತೀತ ಮಾತ್ರವಲ್ಲದೆ ಪಕ್ಷಾತೀತವಾಗಿ ನೇರವಾಗಿ ಫಲಾನುಭವಿಗಳಿಗೆ ಸಿಗುತ್ತಿದೆ. ಬಿಜೆಪಿ, ಜೆಡಿಎಸ್‌ನವರಿಗೂ ಯೋಜನೆಯಿಂದ ಅನುಕೂಲವಾಗಿದೆ. ಬಡವರಿಗೆ ಆರ್ಥಿಕ, ಸಾಮಾಜಿಕ ಶಕ್ತಿ ಬರದಿದ್ದರೆ ಸಮಾನತೆ ಸಮಾಜ ನಿರ್ಮಾಣ ಕಷ್ಟ ಸಾಧ್ಯ. ಈ ನಿಟ್ಟಿನಲ್ಲಿ ನಾವು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ. ಆದರೆ ಕೆಲವರು ಹೊಟ್ಟೆ ಪಾಡಿಗೆ ಟೀಕೆ ಮಾಡುತ್ತಾರೆ, ಅದನ್ನು ನಂಬಬೇಡಿ ಎಂದು ಇದೇ ವೇಳೆ ಹೇಳಿದರು.

ಮನೋಸ್ಥೈರ್ಯ ಬಹಳ ಮುಖ್ಯ: ಕಿಮೋಥೆರಪಿ ಚಿಕಿತ್ಸೆಯಿಂದ ಬಹಳ ವರ್ಷ ಬದುಕಿದವರಿದ್ದಾರೆ. ಆದ್ದರಿಂದ ಕ್ಯಾನ್ಸರ್ ಬಂದಿದೆ ಎಂದು ಧೃತಿಗೆಡಬೇಡಿ. ನನಗೆ ಆಂಜಿಯೋಪ್ಲಾಸ್ಟಿ ಆಗಿ 25 ವರ್ಷ ಆಗಿದೆ. ಅದನ್ನು ಮರೆತೇಬಿಟ್ಟಿದ್ದೇನೆ. ಇನ್ನೂ 25 ವರ್ಷ ಬದುಕಿರುತ್ತೇನೆಂಬ ವಿಶ್ವಾಸವಿದೆ. ನನಗೀಗ 78 ವರ್ಷ, ಆದರೆ ನಾನು ಹಾಗೆ ಕಾಣ್ತೀನಾ? ಏನೇ ಆಗಲಿ ಮನೋಸ್ಥೈರ್ಯ ಕಳೆದುಕೊಳ್ಳಬಾರದು. ಆದರೆ ಎಲ್ಲರೂ ಆರೋಗ್ಯದ ಬಗ್ಗೆ ಜಾಗೃತರಾಗಿಬೇಕು. ವರ್ಷಕ್ಕೊಮ್ಮೆ ಮಾಸ್ಟರ್ ಹೆಲ್ತ್ ಚೆಕ್‌ಅಪ್ ಮಾಡಿಸಿಕೊಳ್ಳಬೇಕು. ಆರೋಗ್ಯ ಜಾಗೃತಿ ಇಲ್ಲವಾದರೆ ಗುಣಮಟ್ಟದ ಜೀವನ ಸಾಧ್ಯವಾಗುವುದಿಲ್ಲ. ಆಗ ದೇಶದ ಅಭಿವೃದ್ಧಿಗೆ ನಿಮ್ಮ ಪಾತ್ರ ಕಡಿಮೆಯಾಗುತ್ತದೆ ಎಂದು ಕಿವಿಮಾತು ಹೇಳಿದರು.

ಎಂಓಯು ಹಸ್ತಾಂತರ: ಇದೇ ವೇಳೆ ಮೈಸೂರಿನ ಡೇ ಕೇರ್ ಕಿಮೋಥೆರಪಿ ಚಿಕಿತ್ಸಾ ಕೇಂದ್ರದ ಸಂಬಂಧ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ ಹಾಗೂ ಕಿದ್ವಾಯಿ ಸಂಸ್ಥೆ ಅಧಿಕಾರಿಗಳು ಪರಸ್ಪರ ಒಪ್ಪಂದ ಪತ್ರ ಹಸ್ತಾಂತರಿಸಿಕೊಂಡರು. ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಡಾ.ಯತೀಂದ್ರ ಸಿದ್ದರಾಮಯ್ಯ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕ ಡಾ.ನವೀನ್ ಭಟ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಮತ್ತಿತರರು ಉಪಸ್ಥಿತರಿದ್ದರು.

56 ಇಂಚಿನ ಎದೆಯಲ್ಲ, ಮಾತೃ ಹೃದಯ ಬೇಕು

"ಒಬ್ಬರಿಗೆ ಕ್ಯಾನ್ಸರ್ ಬಂದರೆ ಇಡೀ ಕುಟುಂಬ ಸಂಕಟ ಹಾಗೂ ಸಂಕಷ್ಟಕ್ಕೆ ಒಳಗಾಗುತ್ತದೆ. ಚಿಕಿತ್ಸೆಗೆ ಬೆಂಗಳೂರಿನ ಕಿದ್ವಾಯಿ ಸಂಸ್ಥೆಗೆ ಹೋಗಿ ಬರಲು ಹಣ, ಸಮಯ ಹಾಗೂ ಸಹಾಯಕರು ಬೇಕು. ಇದೆಲ್ಲಾ ಹೊಂದಿಕೆಯಾಗದೆ ಎಷ್ಟೋ ಮಂದಿ ಕಿಮೋಥೆರಪಿಯನ್ನೇ ತೆಗೆದುಕೊಳ್ಳುತ್ತಿರಲಿಲ್ಲ. ಆದ್ದರಿಂದ ಜಿಲ್ಲಾಸ್ಪತ್ರೆಗಳಲ್ಲಿ ಕಿಮೋಥೆರಪಿ ಸೇವೆ ನೀಡಲು ಕಳೆದ ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿತ್ತಾದರೂ ತಾಂತ್ರಿಕ ಕಾರಣಗಳಿಂದ ವಿಳಂಬವಾಗಿ ಅನುಷ್ಠಾನವಾಗಿದೆ. ಮಹಾತ್ಮ ಗಾಂಧಿಯವರು ಹೇಳಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಡವರ ಕಣ್ಣೀರು ಒರೆಸುತ್ತಿದ್ದಾರೆ. ಸಾವಿರಾರು ಕೋಟಿ ಯೋಜನೆಗಳನ್ನು ನೀಡಿದ್ದಾರೆ. ಇದಕ್ಕೆ 56 ಇಂಚಿನ ಎದೆಯಲ್ಲ, ದೊಡ್ಡ ಮಾನವೀಯತೆಯ ಹೃದಯಬೇಕು.

-ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಆರೋಗ್ಯ, ಶಿಕ್ಷಣಕ್ಕೆ ಅಪಾರ ಕೊಡುಗೆ

"ಮೈಸೂರು ಸೇರಿದಂತೆ 16 ಜಿಲ್ಲಾ ಆಸ್ಪತ್ರೆಗಳಲ್ಲಿ ಕಿಮೋಥೆರಪಿ ಸೇವೆ ಕಲ್ಪಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಇನ್ನೂ ಹೆಚ್ಚಿನ ಶಕ್ತಿ ದೊರಕಲಿ. ಶೀಘ್ರದಲ್ಲೇ ಮೈಸೂರಲ್ಲಿ ನಿಮ್ಹಾನ್ಸ್ ಘಟಕವೂ ಆಗಲಿದೆ. ಎಲ್ಲಾ ವೈದ್ಯಕೀಯ ಸೇವೆಗಳ ವಿಭಾಗವನ್ನೂ ಮೈಸೂರಿಗೆ ನೀಡಿದ ಕೀರ್ತಿ ಸಿದ್ದರಾಮಯ್ಯ ಅವರಿಗೆ ಸಲ್ಲುತ್ತದೆ. ವೈದ್ಯಕೀಯ ಸೇವೆ ಜೊತೆಗೆ ಶಿಕ್ಷಣಕ್ಕೂ ಆದ್ಯತೆ ನೀಡಿದ್ದಾರೆ. ಮಹಾರಾಣಿ ಕಾಲೇಜು ಹಾಸ್ಟೆಲ್‌ನಲ್ಲಿ 300 ಜನರಿಗೆ ಮಾತ್ರ ಅವಕಾಶವಿತ್ತು. ಈ ಅವಧಿಯಲ್ಲಿ 2900 ಮಕ್ಕಳಿಗೆ ವಿದ್ಯಾರ್ಥಿ ನಿಲಯ ಕಲ್ಪಿಸಿಕೊಟ್ಟರು. ಕಿದ್ವಾಯಿ ಘಟಕದ ಕಟ್ಟಡ ಮುಕ್ತಾಯದ ಹಂತದಲ್ಲಿದ್ದು ಮೂರ್ನಾಲ್ಕು ತಿಂಗಳಲ್ಲಿ ಉದ್ಘಾಟನೆಗೆ ಸಿದ್ಧವಾಗಲಿದೆ. ನನ್ನ ಕ್ಷೇತ್ರವು ಹೆಲ್ತ್ ಅಂಡ್ ಎಜುಕೇಷನ್ ಹಬ್ ಆಗಿದೆ. ಇದಕ್ಕೆ ಕಾರಣರಾದ ಸಿದ್ದರಾಮಯ್ಯನವರು ಶಾಶ್ವತ ಮುಖ್ಯಮಂತ್ರಿಯಾಗಿರಲಿ ಎಂಬುದು ನಮ್ಮ ಆಶಯ.

-ಕೆ.ಹರೀಶ್‌ಗೌಡ, ಶಾಸಕ ಚಾಮರಾಜ ಕ್ಷೇತ್ರ

ರಾಜ್ಯದ 16 ಜಿಲ್ಲಾಸ್ಪತ್ರೆಗಳಲ್ಲಿ ಕೇಂದ್ರ

ಕಿದ್ವಾಯಿ ಸಂಸ್ಥೆ ಸಹಯೋಗದಲ್ಲಿ ಮೈಸೂರು ಜಿಲ್ಲಾಸ್ಪತ್ರೆಯಲ್ಲಿ 20 ಹಾಸಿಗೆ ಸಾಮರ್ಥ್ಯದ ಹಾಗೂ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ವಿಜಯಪುರ, ಉಡುಪಿ, ಬಳ್ಳಾರಿ, ಧಾರವಾಡ, ಚಿತ್ರದುರ್ಗ, ವಿಜಯನಗರ, ಹಾವೇರಿ, ಬೆಂಗಳೂರು ಗ್ರಾಮಾಂತರ, ರಾಮನಗರ, ಬೆಂಗಳೂರು ನಗರ, ದಕ್ಷಿಣ ಕನ್ನಡ, ದಾವಣಗೆರೆ, ತುಮಕೂರು, ಕೋಲಾರ ಹಾಗೂ ಬಾಗಲಕೋಟೆ ಜಿಲ್ಲಾ ಆಸ್ಪತ್ರೆಗಳಲ್ಲಿ 10 ಹಾಸಿಗೆ ಸಾಮರ್ಥ್ಯದ 'ಡೇ ಕೇರ್ ಕಿಮೋಥೆರಪಿ ಚಿಕಿತ್ಸಾ ಕೇಂದ್ರ'ಗಳು ಇಂದಿನಿಂದ ಸೇವೆ ಆರಂಭಿಸಿವೆ.

ಜನೌಷಧ ಕೇಂದ್ರಗಳಲ್ಲಿ ಬೆಲೆ ಕಡಿಮೆ ಎಂದರು ಸಿಎಂ

ರಾಜ್ಯದ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿರುವ ಜನೌಷಧಿ ಕೇಂದ್ರಗಳನ್ನು ಮುಚ್ಚಲು ಸರ್ಕಾರ ಸೂಚನೆ ನೀಡಿರುವುದು ಚರ್ಚೆಗೆ ಗ್ರಾಸವಾಗಿದೆ. ಆದರೆ ಇಂದು ಮೈಸೂರಲ್ಲಿ ಡೇ ಕೇರ್ ಕಿಮೋಥೆರಪಿ ಕೇಂದ್ರ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಕ್ಯಾನ್ಸರ್‌ಗೆ ಈಗ ಹೊಸ ಹೊಸ ಔಷಧಿಗಳು ಬಂದಿವೆ. ವಾಸಿ ಮಾಡುವ ಔಷಧಿಗಳೂ ಬರುತ್ತಿವೆ ಎಂದು ವೈದ್ಯರು ಹೇಳಿದರು. ಆದರೆ ಆ ಔಷಧಗಳೆಲ್ಲಾ ದುಬಾರಿ. ಜನೌಷಧ ಕೇಂದ್ರಗಳಲ್ಲಿ ಕಡಿಮೆ. ಒಂದು ಲಕ್ಷ ಬೆಲೆಯ ಔಷಧಿ 10 ಸಾವಿರಕ್ಕೆ ಸಿಗುತ್ತದೆ ಎಂದರು. ಆದರೆ ಆ ಬಗ್ಗೆ ಮಾತು ಮುಂದುವರೆಸಲಿಲ್ಲ.

ಪರಮೇಶ್ವರ್‌ಗೆ ಸಂಕಷ್ಟ!

ಈ ವಿಷಯ ಗೊತ್ತಿಲ್ಲವೇ, ಆ ಮಹಿಳೆ ವಿಮಾನ ನಿಲ್ದಾಣದ ಮೂಲಕ ಚಿನ್ನ ತರುತ್ತಿರುವ ಮಾಹಿತಿ ಕೊಟ್ಟಿದ್ದೇ ಈ ಪ್ರಭಾವಿ ನಾಯಕ. ನಟಿ ರನ್ಯಾ ರಾವ್ ಚಿನ್ನ ಕಳ್ಳಸಾಗಣೆ ಮಾಡುವ ಮಾಹಿತಿಯನ್ನು ಸಂಬಂಧಪಟ್ಟ ಇಲಾಖೆಗೆ ನೀಡಿ ಪರೋಕ್ಷವಾಗಿ ಡಾ.ಪರಮೇಶ್ವರ್ ಅವರನ್ನು ಇಕ್ಕಟ್ಟಿಗೆ ಸಿಲುಕಿಸಿದರು. ದಲಿತ ನಾಯಕರನ್ನು ಮುಗಿಸಲು ಕುತಂತ್ರ ಮಾಡುತ್ತಿರುವ ಮಹಾನಾಯಕನೇ ಡಾ.ಪರಮೇಶ್ವರ್ ಅವರನ್ನು ರಾಜಕೀಯವಾಗಿ ಮುಗಿಸಲು ಹೊರಟಿದ್ದಾರೆ. ದಲಿತ, ಹಿಂದುಳಿದ ವರ್ಗದ ನಾಯಕರನ್ನು ಗುರಿಯಾಗಿಸಿಕೊಂಡು ಜಾರಿ ನಿರ್ದೇಶನಾಲಯ ದಾಳಿ ನಡೆಸಿದೆ ಎಂಬುದಾಗಿ ಕಾಂಗ್ರೆಸ್ ನಾಯಕ ಬಿ.ಕೆ.ಹರಿಪ್ರಸಾದ್ ನೀಡಿರುವ ಹೇಳಿಕೆ ಗಮನಿಸಿದ್ದೇನೆ, ಡಾ.ಪರಮೇಶ್ವರ್ ಇಂಥ ಸಂಕಷ್ಟಕ್ಕೆ ಒಳಗಾಗಲು ಕಾಂಗ್ರೆಸ್ ಪಕ್ಷದ ಆ ಪ್ರಭಾವೀ ನಾಯಕನೇ ಕಾರಣ ಎಂದು ನೇರ ಆರೋಪ ಮಾಡಿದರು.

ರಾಜ್ಯದಲ್ಲಿ ಏನಾಗುತ್ತಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ, ಮೇಲಾಗಿ ಕಾಂಗ್ರೆಸ್‌ನಲ್ಲಿ ಯಾರು ಯಾರಿಗೆ ಗುನ್ನ ಹೊಡೆಯುತ್ತಿದ್ದಾರೆ ಎನ್ನುವ ಮಾಹಿತಿ ಎಲ್ಲರಿಗೂ ತಿಳಿದಿದೆ. ರಾಜ್ಯ ಕಾಂಗ್ರೆಸ್‌ನಲ್ಲಿ ಇಷ್ಟೆಲ್ಲಾ ರಾಜಕೀಯ ಮೇಲಾಟ ನಡೆಯುತ್ತಿದ್ದರೂ, ಕೇಂದ್ರ ಸರ್ಕಾರದ ಕಡೆ ಬೆರಳು ತೋರಿಸುವ ವ್ಯರ್ಥ ಪ್ರಯತ್ನ ನಡೆಯುತ್ತಿದೆ. ಕಾಂಗ್ರೆಸ್ ಪಕ್ಷದ ಪ್ರಭಾವೀ ನಾಯಕನಿಂದಲೇ ಇದೆಲ್ಲಾ ನಡೆದಿದೆ. ಅದೆಷ್ಟೋ ಎಸ್‌ಐಟಿ, ಕಮಿಟಿ, ಸಮಿತಿ ಎಲ್ಲಾ ಮಾಡಿದ್ದೀರಲ್ಲ ಅವೆಲ್ಲಾ ಏನಾದವು? ಬಾಯಿ ಬಿಟ್ಟರೆ ನುಡಿದಂತೆ ನಡೆದಿದ್ದೇವೆ ಎನ್ನುತ್ತಾರೆ. ಆದರೆ, ನುಡಿದಂತೆ ನಡೆಯಲು ಎಷ್ಟು ತೆರಿಗೆ ಹಾಕಿದ್ದಾರೆ ಎಂದು ಪ್ರಶ್ನಿಸಿದರು.

ಕೇಂದ್ರ ಗೃಹ ಸಚಿವ ಪ್ರಹ್ಲಾದ್ ಜೋಷಿ ನಿನ್ನೆಯಷ್ಟೇ, ದಲಿತ ನಾಯಕ ಡಾ. ಪರಮೇಶ್ವರ್ ವಿರುದ್ಧ ಇ.ಡಿ.ಗೆ ದಾಖಲೆ ಸಹಿತ ದೂರು ನೀಡಿ ಅವರನ್ನು ರಾಜ್ಯ ಕಾಂಗ್ರೆಸ್ ಮುಖಂಡರೇ ಸಂಕಷ್ಟಕ್ಕೆ ಸಿಲುಕಿಸಿದ್ದಾರೆಂದು ಆರೋಪಿಸಿದ ಬೆನ್ನಲ್ಲೇ ಕುಮಾರಸ್ವಾಮಿ ಈ ಮಾಹಿತಿಯನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ.

ಮೈಸೂರು ಅಭಿವೃದ್ಧಿ ಪ್ರಾಧಿಕಾರ ಅಸ್ತಿತ್ವಕ್ಕೆ

ನೀಡಿದ ನಂತರ ಮೈಸೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆಯ ಕಲಂ 85(1) ರನ್ವಯ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವನ್ನು ವಿಘಟಿತಗೊಳಿಸಲಾಗಿದೆ ಎಂದು ಲತಾ ಆದೇಶದಲ್ಲಿ ತಿಳಿಸಿದ್ದಾರೆ. ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆಯಾಗಿದ್ದಂತೆ ಇಂದು ಸರ್ಕಾರ ಪ್ರತ್ಯೇಕ ಆದೇಶ ಹೊರಡಿಸಿ, ಇಂದಿನಿಂದಲೇ 'ಮೈಸೂರು ಅಭಿವೃದ್ಧಿ ಪ್ರಾಧಿಕಾರ' ಚಾಲ್ತಿಗೆ ಬಂದಿದ್ದು, ನಾಮಫಲಕ, ಲೆಟರ್‌ಹೆಡ್‌ಗಳನ್ನು ಬದಲಾದ ಹೆಸರಿನಂತೆ ನಮೂದಿಸಬೇಕೆಂದು ತಿಳಿಸಿದ್ದಾರೆ. ಸಚಿವ ಸಂಪುಟ ಸಭೆಯ ವಿಷಯ ಸಂಖ್ಯೆ: ಸಿ. 398/2025ರಲ್ಲಿ ಮೈಸೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ 2024 ಅನ್ನು 2025ರ ಮೇ 23ರಿಂದ ಜಾರಿಗೆ ತರಲು ಹಾಗೂ ಆ ಕಾಯ್ದೆಯ ಕಲಂ 85(1) ರನ್ವಯ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವನ್ನು ವಿಘಟಿತಗೊಳಿಸಲು ಅನುಮೋದನೆ ನೀಡಿರುವುದರನ್ವಯ ಲತಾ ಈ ಆದೇಶ ಹೊರಡಿಸಿದ್ದಾರೆ. ಆದೇಶ ಪ್ರತಿ ಕೈ ಸೇರುತ್ತಿದ್ದಂತೆಯೇ ಎಂಡಿಎ ಆಯುಕ್ತ ಎ.ಎನ್. ರಘುನಂದನ್ ಹಾಗೂ ಕಾರ್ಯದರ್ಶಿ ಪಿ.ಜಿ. ಪ್ರಸನ್ನಕುಮಾರ್ ಇಂದು ಸಂಜೆ 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ' ಹೆಸರನ್ನು 'ಮೈಸೂರು ಅಭಿವೃದ್ಧಿ ಪ್ರಾಧಿಕಾರ' ಎಂದು ಬದಲಿಸಿ, ನಾಮಫಲಕವನ್ನು ಅಳವಡಿಸಿದ್ದು, ಟೆಂಡರ್ ಕರೆದು ಖಾಯಂ ಫಲಕವನ್ನು ಅಳವಡಿಸಲಾಗುವುದು ಎಂದು ತಿಳಿಸಿದ್ದಾರೆ.

ಇಂದು ಸಿಇಟಿ ಫಲಿತಾಂಶ

ಪರೀಕ್ಷೆ ನಡೆಸಲಾಗಿತ್ತು. ಅವರಲ್ಲಿ ಹೆಚ್ಚಿನವರು ಕೇರಳದ ವಿದ್ಯಾರ್ಥಿಗಳು. ಈ ವಿದ್ಯಾರ್ಥಿಗಳ ಪಿಯು ಫಲಿತಾಂಶವನ್ನು ಕೇರಳ ಪದವಿಪೂರ್ವ ಶಿಕ್ಷಣ ಇಲಾಖೆ ಇದೇ ಮೇ 21ರಂದು ಪ್ರಕಟಿಸಿದೆ. ಮೇ 23ರಂದು ಸಿಇಟಿ ಫಲಿತಾಂಶ ಪ್ರಕಟಿಸಲು ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಕೆಲ ತಾಂತ್ರಿಕ ಕಾರಣಗಳಿಂದ ಒಂದು ದಿನ ಮುಂದೂಡಲಾಗಿದ್ದು, ಮೇ 24ರಂದು ಮಧ್ಯಾಹ್ನದ ಒಳಗೆ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಫಲಿತಾಂಶ ಪ್ರಕಟಿಸಲಾಗುವುದು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಮಾಹಿತಿ ನೀಡಿದ್ದಾರೆ. ಅಧಿಕೃತ ವೆಬ್‌ಸೈಟ್: https://cetonline.Karnataka.gov.in/ugcetrank2025/checkresult. ಹಾಗೂ https://karresults.nic.in

ಸಮಗ್ರ ಸಮೀಕ್ಷೆಯ ಅವಧಿ ಮತ್ತೆ ವಿಸ್ತರಣೆ

ಪೂರ್ಣಗೊಳಿಸಲು ಅನುವಾಗುವಂತೆ ದಿನಾಂಕವನ್ನು ವಿಸ್ತರಿಸಲು ನಿರ್ಣಯಿಸಲಾಗಿದೆ. ಮನೆ–ಮನೆ ಭೇಟಿ ನೀಡಿ, ಸಮೀಕ್ಷೆಯು ಮೇ 26ರಿಂದ ಮೇ 29ರವರೆಗೆ ವಿಸ್ತರಿಸಲಾಗಿದೆ. ವಿಶೇಷ ಶಿಬಿರವನ್ನು (ಸಮೀಕ್ಷಾ ಬ್ಲಾಕ್ ವ್ಯಾಪ್ತಿಯಲ್ಲಿ) 3 ದಿನಗಳ ಕಾಲ ಮೇ 30, 31 ಹಾಗೂ ಜೂನ್ 1ರವರೆಗೆ ಮರುನಿಗದಿಪಡಿಸಲಾಗಿದೆ ಮತ್ತು ಆನ್‌ಲೈನ್ ಮೂಲಕ ಸ್ವಯಂ ಘೋಷಣೆ ದಿನಾಂಕವನ್ನು ಜೂನ್ 1ರವರೆಗೆ ಮುಂದುವರೆಯಲಿದೆ ಎಂದು ಏಕಸದಸ್ಯ ಆಯೋಗದ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅತಿಥಿ ಶಿಕ್ಷಕರ ನೇಮಕಕ್ಕೆ ಸರ್ಕಾರ ಆದೇಶ

ದಿನದಿಂದಲೇ ಗುಣಮಟ್ಟದ ಶಿಕ್ಷಣ ಎಲ್ಲರಿಗೂ ಲಭ್ಯವಾಗಬೇಕೆಂಬುದು ನಮ್ಮ ಆದ್ಯತೆ. ನೇಮಕಾತಿಗೆ ಹಣಕಾಸು ಇಲಾಖೆ ಅನುಮತಿ ನೀಡಿದ್ದು, ಅತಿಥಿ ಶಿಕ್ಷಕರಿಗೆ ನೀಡುವ ಗೌರವಧನ ಪಾವತಿಗಾಗಿ ಅವಶ್ಯವಿರುವ ಅನುದಾನ ಹಾಗೂ ಮತ್ತಿತರ ವಿವರ ಸಲ್ಲಿಸುವಂತೆ ಜಿಲ್ಲಾ ಶಿಕ್ಷಣಾಧಿಕಾರಿಗಳಿಗೆ ಆದೇಶ ಮಾಡಲಾಗಿದೆ. ಪ್ರಸಕ್ತ ಶೈಕ್ಷಣಿಕ ಸಾಲಿಗೆ ಖಾಲಿಯಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶಿಕ್ಷಕರುಗಳ ಹುದ್ದೆಗಳಿಗೆ ಅತಿಥಿ ಶಿಕ್ಷಕರುಗಳನ್ನು ತಾತ್ಕಾಲಿಕವಾಗಿ ನೇರ ನೇಮಕಾತಿ ಮಾಡಿಕೊಳ್ಳಲಾಗುತ್ತಿದ್ದು, ಈ ಹುದ್ದೆಗಳಿಗೆ ಖಾಯಂ ಶಿಕ್ಷಕರ ಭರ್ತಿ ಅಥವಾ ಶೈಕ್ಷಣಿಕ ವರ್ಷಾಂತ್ಯದವರೆಗೆ ಎಂಬ ಷರತ್ತಿನೊಂದಿಗೆ ಅತಿಥಿ ಶಿಕ್ಷಕರ ತಾತ್ಕಾಲಿಕ ನೇಮಕಾತಿಗೆ ಸರ್ಕಾರ ಮಂಜೂರಾತಿ ನೀಡಿದೆ.

VILLA PLOTS FOR SALE
MUDA APPROVED
READY FOR REGISTRATION
30x40, 30x50
- Near St. Joseph School, Hunsur Road
- Behind Infosys & BEML
- Kumarabeedu, Bogadi Gaddige Road

For Site Visit Call Now
MCIL www.mcil.in
88614 40528
97314 00249

HOUSE FOR SALE
DUPLEX HOUSE IN SARASWATHIPURAM
-: Built up area :-
Total 1886 Sq. Ft.
Ground floor 1200 Sq. Ft.
First floor 636 Sq. Ft.
8105295640

ಸೈಟ್ ಮಾರಾಟಕ್ಕಿದೆ
ಮುಡಾ ಅನುಮೋದಿತ
ಮೈಸೂರು ಟಿ. ನರಸೀಪುರ ಮುಖ್ಯ ರಸ್ತೆ, (ಮೈಸೂರು ಸಿಟಿ ಕಾರ್ಪೋರೇಷನ್ ಎಂಪ್ಲಾಯಿಸ್ ಹೌಸ್ ಬಿಲ್ಡಿಂಗ್ ಸೊಸೈಟಿ) ಪ್ರಕೃತಿ ಲೇಔಟ್‌ನಲ್ಲಿ ಪೂರ್ವ ದಿಕ್ಕು 40x60 ಅಳತೆಯ ನಿವೇಶನ ಮಾರಾಟಕ್ಕಿದೆ
Ph: 63629 13936

G9 projects
Designing your Dreams
Secure Your Slice of Mysore – Heritage City Plots Available Now
HERITAGE CITY
20x30
30x40
MUDA Approved
Marketed by Vee2 Developers
RingRoad, Uttanahalli Mysuru
8088707707

ರತ್ನ ಪ್ಯಾರ ಮೆಡಿಕಲ್ ಕಾಲೇಜು
ಕುವೆಂಪುನಗರ, ಮೈಸೂರು
ADMISSION OPEN
- Bachelor's in Medical Lab technology
- Bachelor's in cardiac care Technology, OT, Dialysis & X-Ray
- Diploma in Medical Lab Technology
- B.Com (Digital Marketing)
- Direct PUC (Science, Commerce & Arts)

SSLC/PUC Pass/Fail
9886654463

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್
ಗಾಯತ್ರಿ ಪುರಂ 8 Hrs
ಮೇಟಗಳ್ಳಿ 12 Hrs
ಸಂಪರ್ಕಿಸಿ: ತಲವಾರ್ ಸೆಕ್ಯೂರಿಟಿ ಸರ್ವೀಸಸ್
9741552969 / 8494934335

ನೇರ II ಪಿಯುಸಿ!!
I ಪಿಯುಸಿ ಪಾಸಾಗಿಲ್ಲವೇ?/ I ಪಿಯುಸಿ ಓದಿಲ್ಲವೇ? ಚಿಂತೆ ಬಿಡಿ. ನಮ್ಮ ನೇರ II ಪಿಯುಸಿ ಕೋರ್ಸ್‌ಗೆ ಸೇರಿಕೊಳ್ಳಿ. ನಾವು ಉತ್ತಮ ಕೋಚಿಂಗ್ ಜೊತೆ ಮುದ್ರಿತ ನೋಟ್ಸ್ ನೀಡಿ II ಪಿಯುಸಿಗೆ ಉತ್ತಮವಾಗಿ ಅಣಿಗೊಳಿಸುತ್ತೇವೆ. 2004 ರಿಂದ ಉತ್ತಮ ಫಲಿತಾಂಶ.ಆಫ್ಲೈನ್ ಹಾಗೂ ಆನ್ಲೈನ್ ತರಗತಿಗಳು ಲಭ್ಯ. ಜ್ಞಾನ ವರ್ಧಿನಿ ಸೆಂಟರ್.
9844355941, 9482674031
www.direct2puc.com

ಹಸಿರು ನಮ್ಮ ಉಸಿರು

ರೊಟ್ಟಿಮನೆ
ಕುವೆಂಪುನಗರದಲ್ಲಿ ಬಿಸಿ ಜೋಳದ ರೊಟ್ಟಿ ಮತ್ತು ಚಪಾತಿ ಎಣ್ಣಾಗಾಯಿ ಪಲ್ಯ ಆರ್ಡರ್ ಮಾಡಿ ಈಗ Zomato & Swiggy ಯಲ್ಲಿ
7204404170

SITE FOR SALE
40'x60' - S/F
@ Brahmins Layout
'B' Block, Mysuru
Mob: 99004 66811
99802 70076
Brokers Excuse

WANTED
Telecallers
10 Post
PUC Qualification
Females Only. Contact
9886654463

WE KREATE PROPERTIES
SITE FOR SALE
Premium Residential Plots for SALE behind Chamundi hill within ring road
Dimensions
30x40 / 30x50
For Site Visit & Details Call
9844 0090 49
Office: #658, 3rd Floor, Vishwamanava Double Road, Saraswathipuram, Mysuru-09

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಇಂದಿನಿಂದ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್‌ನಲ್ಲಿ ಮಾತ್ರ
ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ಮತ್ತು ಶೂಸ್
ಸರಪ್ಲಸ್ ಫ್ಯಾಕ್ಟರಿ ಸೆಕೆಂಡ್ಸ್ ಸೇಲ್ ಕೆಲವೇ ದಿನಗಳು ಮಾತ್ರ
ಪುರುಷರ ಮತ್ತು ಮಹಿಳೆಯರ ಸಹಸ್ರಾರು ಬಗೆಯ ಬ್ರಾಂಡೆಡ್ ಸಿದ್ಧ ಉಡುಪುಗಳು, ಸೀರೆಗಳು, ಶಾರ್ಟ್ಸ್, ಟಿ–ಶರ್ಟ್ಸ್, ವೆಸ್ಟರ್ನ್ ಟಾಪ್ಸ್, ಟ್ರ್ಯಾಕ್ ಪ್ಯಾಂಟ್, ಪಾಲಜ಼ೋ, ಬಾಟಮ್ಸ್, ಕುರ್ತೀ, ಜೀನ್ಸ್, ಶರ್ಟ್, ಜಾಕೆಟ್ಸ್, ಜಿಪ್ಪರ್, ವುಡ್ಡೀಸ್, ಸ್ವೆಟ್‌ಶರ್ಟ್ ಇನ್ನೂ ಹಲವಾರು ಉಡುಪುಗಳು

ಬ್ರಾಂಡೆಡ್ ಶೂಸ್‌ಗಳ ಭಾರಿ ರಿಯಾಯಿತಿ ಮಾರಾಟ
Lee Cooper SKECHERS PUMA campus asics new balance WOODLAND — ಇಂದು ಕೇವಲ 1000/- ರೂ. ಮಾತ್ರ

ಪುರುಷರ ಉಡುಪುಗಳ ಭಾರಿ ರಿಯಾಯಿತಿ ಮಾರಾಟ

ಡೆನಿಮ್ ಪ್ಯಾಂಟ್ 450/-	ಜಾಕೆಟ್ 700/-	ಟ್ರ್ಯಾಕ್ ಪ್ಯಾಂಟ್ 450/-
ಶರ್ಟ್ಸ್ 400/-	ಸ್ವೆಟ್ ಶರ್ಟ್ 400/-	ರೌಂಡ್‌ನೆಕ್ ಟಿ–ಶರ್ಟ್ಸ್ 200/-

ಸ್ಪೆಷಲ್ ಕೌಂಟರ್‌ನಲ್ಲಿ ಎಲ್ಲಾ ತರಹದ ಪ್ರೀಮಿಯಂ ಬ್ರಾಂಡೆಡ್ ಜೀನ್ಸ್, ಶರ್ಟ್ಸ್, ರೌಂಡ್‌ನೆಕ್ ಟಿಶರ್ಟ್ಸ್, ಕಾಲರ್ ಟಿಶರ್ಟ್ಸ್, ಕಾಟನ್ ಪ್ಯಾಂಟ್, ಫಾರ್ಮಲ್ ಪ್ಯಾಂಟ್ಸ್
ರೂ. 350/- ರಿಂದ 1,100/- ರೂ. ಮಾತ್ರ

ಮಹಿಳೆಯರ ಮತ್ತು ಮಕ್ಕಳ ಉಡುಪುಗಳ ಭಾರಿ ರಿಯಾಯಿತಿ ಮಾರಾಟ


ಕುರ್ತೀಸ್ 250/-	ಆಲ್ ಬಾಟಮ್ಸ್ 250/-	ವೆಸ್ಟರ್ನ್ ಟಾಪ್ಸ್ 150/-

ಮಕ್ಕಳ ಉಡುಪುಗಳು ರೂ. 100/- ರಿಂದ	ಬ್ರಾಂಡೆಡ್ ಪುರುಷರ ಟ್ರಂಕ್ಸ್ ರೂ. 150/-

ಮಹಿಳೆಯರ ಪ್ಯಾಂಟಿ ರೂ. 100/- ಮಾತ್ರ	ಕೆಮಿಸೋಲ್ Rs. 150/-	ಬ್ರಾಂಡೆಡ್ ಬ್ರಾ Rs. 200/-

ಸ್ಥಳ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್
ಜೆಎಲ್‌ಬಿ ರಸ್ತೆ, ಮುಡಾ ಕಛೇರಿ ಪಕ್ಕ, ಮೈಸೂರು
ಎಲ್ಲ ಪ್ರಮುಖ ಡೆಬಿಟ್/ಕ್ರೆಡಿಟ್ ಕಾರ್ಡ್‌ಗಳು, ಆನ್‌ಲೈನ್ ಪಾವತಿಗಳನ್ನು ಸ್ವೀಕರಿಸಲಾಗುವುದು | ಸಮಯ : ಬೆ.10 ರಿಂದ ರಾತ್ರಿ 10ರವರೆಗೆ ಸಂಪರ್ಕ : 8747869888 | ಉಚಿತ ಪ್ರವೇಶ & ಪಾರ್ಕಿಂಗ್

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಶಿವರಾಮು

ಇವರು ದಿನಾಂಕ 14.05.2025 ಬುಧವಾರ ದೈವಾದೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 24.05.2025 ಶನಿವಾರ ಬೆಳಗ್ಗೆ 11 ಗಂಟೆಗೆ ಮೃತರ ಸ್ವಗೃಹ ಶ್ರೀರಂಗಪಟ್ಟಣ ತಾಲ್ಲೂಕು, ಪಿ ಹೊಸಹಳ್ಳಿ ಗ್ರಾಮದಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ನೀಡಬೇಕಾಗಿ ವಿನಂತಿ.

ದುಃಖತಪ್ತರು: ಮೃತರ ಪತ್ನಿ ಶ್ರೀಮತಿ ಯಶೋಧ , ಶ್ರೀಮತಿ ಕುಮುದ ಮತ್ತು ಶ್ರೀ ಮಹದೇವಪ್ರಸಾದ್, ಶ್ರೀಮತಿ ಪವಿತ್ರ ಮತ್ತು ಶ್ರೀ ಚಂದ್ರಶೇಖರ, ಶ್ರೀಮತಿ ಅಪೂರ್ವ ಮತ್ತು ಶ್ರೀ ಚಲುವರಾಜು, ಅಕ್ಕ–ತಂಗಿಯರು, ತಮ್ಮಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

